सत्यमेव जयते

# ಭಾರತದ ಲೆಕ್ಕನಿಯಂತ್ರಕರು
# ಮತ್ತು
# ಮಹಾಲೆಕ್ಕಪರಿಶೋಧಕರ ವರದಿ

## ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 ರ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

SUPREME AUDIT INSTITUTION OF INDIA

लोकहितार्थ सत्यनिष्ठा

Dedicated to Truth in Public Interest

ಕರ್ನಾಟಕ ಸರ್ಕಾರ

2024 ನೇ ವರ್ಷದ ವರದಿ ಸಂಖ್ಯೆ - 02

# ಭಾರತದ ಲೆಕ್ಕನಿಯಂತ್ರಕರು
# ಮತ್ತು
# ಮಹಾಲೆಕ್ಕಪರಿಶೋಧಕರ ವರದಿ

## ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

**ಕರ್ನಾಟಕ ಸರ್ಕಾರ**

**2024ನೇ ವರ್ಷದ ವರದಿ ಸಂಖ್ಯೆ – 02**

## ವಿಷಯಸೂಚಿ


| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| | ಮುನ್ನುಡಿ | v |
| | ಕಾರ್ಯನಿರ್ವಹಣಾ ಸಾರಾಂಶ | vii |
| **ಅಧ್ಯಾಯ–I** | **ಪರಿಚಯ** | |
| 1.1 | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 | 1 |
| 1.2 | ಜನಸಂಖ್ಯಾ ಚಿತ್ರಣ | 2 |
| 1.3 | ಸಾಂಸ್ಥಿಕ ರಚನೆ | 3 |
| 1.4 | ಲೆಕ್ಕಪರಿಶೋಧನಾ ಉದ್ದೇಶಗಳು | 4 |
| 1.5 | ಲೆಕ್ಕಪರಿಶೋಧನಾ ಮಾನದಂಡಗಳು | 4 |
| 1.6 | ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ | 5 |
| 1.7 | ಕೃತಜ್ಞತೆ | 5 |
| **ಅಧ್ಯಾಯ–II** | **ಯೋಜನೆ ಮತ್ತು ಹಣಕಾಸು ನಿರ್ವಹಣೆ** | |
| 2.1 | ಯೋಜನೆ | 7 |
| 2.2 | ಸಾಂಸ್ಥಿಕ ಚೌಕಟ್ಟು | 13 |
| 2.3 | ಹಣಕಾಸು ನಿರ್ವಹಣೆ | 23 |
| **ಅಧ್ಯಾಯ–III** | **ಸುಲಭ ಸೌಕರ್ಯ** | |
| 3.1 | ಅಕ್ಸೆಸ್ಸಿಬಲ್ ಇಂಡಿಯಾ ಅಭಿಯಾನ | 29 |
| 3.2 | ಸುಗಮ ಪ್ರವಾಸೋದ್ಯಮ | 33 |
| 3.3 | ಗ್ರಂಥಾಲಯಗಳಿಗೆ ಪ್ರವೇಶ ಸಾಧ್ಯತೆ | 34 |
| **ಅಧ್ಯಾಯ–IV** | **ಶಿಕ್ಷಣ** | |
| 4.1 | ಬುದ್ಧಿಮಾಂದ್ಯ ಮಕ್ಕಳಿಗಾಗಿ ಶಾಲೆಗಳು | 38 |
| 4.2 | ದೃಷ್ಟಿಹೀನರಿಗಾಗಿ ಶಾಲೆಗಳು | 40 |
| 4.3 | ಶ್ರವಣದೋಷವುಳ್ಳವರಿಗಾಗಿ ಶಾಲೆಗಳು | 45 |
| 4.4 | ಭಾರತೀಯ ಪುನರ್ವಸತಿ ಮಂಡಳಿಯೊಂದಿಗೆ ಶಿಕ್ಷಕರ ನೋಂದಣಿ | 48 |
| 4.5 | ಶಾಲೆಗಳಲ್ಲಿ ಸುಗಮ ಮೂಲಸೌಕರ್ಯ | 50 |
| 4.6 | ಅಂಗವಿಕಲ ಮಕ್ಕಳ ಕೇಂದ್ರಿಕೃತ (ಸಿಸಿ) ಶಾಲೆಗಳಿಗೆ ಹೋಲಿಸಿದರೆ ಅನುದಾನಿತ ಶಾಲೆಗಳ ಕಳಪೆ ಕಾರ್ಯನಿರ್ವಹಣೆ | 53 |
| 4.7 | ದೃಷ್ಟಿ ಮತ್ತು ಶ್ರವಣದೋಷವುಳ್ಳವರಿಗೆ ಉನ್ನತ ಮಾಧ್ಯಮಿಕ ಶಿಕ್ಷಣ ಶಾಲೆಗಳ ಅನುಪಸ್ಥಿತಿ | 54 |
| 4.8 | ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ | 54 |
| 4.9 | ಶಿಕ್ಷಣ ಸೂಚಕಗಳ ಅನುಪಸ್ಥಿತಿ | 55 |
| **ಅಧ್ಯಾಯ–V** | **ಕೌಶಲ್ಯಾಭಿವೃದ್ಧಿ, ಉದ್ಯೋಗ ಮತ್ತು ಸಾಮಾಜಿಕ ಭದ್ರತೆ** | |
| 5.1 | ಅಂಗವಿಕಲ ವ್ಯಕ್ತಿಗಳಿಗೆ ಕೌಶಲ್ಯಾಭಿವೃದ್ಧಿ | 57 |

| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| 5.2 | ಅಂಗವಿಕಲರಿಗೆ ಉದ್ಯೋಗ | 59 |
| 5.3 | ಅಂಗವಿಕಲ ವ್ಯಕ್ತಿಗಳಿಗೆ ಸಾಮಾಜಿಕ ಭದ್ರತೆ | 62 |
| 5.4 | ಮಧ್ಯಸ್ಥಗಾರರಲ್ಲಿ ಅರಿವಿನ ಕೊರತೆಯಿಂದಾಗಿ ಸಮಸ್ಯೆಗಳು | 66 |
| **ಅಧ್ಯಾಯ–VI** | **ಪುನರ್ವಸತಿ** | |
| 6.1 | ಮಾನಸ ಕೇಂದ್ರಗಳು | 70 |
| 6.2 | ಬುದ್ಧಿಮಾಂದ್ಯ ಮಹಿಳೆಯರಿಗೆ ಆಫ್ಟರ್ ಕೇರ್ ಹೋಮ್ | 71 |
| 6.3 | ದೀನದಯಾಳ್ ಅಂಗವಿಕಲರ ಪುನರ್ವಸತಿ ಯೋಜನೆ | 72 |
| 6.4 | ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳು | 73 |
| 6.5 | ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರಗಳು | 77 |
| 6.6 | ಡೇಕೇರ್ ಕೇಂದ್ರಗಳ ಸ್ಥಾಪನೆ | 77 |

| ಅನುಬಂಧಗಳ ಪಟ್ಟಿ | | |
|---|---|---|
| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
| 3.1 | ಕೆಎಸ್ಆರ್‌ಟಿಸಿ ಮತ್ತು ಬಿಎಮ್‌ಟಿಸಿ ಸಂಸ್ಥೆಗಳಿಂದ ಆರ್‌ಪಿಡಬ್ಲ್ಯುಡಿ ಕಾಯಿದೆಯ ನಿಬಂಧನೆಗಳ ಅನುಪಾಲನೆ | 79 |
| 4.1 | ಸಂಗೀತ ಪರೀಕ್ಷೆಗೆ ಹಾಜರಾದ/ಹಾಜರಾಗದ ವಿದ್ಯಾರ್ಥಿಗಳ ವಿವರಗಳು | 81 |
| 4.2 | ಸಾಮಾನ್ಯ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ | 82 |
| 4.3 | ವಿಶೇಷ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ | 83 |
| 5.1 | ಎನ್‌ಹೆಚ್‌ಎಫ್‌ಡಿಸಿಯಿಂದ ಜಾರಿಗೊಳಿಸಲಾದ ಯೋಜನೆಗಳ ವಿವರಗಳು | 84 |

# ಮುನ್ನುಡಿ

ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಸಂವಿಧಾನದ 151 (2)ನೇ ವಿಧಿಯಡಿಯಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲು ಕರ್ನಾಟಕ ಸರ್ಕಾರದ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದೆ.

2016–22ರ ಅವಧಿಯನ್ನು ಒಳಗೊಂಡಿರುವ ವರದಿಯು "ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಅನುಷ್ಠಾನ"ದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಹೊಂದಿದೆ, ಇದರಲ್ಲಿ 'ಸಮುಚಿತ ಸರ್ಕಾರಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳ' ಮೇಲೆ ವಿಶೇಷ ಗಮನವನ್ನು ನೀಡಲಾಗಿದೆ.

ಈ ವರದಿಯಲ್ಲಿ 2016–22ರ ಅವಧಿಯ ಪರೀಕ್ಷಾ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಗಮನಿಸಿದ ಮತ್ತು ಹಿಂದಿನ ವರ್ಷಗಳಲ್ಲಿ ಗಮನಿಸಿದ ಆದರೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದಿದ್ದ ನಿದರ್ಶನಗಳನ್ನು ಉಲ್ಲೇಖಿಸಲಾಗಿದೆ; 2016–22ರ ನಂತರದ ಅವಧಿಗೆ ಸಂಬಂಧಿಸಿದ ವಿಷಯಗಳನ್ನು ಸಹ ಅಗತ್ಯವಿದ್ದಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

## ಕಾರ್ಯನಿರ್ವಹಣಾ ಸಾರಾಂಶ

**ಸಿಎಜಿರವರು ಈ ಲೆಕ್ಕಪರಿಶೋಧನೆಯನ್ನು ಏಕೆ ಮಾಡಿದರು?**

ವಿಕಲಚೇತನರು ಎಂದರೆ ಅಂಗವಿಕಲತೆಯಿಂದ ಜನಿಸಿದವರು ಅಥವಾ ನಿಯಂತ್ರಣಕ್ಕೆ ಮೀರಿದ ಕಾರಣಗಳಿಗಾಗಿ ಸಂದರ್ಭಗಳಿಗೆ ಬಲಿಯಾದವರು. ತತ್ಪರಿಣಾಮವಾಗಿ ದುರದೃಷ್ಟವು ಅವರನ್ನು ಸಮರ್ಥ ವ್ಯಕ್ತಿಗಳಿಗೆ ಹೋಲಿಸಿದರೆ ಅನಾನುಕೂಲಕರ ಸ್ಥಾನದಲ್ಲಿ ಇರಿಸುತ್ತದೆ. 2011ರ ಜನಗಣತಿಯ ಪ್ರಕಾರ, ಕರ್ನಾಟಕದಲ್ಲಿ 13.24 ಲಕ್ಷ ಜನರು ಅಂಗವಿಕಲತೆಗಳಿಂದ ಬಳಲುತ್ತಿದ್ದಾರೆ, ಇದು ದೇಶದ ಒಟ್ಟು ಅಂಗವಿಕಲ ವ್ಯಕ್ತಿಗಳ (2.68 ಕೋಟಿ) ಶೇಕಡಾ 4.94ರಷ್ಟಿತ್ತು. ಸೌಲಭ್ಯಗಳು ಮತ್ತು ಅವಕಾಶಗಳ ಕೊರತೆಗಳಿಂದ ಅಂಗವಿಕಲರಿಗೆ ಸೂಕ್ತವಾದ ಶಿಕ್ಷಣ, ವಿಶೇಷ ತರಬೇತಿ ಮತ್ತು ನುರಿತ ಉದ್ಯೋಗವನ್ನು ಪಡೆಯುವುದು ಸಾಧ್ಯವಾಗುತ್ತಿಲ್ಲ. ಈ ಸೌಲಭ್ಯಗಳು ಮತ್ತು ಅವಕಾಶಗಳನ್ನು ಒದಗಿಸಲು ರಾಜ್ಯ ಸರ್ಕಾರವು ಶ್ರಮಿಸುತ್ತಿದೆ.

ಶೈಕ್ಷಣಿಕ, ಸಾಮಾಜಿಕ, ಕಾನೂನು, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಮುಂತಾದ ಜೀವನದ ವಿವಿಧ ಕ್ಷೇತ್ರಗಳಲ್ಲಿ ಅಂಗವಿಕಲರ ಹಕ್ಕುಗಳು ಮತ್ತು ಘನತೆಯನ್ನು ಉತ್ತೇಜಿಸಲು ಮತ್ತು ರಕ್ಷಿಸಲು ಅಂಕವಿಕಲರ ಅಧಿನಿಯಮ 1995ರ ಬದಲಿಗೆ ಡಿಸೆಂಬರ್ 2016ರಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮವನ್ನು (ಆರ್‌ಪಿಡಬ್ಲ್ಯುಡಿ) ಜಾರಿಗೊಳಿಸಲಾಯಿತು.

ಸಮಾಜದ ಮುಖ್ಯವಾಹಿನಿಯೊಳಗೆ ಅಂಗವಿಕಲ ವ್ಯಕ್ತಿಗಳ ಏಕೀಕರಣವನ್ನು ಸಕ್ರಿಯಗೊಳಿಸಲು ಅಂಗವಿಕಲ ವ್ಯಕ್ತಿಗಳಿಗೆ ಪುನರ್ವಸತಿ, ಶಿಕ್ಷಣ, ಆರ್ಥಿಕ ಅವಕಾಶಗಳು, ತಡೆರಹಿತ ಪರಿಸರ ಮತ್ತು ಇತರ ಪೋಷಕ ಸೇವೆಗಳನ್ನು ಒದಗಿಸುವಲ್ಲಿ ಸರ್ಕಾರದ ಮಧ್ಯಸ್ಥಿಕೆಗಳ ಪರಿಣಾಮಕಾರಿತ್ವವನ್ನು ನಿರ್ಣಯಿಸಲು ಆರ್‌ಪಿಡಬ್ಲ್ಯುಡಿ ಅಧಿನಿಯಮದ ನಿಬಂಧನೆಗಳನ್ನು ಉಲ್ಲೇಖಿಸಿ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಯನ್ನು ಕೈಗೊಳ್ಳಲಾಯಿತು.

**ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ಅಂಶಗಳು**

ಕರ್ನಾಟಕ ಅಂಗವಿಕಲ ವ್ಯಕ್ತಿಗಳ ನಿಯಮಗಳ ವಿಳಂಬಿತ ಅಧಿಸೂಚನೆಯು ಅಧಿನಿಯಮ ಮತ್ತು ನಿಯಮಗಳ ಅನುಷ್ಠಾನವನ್ನು ವಿಳಂಬಗೊಳಿಸಿತು. ಇಲಾಖೆಯು ಎಲ್ಲಾ ಅಂಗವಿಕಲತೆಗಳನ್ನು ಒಳಗೊಂಡ ಸಮಗ್ರ ಸಮೀಕ್ಷೆಯನ್ನು ನಡೆಸಲು ವಿಫಲವಾಗಿದ್ದರಿಂದ ರಾಜ್ಯದಲ್ಲಿ ವಿವಿಧ ಅಂಗವಿಕಲ ವ್ಯಕ್ತಿಗಳ ದತ್ತಸಂಚಯವನ್ನು ಹೊಂದಿರಲಿಲ್ಲ. ಕೇವಲ ಶೇಕಡಾ 46ರಷ್ಟು ಅಂಗವಿಕಲರಿಗೆ ಮಾತ್ರ ವಿಕಲಾಂಗ ವ್ಯಕ್ತಿಗಳ ವಿಶಿಷ್ಟ ಗುರುತಿನ ಚೀಟಿಗಳನ್ನು (ಯುಡಿಐಡಿ) ನೀಡಲಾಗಿತ್ತು, ಇದು ಅವರು ಪಡೆದ ಪ್ರಯೋಜನಗಳನ್ನು ಗಮನಿಸಲು ಹಾಗೂ ಮೇಲ್ವಿಚಾರಣೆ ಮತ್ತು ಭವಿಷ್ಯದ ಯೋಜನೆಯನ್ನು ಸುಗಮಗೊಳಿಸಲು ಸಹಾಯ ಮಾಡುತ್ತದೆ.

ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ (ಡಿಡಿಆರ್‌ಸಿ) ಸ್ಥಾಪಿಸದಿರುವುದು, ಎಲ್ಲಾ ಜಿಲ್ಲೆಗಳಲ್ಲಿ ಡೇ ಕೇರ್ ಸೆಂಟರ್‌ಗಳು ಮತ್ತು ಕ್ಷಿಪ್ರ ಮಧ್ಯಸ್ಥಿಕೆ ಕೇಂದ್ರಗಳನ್ನು ಸ್ಥಾಪಿಸದಿರುವುದು, ಕಾಯಿದೆಯ ಅನುಷ್ಠಾನಕ್ಕಾಗಿ ನಿಗದಿಪಡಿಸಿದ ಪ್ರಾಧಿಕಾರಗಳನ್ನು ಗುರುತಿಸಿ ಅಧಿಸೂಚಿಸದಿರುವುದು ಅಂಗವಿಕಲರ ಪುನರ್ವಸತಿಗೆ ಸೂಕ್ತವಾದ ಕಾರ್ಯವಿಧಾನದ ಅನುಪಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ರಾಜ್ಯದಲ್ಲಿನ ಅಂಗವಿಕಲರಿಗೆ ಪ್ರವೇಶವು ಒಂದು ಪ್ರಮುಖ ಅಡಚಣೆಯಾಗಿ ಮುಂದುವರೆಯಿತು. ರಾಜ್ಯ ಸರ್ಕಾರವು ಅನೇಕ ಸರ್ಕಾರಿ ಸಂಸ್ಥೆಗಳು, ಸಾರ್ವಜನಿಕ ಸಾರಿಗೆ, ಸಾಮಾನ್ಯ ಮತ್ತು ವಿಶೇಷ ಶಾಲೆಗಳು, ಗ್ರಂಥಾಲಯಗಳು ಮತ್ತು ಪ್ರವಾಸಿ ಸ್ಥಳಗಳಲ್ಲಿ ಅಂಗವಿಕಲರ ಪ್ರವೇಶಕ್ಕೆ ಮೂಲಸೌಕರ್ಯಗಳನ್ನು ಒದಗಿಸಿರಲಿಲ್ಲ.

ವಿವಿಧ ವರ್ಗದ ಅಂಗವಿಕಲ ವಿದ್ಯಾರ್ಥಿಗಳಿಗೆ ವಿಶೇಷ ಶಾಲೆಗಳನ್ನು ಸ್ಥಾಪಿಸಲಾಗಿದ್ದರೂ, ಮೂಲಸೌಕರ್ಯಗಳ ಲಭ್ಯತೆ, ಪ್ರವೇಶದ ಸೌಕರ್ಯಗಳು, ಶಿಕ್ಷಕರ ಅರ್ಹತೆ, ಮುಂದುವರಿದ ಖಾಲಿ ಹುದ್ದೆಗಳು ಇತ್ಯಾದಿಗಳ ವಿಷಯದಲ್ಲಿ ಈ ಸಂಸ್ಥೆಗಳ ಕಾರ್ಯಕ್ಷಮತೆ ತೃಪ್ತಿಕರವಾಗಿರಲಿಲ್ಲ.

ಆರ್‌ಪಿಡಬ್ಲ್ಯುಡಿ ಕಾಯಿದೆಯ ಅನುಷ್ಠಾನದ ನಾಲ್ಕು ವರ್ಷಗಳ ನಂತರ ಸೆಪ್ಟೆಂಬರ್ 2020ರಲ್ಲಿ ನಿರ್ದಿಷ್ಟ ವಿಕಲಾಂಗ ವ್ಯಕ್ತಿಗಳಿಂದ ಭರ್ತಿ ಮಾಡಲು ಉದ್ದೇಶಿಸಿರುವ ಪ್ರತಿಯೊಂದು ಪ್ರವರ್ಗದ ಹುದ್ದೆಯಲ್ಲಿ ಕಡ್ಡಾಯ ನೇಮಕಾತಿಯ ವಿಶೇಷ ಮೀಸಲಾತಿ ನೀತಿಯನ್ನು ರಾಜ್ಯ ಸರ್ಕಾರವು ಹೊರತಂದಿತು. ಐದು ವರ್ಷಗಳ ಹಿಂದೆಯೇ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳನ್ನು ಗುರುತಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿದ್ದರೂ, ಸಮಿತಿಯು ಇನ್ನೂ ತನ್ನ ವರದಿಯನ್ನು ಸಲ್ಲಿಸಿರಲಿಲ್ಲ (ಡಿಸೆಂಬರ್ 2022). ವರದಿಯನ್ನು ಸಲ್ಲಿಸದ ಕಾರಣ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳನ್ನು ಗುರುತಿಸಲಾಗಿರಲಿಲ್ಲ.

ಜಾಗೃತಿ ಉಪಕ್ರಮಗಳ ಅನುಪಸ್ಥಿತಿಯಿಂದಾಗಿ, ಶೇಕಡಾ 5ರಷ್ಟು ಆಯವ್ಯಯ ಮೀಸಲಾತಿ ಅಡಿಯಲ್ಲಿ ಲಭ್ಯವಿರುವ ವಿಶೇಷ ಪ್ರಯೋಜನಗಳನ್ನು ಸಂಪೂರ್ಣವಾಗಿ ಪಡೆಯಲಾಗಲಿಲ್ಲ ಮತ್ತು ಯಾವುದೇ ಮೇಲ್ವಿಚಾರಣೆ ಮತ್ತು ವರದಿ ಮಾಡುವ ವ್ಯವಸ್ಥೆಯಲ್ಲಿ ಕಾಣಿಸಿಕೊಂಡಿರಲಿಲ್ಲ.

ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಹಾಗೂ ಅಂಗವಿಕಲರ ಅಭಿವೃದ್ಧಿಗಾಗಿ ಸ್ಥಾಪಿಸಲಾದ ಸಂಸ್ಥೆಗಳಲ್ಲಿ ವಿವಿಧ ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಲಭ್ಯವಿರುವ ಮಾನವ ಸಂಪನ್ಮೂಲಗಳು ಸಾಕಷ್ಟಿರಲಿಲ್ಲ. ಸಾಮರ್ಥ್ಯ ನಿರ್ಮಾಣದ ಅನುಪಸ್ಥಿತಿಯಿದ್ದಿತು ಅಥವಾ ಅಸಮರ್ಪಕವಾಗಿತ್ತು. ಯೋಜನೆಗಳನ್ನು ಅನುಷ್ಠಾನಗೊಳಿಸದಿದ್ದುದರಿಂದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅನುದಾನ ಪಡೆಯುವ ಅವಕಾಶವನ್ನು ಕಳೆದುಕೊಂಡಿತ್ತು. ರಾಜ್ಯ ಸರ್ಕಾರವು ವಿಶೇಷ ಶಾಲೆಗಳಿಗೆ ಗೊತ್ತುಪಡಿಸಿದ ಸಮುದಾಯ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನೀತಿಯ ಅನುಪಸ್ಥಿತಿಯ ಕಾರಣ, ಮೂಲಸೌಕರ್ಯಗಳನ್ನು ಹೆಚ್ಚಿಸುವಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯು ಬೆಂಗಳೂರಿಗೆ ಸೀಮಿತವಾಗಿತ್ತು.

**ಸಿಎಜಿರವರು ಏನು ಶಿಫಾರಸು ಮಾಡುತ್ತಾರೆ**

**(1) ರಾಜ್ಯ ಸರ್ಕಾರವು 21 ವರ್ಗಗಳಡಿಯಲ್ಲಿ ಅಂಗವಿಕಲರ ವಿವರಗಳನ್ನು ಸೆರೆಹಿಡಿಯುವ ತಜ್ಞರ ತೊಡಗಿಸಿಕೊಳ್ಳುವಿಕೆಯೊಂದಿಗೆ ವಿವರವಾದ ಸಮೀಕ್ಷೆಯನ್ನು ನಡೆಸುವ ಮೂಲಕ ಸಮಗ್ರ ದತ್ತಸಂಚಯವನ್ನು ತಯಾರಿಸಬೇಕು. ರಾಜ್ಯ/ಕೇಂದ್ರ ಯೋಜನೆಯಡಿಯಲ್ಲಿ ಡಿಬಿಟಿಗಾಗಿ ಆಧಾರ್‌ಗೆ ಲಿಂಕ್ ಮಾಡುವ ಸಮ್ಮತಿಯೊಂದಿಗೆ ಗುರುತಿಸಲಾದ ಎಲ್ಲಾ ಅಂಗವಿಕಲ ವ್ಯಕ್ತಿಗಳಿಗೆ ವಿಶಿಷ್ಟ ಗುರುತಿನ ಚೀಟಿಗಳನ್ನು ನೀಡಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.**

**(2) ರಾಜ್ಯ ಸರ್ಕಾರವು ಅಂಗವಿಕಲರ ಅಗತ್ಯತೆಗಳನ್ನು ಪೂರೈಸಲು ಸಾಂಸ್ಥಿಕ ಕಾರ್ಯ ವಿಧಾನವನ್ನು ಬಲಪಡಿಸಬೇಕು ಮತ್ತು ಆರ್‌ಪಿಡಬ್ಲ್ಯುಡಿ ಅಧಿನಿಯಮ, 2016ರ ತ್ವರಿತ ಅನುಷ್ಠಾನಕ್ಕಾಗಿ ಗುರುತಿಸಲ್ಪಟ್ಟ ಮತ್ತು ಅಧಿಸೂಚಿತ ಪ್ರಾಧಿಕಾರಗಳ ಮೂಲಕ ಅಧಿನಿಯಮದ/ನಿಯಮಗಳ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.**

**(3) ಸ್ಥಳೀಯ ಪ್ರಾಧಿಕಾರಗಳು ಕಡ್ಡಾಯವಾಗಿ ವಂತಿಗೆ ನೀಡುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಎಲ್ಲಾ ಅಂಗವೈಕಲ್ಯಗಳನ್ನು ಒಳಗೊಂಡಿರಬೇಕು.**

(4) ಎಲ್ಲಾ ಸಾರ್ವಜನಿಕ ಕಟ್ಟಡಗಳು, ಸಾರ್ವಜನಿಕ ಸಾರಿಗೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ತಡೆರಹಿತ ಪ್ರವೇಶವನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಉನ್ನತ ಆದ್ಯತೆಯನ್ನು ನೀಡಬೇಕು ಮತ್ತು ತನ್ನ ಪ್ರಯತ್ನಗಳನ್ನು ಹೆಚ್ಚಿಸಬೇಕು.

(5) ರಾಜ್ಯ ಸರ್ಕಾರವು ಎಲ್ಲಾ ಮಾನಸಿಕ ಅಂಗವಿಕಲ ಶಾಲೆಗಳು ಏಕರೂಪದ ಪಠ್ಯಕ್ರಮವನ್ನು (ಎಫ್‌ಎಸಿಪಿ) ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬೇಕು, ಆದ್ಯತೆಯ ಮೇಲೆ ಔದ್ಯೋಗಿಕ/ ಫಿಸಿಯೋಥೆರಪಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು ಎಲ್ಲಾ ಶಾಲೆಗಳಲ್ಲಿ ಪ್ರವೇಶದ ಮೂಲಸೌಕರ್ಯವನ್ನು ಒದಗಿಸಬೇಕು.

(6) ಅಂಗವಿಕಲರ ಒಟ್ಟಾರೆ ಸುಧಾರಣೆಗಾಗಿ ಎಲ್ಲಾ ಸಂಸ್ಥೆಗಳಲ್ಲಿ ಶ್ರವಣ ಸಾಧನಗಳು, ಆಡಿಯೋ ಪುಸ್ತಕಗಳು ಮತ್ತು ಸಲಕರಣೆಗಳ ಲಭ್ಯತೆಯನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳುವ ಅಗತ್ಯತೆಯಿದೆ.

(7) ರಾಜ್ಯ ಸರ್ಕಾರವು, ತನ್ನ ಯೋಜನೆಗಳು ಎಮ್‌ಎಸ್‌ಎಮ್‌ಇ/ಎನ್‌ಹೆಚ್‌ಎಫ್‌ಡಿಸಿಯಿಂದ ಬೆಂಬಲಿತವಾದ ಸ್ವಯಂ ಉದ್ಯೋಗಾವಕಾಶಗಳನ್ನು ಪಡೆಯುವ ಗುರಿಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

(8) ಸರ್ಕಾರವು ನಿರಾಮಯ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೊಳಿಸಬೇಕು ಮತ್ತು ಅಂಗವಿಕಲರಿಗೆ ಸಮರ್ಪಕ ಮತ್ತು ಕೈಗೆಟುಕುವ ಆರೋಗ್ಯ ಸೇವೆಗಳನ್ನು ಖಚಿತಪಡಿಸಿಕೊಳ್ಳಲು ಸರ್ಕಾರವೇ ನವೀಕರಣ ಮೊತ್ತವನ್ನು ಪಾವತಿಸುವುದನ್ನು ಪರಿಗಣಿಸಬೇಕು. ಇದಲ್ಲದೆ, ಸದಸ್ಯರು/ಚಂದಾದಾರರಿಗೆ ಹೆಚ್ಚುವರಿ ಆರ್ಥಿಕ ಪ್ರಯೋಜನಗಳನ್ನು ಒದಗಿಸುವುದಕ್ಕೆ ಪೋಷಕರು/ ಚಂದಾದಾರರ ವಿಮಾ ಯೋಜನೆಯನ್ನು ಸುಧಾರಿಸಬೇಕು.

(9) ರಾಜ್ಯ ಸರ್ಕಾರವು ಸಿಬ್ಬಂದಿ ಕೊರತೆಯನ್ನು ಪರಿಹರಿಸಬೇಕು, ಮೂಲಸೌಕರ್ಯಗಳನ್ನು ಸುಧಾರಿಸಬೇಕು ಮತ್ತು ಪುನರ್ವಸತಿ ಕಾರ್ಯವಿಧಾನವನ್ನು ಬಲಪಡಿಸಲು ಎಲ್ಲಾ ಜಿಲ್ಲೆಗಳಲ್ಲಿ ಡಿಡಿಆರ್‌ಸಿಗಳನ್ನು ಸ್ಥಾಪಿಸಬೇಕು. ಡಿಡಿಆರ್‌ಸಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಅವುಗಳನ್ನು ಡಿಡಿಡಬ್ಲ್ಯುಒಗಳ ನಿಯಂತ್ರಣಕ್ಕೆ ತರಬೇಕು.

# ಅಧ್ಯಾಯ–I

# ಪರಿಚಯ

## ಅಧ್ಯಾಯ–I: ಪರಿಚಯ

ಸಾಮರ್ಥ್ಯದ ಕೊರತೆ ಅಥವಾ ಮಾನವರಿಗೆ ಸಾಮಾನ್ಯವೆಂದು ಪರಿಗಣಿಸಲಾದ ವ್ಯಾಪ್ತಿಯಲ್ಲಿ ಚಟುವಟಿಕೆಯನ್ನು ನಿರ್ವಹಿಸಲು ಸಾಧ್ಯವಾಗದ ಯಾವುದೇ ನಿರ್ಬಂಧವನ್ನು ಅಂಗವಿಲಕತೆ ಎಂದು ಕರೆಯಲಾಗುತ್ತದೆ. ದುರ್ಬಲತೆಯು ಆರೋಗ್ಯದ ಭೌತಿಕ ಅಂಶಗಳಿಗೆ ಸಂಬಂಧಿಸಿದೆ ಮತ್ತು ಅಂಗವೈಕಲ್ಯವು ದುರ್ಬಲಗೊಂಡ ಅಂಗದಿಂದ ಉಂಟಾಗುವ ಕ್ರಿಯಾತ್ಮಕ ಸಾಮರ್ಥ್ಯದ ನಷ್ಟವಾಗಿದೆ. ಅಂಗವೈಕಲ್ಯವು ದುರ್ಬಲತೆ ಅಥವಾ ಅಂಗವೈಕಲ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಣಾಮಗಳ ಅಳತೆಯಾಗಿದೆ. ಅಭಿವೃದ್ಧಿಯಲ್ಲಿನ ವಿಳಂಬ ಅಥವಾ ಅಸಾಮರ್ಥ್ಯಗಳ ಆರಂಭಿಕ ಗುರುತಿಸುವಿಕೆಯು ತೀವ್ರ ಅಂಗವೈಕಲ್ಯದ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ. ಆದ್ದರಿಂದ, ಅಂಗವಿಕಲರ ಪುನರ್ವಸತಿಯಲ್ಲಿ ಸಮಯೋಚಿತ ಹಸ್ತಕ್ಷೇಪವು ಒಂದು ಪ್ರಮುಖ ಅಂಶವಾಗಿದೆ. ಸಮುದಾಯದಲ್ಲಿನ ಅಂಗವಿಕಲ ವ್ಯಕ್ತಿಗಳು ಅನೇಕ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಸೇವೆಗಳಿಗೆ ಪ್ರವೇಶಿಸಲಾಗದಿರುವಿಕೆ ಹಾಗೂ ಆರೋಗ್ಯ ಸೇವೆಗಳು, ಶಾಲೆಗಳು, ವೃತ್ತಿಪರ ಶಿಕ್ಷಣ ಕಾರ್ಯಕ್ರಮಗಳು ಮತ್ತು ಉದ್ಯೋಗಗಳಂತಹ ಅವಕಾಶಗಳ ಕೊರತೆಯಿಂದಾಗಿ ಸಮುದಾಯದಲ್ಲಿ ನಿರ್ಲಕ್ಷಿಸಲ್ಪಡುತ್ತಿದ್ದಾರೆ.

ಭಾರತೀಯ ಸಂವಿಧಾನದ 41ನೇ ವಿಧಿಯು, ರಾಜ್ಯವು ತನ್ನ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿ ಮಟ್ಟದ ನಿರ್ಬಂಧಗಳೊಳಗೆ ಅಂಗವೈಕಲ್ಯದಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಶಿಕ್ಷಣ, ಕೆಲಸ ಮತ್ತು ಸಾರ್ವಜನಿಕ ನೆರವಿನ ಹಕ್ಕನ್ನು ಸುರಕ್ಷಿತಗೊಳಿಸಲು ಪರಿಣಾಮಕಾರಿ ನಿಬಂಧನೆಗಳನ್ನು ಮಾಡುವುದನ್ನು ಕಡ್ಡಾಯಗೊಳಿಸುತ್ತದೆ. ಅಲ್ಲದೆ, ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸೇರಿಸದಿರುವುದು ಹಲವಾರು ಪರಿಣಾಮಗಳನ್ನು ಹೊಂದಿದೆ ಏಕೆಂದರೆ ಅಂಗವೈಕಲ್ಯದ ಕಳಂಕವು ಅವರ ಪೋಷಕರು ಮತ್ತು ಇತರ ಕುಟುಂಬ ಸದಸ್ಯರಿಗೆ ಆದಾಯದ ನಷ್ಟ ಮತ್ತು ಅಂಗವಿಕಲ ವ್ಯಕ್ತಿಗಳಿಗೆ ಹೆಚ್ಚುವರಿ ವೆಚ್ಚವನ್ನು ಉಂಟುಮಾಡುತ್ತದೆ.

### 1.1 ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016

ಭಾರತವು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ವಿಶ್ವಸಂಸ್ಥೆಯ ಸಮಾವೇಶ 2006ರ (ಯುಎನ್‌ಸಿಆರ್‌ಪಿಡಿ) ಒಪ್ಪಂದವನ್ನು ಅಂಗೀಕರಿಸಿದೆ. ಭಾರತ ಸರ್ಕಾರವು "ಅಂಗವಿಕಲ ವ್ಯಕ್ತಿಗಳ ಹಕ್ಕುಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಕಾಯಿದೆ 1995ಯನ್ನು (ಅಂಗವಿಕಲರಿಗೆ ಅಧಿನಿಯಮ) ಬದಲಿಸುವ ಮೂಲಕ 27 ಡಿಸೆಂಬರ್ 2016ರಿಂದ ಜಾರಿಗೆ ಬರುವಂತೆ "ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ (ಆರ್‌ಪಿಡಬ್ಲ್ಯುಡಿ ಅಧಿನಿಯಮ), 2016ನ್ನು ಜಾರಿಗೆ ತಂದಿತು ಮತ್ತು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ನಿಯಮಗಳು, 2017ನ್ನು ರಚಿಸಿತು (ಜೂನ್ 2017). ಆರ್‌ಪಿಡಬ್ಲ್ಯುಡಿ ಅಧಿನಿಯಮದ ಕೆಲವು ಪ್ರಮುಖ ನಿಬಂಧನೆಗಳನ್ನು ಕೆಳಗೆ ನೀಡಲಾಗಿದೆ.

- ಪಿಡಬ್ಲ್ಯುಡಿ ಅಧಿನಿಯಮದಲ್ಲಿನ ಏಳು ಅಂಗವೈಕಲ್ಯಗಳಿಗೆ ಪ್ರತಿಯಾಗಿ 21 ಅಂಗವೈಕಲ್ಯಗಳನ್ನು ವ್ಯಾಪ್ತಿಗೊಳಪಡಿಸಿದೆ.
- ನಿರ್ದಿಷ್ಟ ವ್ಯಕ್ತಿಗಳಿಗೆ ಅಥವಾ ಮಾನದಂಡದ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳ ವರ್ಗಕ್ಕೆ ಸರ್ಕಾರಿ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಶೇಕಡ ಮೂರರಿಂದ ನಾಲ್ಕಕ್ಕೆ ಹೆಚ್ಚಿಸುವುದು.
- 6 ರಿಂದ 18 ವರ್ಷಗಳ ನಡುವಿನ ಮಾನದಂಡದ ಅಂಗವೈಕಲ್ಯ ಹೊಂದಿರುವ ಪ್ರತಿ ಮಗುವಿಗೆ ಉಚಿತ ಶಿಕ್ಷಣದ ಹಕ್ಕು.
- ಎಲ್ಲಾ ಸಂಬಂಧಿತ ಯೋಜನೆಗಳಲ್ಲಿ, ಬಡತನ ನಿರ್ಮೂಲನೆ ಕಾರ್ಯಕ್ರಮಗಳಲ್ಲಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕೃಷಿ ಭೂಮಿ ಮತ್ತು ವಸತಿ ಹಂಚಿಕೆಯಲ್ಲಿ ಶೇಕಡಾ ಐದರ ಮೀಸಲಾತಿ.
- ಅಂಗವಿಕಲರ ಸ್ಥಳೀಯ ಕಾಳಜಿಗಳನ್ನು ಪರಿಹರಿಸಲು ರಾಜ್ಯ ಸರ್ಕಾರಗಳಿಂದ ಜಿಲ್ಲಾ ಮಟ್ಟದ ಸಮಿತಿಗಳ ರಚನೆ.
- ಅಂಗವಿಕಲರ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನು ನಿರ್ವಹಿಸಲು ಪ್ರತಿ ಜಿಲ್ಲೆಯಲ್ಲಿ ವಿಶೇಷ ನ್ಯಾಯಾಲಯಗಳ ರಚನೆ.
- ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಉನ್ನತ ನೀತಿ–ರಚನಾ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಅಂಗವೈಕಲ್ಯ ಕುರಿತು ಕೇಂದ್ರ ಮತ್ತು ರಾಜ್ಯ ಸಲಹಾ ಮಂಡಳಿಗಳನ್ನು ಸ್ಥಾಪಿಸುವುದು.
- ಕನಿಷ್ಠ ಶೇಕಡಾ ಐದರಷ್ಟು ಕಾರ್ಮಿಕರು ಮಾನದಂಡದ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳನ್ನು ಒಳಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಸಂಸ್ಥೆಗಳಿಗೆ ಅವರ ಆರ್ಥಿಕ ಸಾಮರ್ಥ್ಯದ ಮಿತಿಯೊಳಗೆ ಪ್ರೋತ್ಸಾಹಕಗಳನ್ನು ಒದಗಿಸುವುದು.
- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸಮಾಲೋಚನೆಯೊಂದಿಗೆ ಅಂಗವಿಕಲರಿಗೆ ರಾಜ್ಯ ನಿಧಿಯ ರಚನೆ.
- ಜಾಗೃತಿ ಅಭಿಯಾನಗಳು, ಸಾರಿಗೆ ಪ್ರವೇಶ, ಕುಂದುಕೊರತೆ ಪರಿಹಾರ, ಸಾಮಾಜಿಕ ಲೆಕ್ಕಪರಿಶೋಧನೆ ಮುಂತಾದ ಚಟುವಟಿಕೆಗಳ ಮೇಲೆ ಹೆಚ್ಚುವರಿ ಒತ್ತು.


ಮೇಲಿನವುಗಳ ಹೊರತಾಗಿ, ಹಕ್ಕುಗಳು ಮತ್ತು ಅರ್ಹತೆಗಳಿಗಾಗಿ ಆರ್‌ಪಿಡಬ್ಲ್ಯುಡಿ ಅಧಿನಿಯಮವು ಸಮರ್ಪಿತ ಅಧ್ಯಾಯವನ್ನು ಒಳಗೊಂಡಿದೆ, ಇದರಲ್ಲಿ ಸಮಾನತೆ ಮತ್ತು ತಾರತಮ್ಯ ಮಾಡದಿರುವುದು, ಸಮುದಾಯ ಜೀವನ, ಕ್ರೌರ್ಯ ಮತ್ತು ಅಮಾನವೀಯ ವರ್ತನೆಯ ವಿರುದ್ಧ ರಕ್ಷಣೆ, ನಿಂದನೆ, ಹಿಂಸೆ ಮತ್ತು ಶೋಷಣೆಯಿಂದ ರಕ್ಷಣೆ, ಅಪಾಯದ ಸಂದರ್ಭ, ಶಸ್ತ್ರಸಜ್ಜಿತ ಸಂಘರ್ಷ, ಮಾನವೀಯ ತುರ್ತುಸ್ಥಿತಿ ಮತ್ತು ನೈಸರ್ಗಿಕ ವಿಪತ್ತುಗಳಿಂದ ರಕ್ಷಣೆ ಮತ್ತು ಸುರಕ್ಷತೆ, ಸಂತಾನೋತ್ಪತ್ತಿ ಹಕ್ಕುಗಳು, ಮತದಾನದ ಅವಕಾಶ, ನ್ಯಾಯದ ಹಕ್ಕು, ಕಾನೂನು ಸಾಮರ್ಥ್ಯ, ಪೋಷಕತ್ವದ ಅವಕಾಶ ಇತ್ಯಾದಿಗಳನ್ನು (ಅಧ್ಯಾಯ–II) ಒಳಗೊಂಡಿದೆ. ಅಂಗವಿಕಲರ ಪರಿಣಾಮಕಾರಿ ಸಬಲೀಕರಣ ಮತ್ತು ಸೇರ್ಪಡೆಗಾಗಿ ಸಾಮಾಜಿಕ ಭದ್ರತೆ, ಆರೋಗ್ಯ ರಕ್ಷಣೆ, ಪುನರ್ವಸತಿ, ಸಂಶೋಧನೆ ಮತ್ತು ಅಭಿವೃದ್ಧಿ, ಸಂಸ್ಕೃತಿ ಮತ್ತು ಮನರಂಜನೆ, ಕ್ರೀಡಾ ಚಟುವಟಿಕೆಗಳು, ಕೌಶಲ್ಯಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಸರ್ಕಾರಗಳು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದನ್ನು ಈ ಕಾಯಿದೆಯು ಕಡ್ಡಾಯ ಮಾಡಿದೆ (ಅಧ್ಯಾಯ–V).

## 1.2 ಜನಸಂಖ್ಯಾ ಚಿತ್ರಣ

2011ರ ಜನಗಣತಿಯ ಪ್ರಕಾರ, ಕರ್ನಾಟಕವು 13.24 ಲಕ್ಷ ಅಂಕವಿಕಲ ವ್ಯಕ್ತಿಗಳನ್ನು ಹೊಂದಿದೆ, ಇದು ದೇಶದ ಒಟ್ಟು ಅಂಗವಿಕಲರ (2.68 ಕೋಟಿ) ಶೇಕಡಾ 4.94ರಷ್ಟಿದೆ. ಪಿಡಬ್ಲ್ಯುಡಿ ಅಧಿನಿಯಮ, 1995 ರಲ್ಲಿ ಏಳು ವರ್ಗದ ಅಂಗವಿಕಲತೆಗಳಿದ್ದು ಆರ್‌ಪಿಡಬ್ಲ್ಯುಡಿ ಅಧಿನಿಯಮ, 2016ರಲ್ಲಿ ಅದನ್ನು ಸೆರೆಬ್ರಲ್ ಪಾಲ್ಸಿ, ಡ್ವಾರ್ಫಿಸಂ, ಸ್ನಾಯುಕ್ಷಯ, ಆಸಿಡ್ ದಾಳಿಯ ಬಲಿಪಶುಗಳು, ಆಟಿಸಂ ಸ್ಪೆಕ್ಟ್ರಮ್ ಅಸ್ವಸ್ಥತೆಗಳು, ಮಲ್ಟಿಪಲ್ ಸ್ಕ್ಲೆರೋಸಿಸ್, ಪಾರ್ಕಿನ್ಸನ್ ಕಾಯಿಲೆಗಳು, ಹಿಮೋಫಿಲಿಯ, ತಲಸ್ಸೆಮಿಯ ಮತ್ತು ಸಿಕಲ್‌ಸೆಲ್ ಅನಿಮಿಯ ಮುಂತಾದ 21

ವರ್ಗಗಳಿಗೆ ವಿಸ್ತರಿಸಲಾಯಿತು. 2011ರ ಜನಗಣತಿಯ ಪ್ರಕಾರ ವಿವಿಧ ವರ್ಗಗಳಡಿಯಲ್ಲಿ ಅಂಗವೈಕಲ್ಯಗಳ ಶೇಕಡಾವಾರು ಪಾಲನ್ನು **ನಕ್ಷೆ–1.1** ರಲ್ಲಿ ತೋರಿಸಲಾಗಿದೆ.


**ನಕ್ಷೆ–1.1: 2011ರ ಜನಗಣತಿ ಪ್ರಕಾರ ಅಂಗವೈಕಲ್ಯಗಳ ಶೇಕಡಾವಾರು**




## 1.3 ಸಾಂಸ್ಥಿಕ ರಚನೆ

ಕರ್ನಾಟಕದಲ್ಲಿ, ಸಮಾಜದ ಮುಖ್ಯವಾಹಿನಿಯಲ್ಲಿ ವಿಕಲಾಂಗ ವ್ಯಕ್ತಿಗಳ ಏಕೀಕರಣಕ್ಕೆ ಅನುಕೂಲವಾಗುವಂತೆ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು (ಡಿಇಡಿಎಎಸ್‌ಸಿ) ಪುನರ್ವಸತಿ, ಶಿಕ್ಷಣ, ಆರ್ಥಿಕ ಅವಕಾಶಗಳು, ತಡೆರಹಿತ ಪರಿಸರ ಮತ್ತು ಇತರ ಪೋಷಕ ಸೇವೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿದೆ.

ಇಲಾಖೆಯ ಸಾಂಸ್ಥಿಕ ರಚನೆಯನ್ನು ಕೆಳಗೆ ನೀಡಲಾಗಿದೆ.




ನಿರ್ದೇಶಕರ ನೇತೃತ್ವದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು, ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣದ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯ

ನಿರ್ವಹಿಸುತ್ತದೆ. ಅವರಿಗೆ ಜಿಲ್ಲಾ ಮಟ್ಟದಲ್ಲಿ ಜಂಟಿ ನಿರ್ದೇಶಕರು, ಇಬ್ಬರು ಉಪನಿರ್ದೇಶಕರು, ಓರ್ವ ಸಹಾಯಕ ನಿರ್ದೇಶಕರು ಮತ್ತು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು (ಡಿಡಿಡಬ್ಲ್ಯುಓ) ಅನುಷ್ಠಾನಾಧಿಕಾರಿಗಳಾಗಿ ನೆರವು ನೀಡುತ್ತಾರೆ.

ಜೊತೆಗೆ, ಪಿಡಬ್ಲ್ಯುಡಿ ಅಧಿನಿಯಮ, 1995ರಡಿಯಲ್ಲಿ ಸ್ಥಾಪಿಸಲಾದ (ಮಾರ್ಚ್ 1998) ಅಂಗವಿಕಲ ವ್ಯಕ್ತಿಗಳಿಗಾಗಿನ ರಾಜ್ಯ ಆಯುಕ್ತ ಸ್ವತಂತ್ರ ಕಛೇರಿಯು ಕೆಳಗಿನವುಗಳಕ್ಕೆ ಜವಾಬ್ದಾರಿಯಾಗಿದೆ.

- ಆರ್‌ಪಿಡಬ್ಲ್ಯುಡಿ ಅಧಿನಿಯಮದ ಅನುಷ್ಠಾನದ ಮೇಲ್ವಿಚಾರಣೆ;
- ರಾಜ್ಯ ಸರ್ಕಾರವು ವಿತರಿಸಿದ ಹಣದ ಬಳಕೆಯನ್ನು ಮೇಲ್ವಿಚಾರಣೆ ಮಾಡುವುದು;
- ಅಂಗವಿಕಲರಿಗೆ ಲಭ್ಯ ಮಾಡಿರುವ ಹಕ್ಕುಗಳು ಮತ್ತು ಸೌಲಭ್ಯಗಳನ್ನು ರಕ್ಷಿಸುವುದು;
- ಅಧಿನಿಯಮದ ಅನುಷ್ಠಾನ ಕುರಿತು ರಾಜ್ಯ ಸರ್ಕಾರಗಳಿಗೆ ವರದಿಗಳನ್ನು ಸಲ್ಲಿಸುವುದು;
- ಅಂಗವಿಕಲರ ಹಕ್ಕುಗಳ ನಿರಾಕರಣೆಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸುವುದು; ಮತ್ತು
- ರಾಜ್ಯ ಸರ್ಕಾರವು ಸೂಕ್ತವಾದ ವಿಷಯಗಳಿಗೆ ಸಂಬಂಧಿಸಿದಂತೆ ಅಂಗವಿಕಲ ವ್ಯಕ್ತಿಗಳ ಹಕ್ಕುಗಳು ಮತ್ತು ಅವರಿಗೆ ಲಭ್ಯವಿರುವ ರಕ್ಷಣೋಪಾಯಗಳ ವಂಚನೆಯನ್ನು ಸ್ವಯಂ ಪ್ರೇರಿತವಾಗಿ ವಿಚಾರಣೆ ಮಾಡಿ ಸರಿಪಡಿಸುವ ಕ್ರಮಕ್ಕಾಗಿ ಸೂಕ್ತ ಅಧಿಕಾರಿಗಳೊಂದಿಗೆ ವಿಷಯವನ್ನು ತೆಗೆದುಕೊಳ್ಳುವುದು;

## 1.4 ಲೆಕ್ಕಪರಿಶೋಧನಾ ಉದ್ದೇಶಗಳು

ಪ್ರಸಕ್ತ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು ಆರ್‌ಪಿಡಬ್ಲ್ಯುಡಿ ಅಧಿನಿಯಮದ ನಿಬಂಧನೆಗಳನ್ನು ಉಲ್ಲೇಖಿಸಿ ಕೆಳಗಿನವುಗಳನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿತು.

1. ಸೂಕ್ತ ಪುನರ್ವಸತಿ ಕ್ರಮಗಳ ಜೊತೆಗೆ ಅಂಗವಿಕಲರ ಗುರುತಿಸುವಿಕೆ ಮತ್ತು ಪರಿಶೀಲನೆಗಾಗಿ ಸರಿಯಾದ ಯೋಜನೆ ಜಾರಿಯಲ್ಲಿತ್ತೇ;
2. ಅಂಗವಿಕಲರ ಸಬಲೀಕರಣ ಮತ್ತು ಪುನರ್ವಸತಿ ವಿಧಾನಗಳ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿತ್ತೇ; ಮತ್ತು
3. ಹಣಕಾಸು ನಿರ್ವಹಣೆ, ಮೇಲ್ವಿಚಾರಣೆ ಮತ್ತು ಆಂತರಿಕ ನಿಯಂತ್ರಣ ವ್ಯವಸ್ಥೆ ಸೇರಿದಂತೆ ಅಸ್ತಿತ್ವದಲ್ಲಿರುವ ಆಡಳಿತ ವ್ಯವಸ್ಥೆಯು ಪರಿಣಾಮಕಾರಿಯಾಗಿತ್ತೇ.

## 1.5 ಲೆಕ್ಕಪರಿಶೋಧನಾ ಮಾನದಂಡಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಮಾನದಂಡಗಳನ್ನು ಈ ಕೆಳಗಿನವುಗಳಿಂದ ಪಡೆಯಲಾಯಿತು:

- ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995
- ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) (ಕರ್ನಾಟಕ) ನಿಯಮಗಳು, 2003
- ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016
- ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ನಿಯಮ, 2017

- ಕರ್ನಾಟಕ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ನಿಯಮಗಳು, 2019
- ಯೋಜನಾ ಅಧಿಸೂಚನೆಗಳು ಮತ್ತು ಮಾರ್ಗಸೂಚಿಗಳು
- ರಿಹ್ಯಾಬಿಲಿಟೇಶನ್ ಕೌನ್ಸಿಲ್ ಆಫ್ ಇಂಡಿಯಾ ಆಕ್ಟ್, 1992
- ಆಟಿಸಮ್, ಸೆರೆಬ್ರಲ್ ಪಾಲ್ಸಿ, ಮಾನಸಿಕ ಕುಂಠಿತ ಮತ್ತು ಬಹು ಅಂಗವೈಕಲ್ಯಗಳ ಅಧಿನಿಯಮ, 1999 ಹೊಂದಿರುವ ವ್ಯಕ್ತಿಗಳ ಕಲ್ಯಾಣಕ್ಕಾಗಿ ರಾಷ್ಟ್ರೀಯ ಟ್ರಸ್ಟ್
- ಇಲಾಖೆಯ ವಾರ್ಷಿಕ ಯೋಜನೆಗಳು ಮತ್ತು ರಾಜ್ಯ ಆಯುಕ್ತರ ವಾರ್ಷಿಕ ವರದಿಗಳು
- ಕಾಲಕಾಲಕ್ಕೆ ಸರ್ಕಾರ/ಸಮರ್ಥ ಪ್ರಾಧಿಕಾರದಿಂದ ಹೊರಡಿಸಲಾದ ಸೂಚನೆಗಳು ಮತ್ತು ಮಾರ್ಗಸೂಚಿಗಳು.

## 1.6 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು 2016–17ರಿಂದ 2020–21ರ ಅವಧಿಗೆ ನವೆಂಬರ್ 2020 ರಿಂದ ಜುಲೈ 2021ರವರೆಗೆ ಮತ್ತು ಅಕ್ಟೋಬರ್ 2022ರಿಂದ ಜನವರಿ 2023ರವರೆಗೆ ನಡೆಸಲಾಯಿತು ಹಾಗೂ ಮಾರ್ಚ್ 2022 ರವರೆಗೆ ಇಂದೀಕರಿಸಲಾಯಿತು.

ಲೆಕ್ಕಪರಿಶೋಧನಾ ವಿಧಾನವು ಸಚಿವಾಲಯ, ನಿರ್ದೇಶನಾಲಯ ಮತ್ತು 11 ಜಿಲ್ಲಾ ಕಚೇರಿಗಳಲ್ಲಿ[1] ದಾಖಲೆಗಳ ವಿಶ್ಲೇಷಣೆಯ ಮೂಲಕ ದತ್ತಾಂಶವನ್ನು ಸಂಗ್ರಹಿಸುವುದನ್ನು ಒಳಗೊಂಡಿತ್ತು ಮತ್ತು ಆಯ್ದ ಜಿಲ್ಲೆಗಳಲ್ಲಿ ಪರೀಕ್ಷಾ–ತನಿಖೆ ನಡೆಸಲಾದ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುತ್ತಿರುವ 111ರಲ್ಲಿ 70 ಸಂಸ್ಥೆಗಳು/ಶಾಲೆಗಳಲ್ಲಿ ಜಂಟಿ ತಪಾಸಣೆಗಳನ್ನು ನಡೆಸುವುದರ ಜೊತೆಗೆ ಲೆಕ್ಕಪರಿಶೋಧನಾ ವಿಚಾರಣೆಗಳು/ಪ್ರಶ್ನಾವಳಿಗಳು/ ಪ್ರೊಫಾರ್ಮಾಗಳಿಗೆ ಪ್ರತಿಕ್ರಿಯೆಯನ್ನು ಪಡೆಯುವುದನ್ನು ಒಳಗೊಂಡಿತ್ತು.

ಲೆಕ್ಕಪರಿಶೋಧನಾ ಉದ್ದೇಶಗಳು, ಮಾನದಂಡಗಳು, ವ್ಯಾಪ್ತಿ ಮತ್ತು ವಿಧಾನಗಳ ಕುರಿತು ಚರ್ಚಿಸಲು ಆಯುಕ್ತರೊಂದಿಗೆ 11 ಡಿಸೆಂಬರ್ 2020ರಂದು ಪ್ರವೇಶ ಸಭೆಯನ್ನು ನಡೆಸಲಾಯಿತು. 9 ಫೆಬ್ರವರಿ 2023ರಂದು ನಡೆದ ನಿರ್ಗಮನ ಸಭೆಯಲ್ಲಿ ಲೆಕ್ಕಪರಿಶೋಧನಾ ಸಂಶೋಧನೆಗಳನ್ನು ನಿರ್ದೇಶಕರೊಂದಿಗೆ ಚರ್ಚಿಸಲಾಯಿತು. ಕರಡು ಲೆಕ್ಕಪರಿಶೋಧನಾ ವರದಿಗೆ (ಮೇ 2023) ಸರ್ಕಾರದ ಪ್ರತಿಕ್ರಿಯೆ ಮತ್ತು ನಿರ್ಗಮನ ಸಮ್ಮೇಳನದಲ್ಲಿ ಅವರ ಟಿಪ್ಪಣಿಗಳನ್ನು ಈ ವರದಿಯಲ್ಲಿ ಸೂಕ್ತವಾಗಿ ಅಳವಡಿಸಲಾಗಿದೆ.

## 1.7 ಕೃತಜ್ಞತೆ

ಲೆಕ್ಕಪರಿಶೋಧನೆಯು ಡಿಇಡಿಎಎಸ್‌ಸಿ ಅಧಿಕಾರಿಗಳು ಮತ್ತು ಸಿಬ್ಬಂದಿ, ರಾಜ್ಯ ಆಯುಕ್ತರು ಮತ್ತು ಪರೀಕ್ಷಾ–ತನಿಖೆ ನಡೆಸಿದ ಸಂಸ್ಥೆಗಳು ಲೆಕ್ಕಪರಿಶೋಧನೆಯ ನಡೆಸುವಲ್ಲಿ ನೀಡಿದ ಸಹಕಾರ ಮತ್ತು ಸಹಾಯವನ್ನು ಸ್ಮರಿಸುತ್ತದೆ.

[1] ಬೆಂಗಳೂರು ನಗರ, ಬೀದರ್, ಬೆಳಗಾವಿ, ಬಾಗಲಕೋಟೆ, ಚಿತ್ರದುರ್ಗ, ದಕ್ಷಿಣಕನ್ನಡ, ಹಾಸನ, ಹಾವೇರಿ, ಮೈಸೂರು, ರಾಯಚೂರು ಮತ್ತು ರಾಮನಗರ.

# ಅಧ್ಯಾಯ–II

# ಯೋಜನೆ ಮತ್ತು ಹಣಕಾಸು ನಿರ್ವಹಣೆ

## ಅಧ್ಯಾಯ–II: ಯೋಜನೆ ಮತ್ತು ಹಣಕಾಸು ನಿರ್ವಹಣೆ

*ಸರ್ಕಾರವು ಆರ್‌ಪಿಡಬ್ಲ್ಯುಡಿ ನಿಯಮಗಳನ್ನು ಅಧಿಸೂಚಿಸಲು ವಿಳಂಬ ಮಾಡಿದ್ದು ಅಧಿನಿಯಮ ಮತ್ತು ನಿಯಮಗಳ ವಿಳಂಬದ ಅನುಷ್ಠಾನಕ್ಕೆ ಕಾರಣವಾಯಿತು. ಆರ್‌ಪಿಡಬ್ಲ್ಯುಡಿ ಅಧಿನಿಯಮದಲ್ಲಿ ಉಲ್ಲೇಖಿಸಿದಂತೆ ಎಲ್ಲಾ ಅಂಗವಿಕಲತೆಗಳನ್ನು ಒಳಗೊಂಡಿರುವ ಸಮಗ್ರ ಸಮೀಕ್ಷೆಯನ್ನು ನಡೆಸಲು ಇಲಾಖೆಯು ವಿಫಲವಾಗಿತ್ತು, ತತ್ಪರಿಣಾಮವಾಗಿ ವಿವಿಧ ಅಂಗವಿಕಲ ವ್ಯಕ್ತಿಗಳ ದತ್ತಸಂಚಯವನ್ನು ಹೊಂದಿರಲಿಲ್ಲ. ಯುಡಿಐಡಿ ಕಾರ್ಡ್‌ಗಳನ್ನು ಕಡ್ಡಾಯಗೊಳಿಸುವಲ್ಲಿನ ಮತ್ತು ಯುಡಿಐಡಿ ಕಾರ್ಡ್‌ಗಳನ್ನು ಪಡೆಯಲು ಸಮಯದ ಚೌಕಟ್ಟನ್ನು ನಿಗದಿಪಡಿಸುವಲ್ಲಿನ ವಿಫಲತೆಯು ಕಾರ್ಡ್‌ಗಳಿಗೆ ಪಡೆಯಲು ಅಂಗವಿಕಲ ವ್ಯಕ್ತಿಗಳನ್ನು ವಿಮುಖರಾಗಿಸಿತ್ತು. ಅಂಗವಿಕಲರ ಸಬಲೀಕರಣ ಮತ್ತು ಪುನರ್ವಸತಿಗಾಗಿ ಒದಗಿಸಲಾದ ಸಂಪೂರ್ಣ ಹಣವನ್ನು ಬಳಸಿಕೊಳ್ಳುವಲ್ಲಿ ಇಲಾಖೆಯು ವಿಫಲವಾಗಿತ್ತು. ರಾಜ್ಯ ಸರ್ಕಾರವು ಕೇಂದ್ರದ ನೆರವನ್ನು ಪಡೆಯಲು ವಿಫಲವಾಗಿದ್ದರಿಂದ ತನ್ನದೇ ಆದ ಮೂಲಗಳಿಂದ ವೆಚ್ಚ ಮಾಡಬೇಕಾಯಿತು. ಸಾಕಷ್ಟು ಮೇಲ್ವಿಚಾರಣಾ ಕಾರ್ಯವಿಧಾನವಿಲ್ಲದೆ, ನಿಗದಿಪಡಿಸಿದ ಇತರ ಇಲಾಖೆಗಳ ಆಯವ್ಯಯ ಹಂಚಿಕೆಗಳಲ್ಲಿ ನಿಧಿಗಳ ಮೀಸಲಾತಿ ಅಥವಾ ಬಳಕೆಯನ್ನು ಖಚಿತಪಡಿಸಿಕೊಳ್ಳದಿದ್ದುದರಿಂದ ಅಂಗವಿಕಲರಿಗೆ ಸರಿಯಾದ ಪ್ರಯೋಜನಗಳನ್ನು ನಿರಾಕರಿಸಿದಂತಾಯಿತು. ಅಸ್ತಿತ್ವದಲ್ಲಿರುವ ಕಾಯಿದೆ ಮತ್ತು ನಿಯಮಗಳ ನಿಬಂಧನೆಗಳನ್ನು ಕಾಲಕಾಲಕ್ಕೆ ಅನುಷ್ಠಾನ ಮಾಡಲು ರಾಜ್ಯದಲ್ಲಿ ಸ್ಥಾಪಿಸಲಾದ ಸಾಂಸ್ಥಿಕ ಕಾರ್ಯವಿಧಾನವು ಅಸಮರ್ಪಕವಾಗಿತ್ತು ಮತ್ತು ಅದರ ಪ್ರಯತ್ನಗಳಲ್ಲಿ ಕೊರತೆಯಿದ್ದಿತು.*

*ಯೋಜನೆಗಳ ಅನುಷ್ಠಾನಕ್ಕೆ ನಿಗದಿಪಡಿಸಲಾದ ನೀತಿಗಳು ಮತ್ತು ಮಾರ್ಗಸೂಚಿಗಳಿಗೆ ಬದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ನಿಯತಕಾಲಿಕ ಆಂತರಿಕ ಲೆಕ್ಕಪರಿಶೋಧನೆಗಳನ್ನು ನಡೆಸದಿರುವುದು ರಾಜ್ಯ ಆಯುಕ್ತರ ಕಛೇರಿಯಿಂದ ಅಧಿನಿಯಮದ ಅನುಷ್ಠಾನದ ಪರಿಣಾಮಕಾರಿಯಲ್ಲದ ಮೇಲ್ವಿಚಾರಣೆಗೆ ಕಾರಣವಾಯಿತು.*

### 2.1 ಯೋಜನೆ

ಯೋಜನೆಯು ಸಂಪನ್ಮೂಲಗಳ ಸಮರ್ಥ ಬಳಕೆ, ನೀತಿಗಳ ಸಮಯೋಚಿತ ಅನುಸರಣೆ, ಯೋಜನೆಗಳ ಅನುಷ್ಠಾನದಲ್ಲಿ ಸನ್ನದ್ಧತೆ ಮತ್ತು ತಿಳುವಳಿಕೆಯುಳ್ಳ ನಿರ್ಧಾರವನ್ನು ಸುಗಮಗೊಳಿಸುತ್ತದೆ. ಇದು ಮಧ್ಯಸ್ಥಗಾರರ ಭಾಗವಹಿಸುವಿಕೆಯನ್ನು ಒಳಗೊಂಡಿರುತ್ತದೆ ಮತ್ತು ಸ್ಪಷ್ಟ ಉದ್ದೇಶಗಳು ಮತ್ತು ಗುರಿಗಳನ್ನು ಹೊಂದಿರುತ್ತದೆ.

ಆರ್‌ಪಿಡಬ್ಲ್ಯುಡಿ ಅಧಿನಿಯಮಕ್ಕಾಗಿನ ರಾಜ್ಯ ಆಯುಕ್ತರ ಕಛೇರಿಯು ಇಲಾಖೆಯ ಸಮನ್ವಯದೊಂದಿಗೆ ನಿರ್ದಿಷ್ಟ, ಅಳೆಯಬಹುದಾದ ಗುರಿಗಳು ಮತ್ತು ಉದ್ದೇಶಗಳನ್ನು ಪಟ್ಟಿ ಮಾಡಬೇಕು. ಅಧಿನಿಯಮದ ಅನುಷ್ಠಾನಕ್ಕೆ ಎರಡೂ ಕಛೇರಿಗಳ ಸಮನ್ವಯದ ಅಗತ್ಯವಿರುವುದರಿಂದ ಈ ಕಾರ್ಯಗಳನ್ನು ನಿರ್ವಹಿಸಲು ಯೋಜನೆಯು ಸಮಂಜಸವಾದ ಸಮಯದ ಚೌಕಟ್ಟನ್ನು ಒಳಗೊಂಡಿರಬೇಕು. ಎರಡೂ ಕಛೇರಿಗಳ ನಡುವಿನ ಸಮನ್ವಯದ ಕೊರತೆಯನ್ನು ಲೆಕ್ಕಪರಿಶೋಧನೆಯು ಗಮನಿಸಿತು, ತತ್ಪರಿಣಾಮವಾಗಿ ಅಧಿನಿಯಮದ ನಿಬಂಧನೆಗಳ ಅನುಷ್ಠಾನದ ವೇಗವು ಕುಂಠಿತವಾಗಿತ್ತು, ಉದಾಹರಣೆಗೆ ನಿಯಮಗಳ ಅಧಿಸೂಚನೆಯಲ್ಲಿ ವಿಳಂಬ, ಅಂಗವಿಕಲ ವ್ಯಕ್ತಿಗಳ ಸಮೀಕ್ಷೆಯನ್ನು ನಡೆಸದಿರುವುದು, ವಿಶಿಷ್ಟ ಅಂಗವಿಕಲರ ಗುರುತಿನ ಚೀಟಿಗಳ ವಿತರಣೆಯಲ್ಲಿ ವಿಳಂಬ (ಯುಡಿಐಡಿ), ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರಗಳನ್ನು ಸ್ಥಾಪಿಸದಿರುವುದು, ಶಾಲೆಗಳಲ್ಲಿ ಉತ್ತಮ ಮೂಲಸೌಕರ್ಯ

ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳಲು ಸಾಂಸ್ಥಿಕ ಹಾಗೂ ಸಾಮಾಜಿಕ ಜವಾಬ್ದಾರಿ ನೀತಿಯನ್ನು ರೂಪಿಸದಿರುವುದು, ಇತ್ಯಾದಿ. ಇವುಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *2.1.1 ರಾಜ್ಯ ನಿಯಮಗಳನ್ನು ಅಧಿಸೂಚಿಸುವಲ್ಲಿ ವಿಳಂಬ*

ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳೊಳಗೆ ರಾಜ್ಯ ಸರ್ಕಾರಗಳು ಅಧಿನಿಯಮದ ನಿಬಂಧನೆಗಳನ್ನು ಜಾರಿಗೊಳಿಸಲು ನಿಯಮಗಳನ್ನು ರೂಪಿಸಬೇಕೆಂದು ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 101 ನಿಗದಿಪಡಿಸುತ್ತದೆ. ರಾಜ್ಯ ಸರ್ಕಾರವು ಎರಡು ವರ್ಷಗಳಿಗೂ ಹೆಚ್ಚು ವಿಳಂಬದ ನಂತರ ಆಗಸ್ಟ್ 2019ರಲ್ಲಿ ಕರ್ನಾಟಕ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ನಿಯಮಗಳು, 2019ನ್ನು ಅಧಿಸೂಚಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಪರಿಷ್ಕೃತ ಅಧಿನಿಯಮ ಮತ್ತು ನಿಯಮಗಳ ನಿಬಂಧನೆಗಳ ಅನುಷ್ಠಾನವು ವಿಳಂಬವಾಯಿತು, ಹಾಗು ಇದು ಅಂಗವಿಕಲರಿಗೆ ವಿವಿಧ ಪ್ರಯೋಜನಗಳನ್ನು ನಿರಾಕರಿಸುವಲ್ಲಿ ಪರಿಣಮಿಸಿತು. ರಾಜ್ಯ ಸರ್ಕಾರವು ಅಂಗವಿಕಲರ ಕಲ್ಯಾಣಕ್ಕೆ ಸೂಕ್ತ ಆದ್ಯತೆಯನ್ನು ನೀಡಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಳ್ಳುವಾಗ (ಮೇ 2023) ಅಂಗವೈಕಲ್ಯ ಕ್ಷೇತ್ರದಲ್ಲಿ ಪರಿಣಿತಿಯ ಕೊರತೆ ಮತ್ತು ಹೊಸದಾಗಿ ಗುರುತಿಸಲಾದ ವಿಕಲಾಂಗತೆಗಳಲ್ಲಿ ಅನುಭವವಿಲ್ಲದಿರುವುದು ಸದರಿ ನಿಯಮಗಳನ್ನು ರೂಪಿಸುವಲ್ಲಿ ವಿಳಂಬಕ್ಕೆ ಕಾರಣವಾಯಿತು ಎಂದು ತಿಳಿಸಿತು.

### *2.1.2 ನಿರ್ದಿಷ್ಟ ಅಂಗವೈಕಲ್ಯಗಳೊಂದಿಗಿನ ವ್ಯಕ್ತಿಗಳನ್ನು ಗುರುತಿಸಲು ಸಮೀಕ್ಷೆ*

ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ (ಭಾರತ ಸರ್ಕಾರ) ಪ್ರಕಾರ, "ಅಂಗವಿಕಲ ವ್ಯಕ್ತಿಗಳ ಸಮೀಕ್ಷೆ"ಯ ಮುಖ್ಯ ಉದ್ದೇಶಗಳು ಅಂಗವೈಕಲ್ಯದ ಘಟನೆಗಳು ಮತ್ತು ಹರಡುವಿಕೆಯ ಸೂಚಕಗಳು, ಅಂಗವೈಕಲ್ಯಕ್ಕೆ ಕಾರಣ, ಅಂಗವೈಕಲ್ಯ ಪ್ರಾರಂಭವಾಗುವ ವಯಸ್ಸು, ಅಂಗವಿಕಲ ವ್ಯಕ್ತಿಗಳಿಗೆ ಲಭ್ಯವಿರುವ ಸೌಲಭ್ಯಗಳು, ಸಾರ್ವಜನಿಕ ಕಟ್ಟಡ/ಸಾರ್ವಜನಿಕ ಸಾರಿಗೆಯನ್ನು ಪ್ರವೇಶಿಸುವಲ್ಲಿ ಅಂಗವಿಕಲ ವ್ಯಕ್ತಿಗಳು ಎದುರಿಸುವ ತೊಂದರೆಗಳು, ನಿಯಮಿತ ಆರೈಕೆ ನೀಡುವವರ ವ್ಯವಸ್ಥೆ, ಅಂಗವೈಕಲ್ಯಕ್ಕೆ ಸಂಬಂಧಿಸಿದ ವೆಚ್ಚ, ಇತ್ಯಾದಿಗಳಾಗಿದ್ದವು.

2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮುಖ್ಯಮಂತ್ರಿಗಳು ಎಲ್ಲಾ 21 ಅಂಗವಿಕಲತೆಗಳನ್ನು ಒಳಗೊಂಡಿರುವ ವಿಕಲಚೇತನರ ಸಮೀಕ್ಷೆಗೆ ₹5 ಕೋಟಿ ನೀಡುವುದಾಗಿ ಘೋಷಿಸಿದ ನಂತರ ರಾಜ್ಯ ಸರ್ಕಾರವು ಸಮೀಕ್ಷೆ ನಡೆಸಲು ₹5 ಕೋಟಿ ವೆಚ್ಚವನ್ನು ಭರಿಸಲು ಅನುಮತಿ ನೀಡಿತು (ಸೆಪ್ಟೆಂಬರ್ 2018). ಈ ಸಮೀಕ್ಷೆಯು ಅಂಗವಿಕಲ ವ್ಯಕ್ತಿಗಳ ದತ್ತಸಂಚಯದ ರಚನೆಯನ್ನು ಸಕ್ರಿಯಗೊಳಿಸುತ್ತದೆ.

ಸಮೀಕ್ಷೆ ನಡೆಸಲು ಸರ್ಕಾರವಾಗಲಿ ಅಥವಾ ರಾಜ್ಯ ಆಯುಕ್ತರಾಗಲಿ ಯಾವುದೇ ಮಾರ್ಗಸೂಚಿಗಳನ್ನು ಸೂಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎಲ್ಲಾ ರೀತಿಯ ಅಂಗವಿಕಲತೆಯ ವಿವರಗಳನ್ನು ಸೆರೆಹಿಡಿಯಲು ವೈದ್ಯಕೀಯ ತಜ್ಞರ ಸೇವೆಗಳ ಅಗತ್ಯವಿದ್ದಿತು. ಇಲಾಖೆಯು ಯಾವುದೇ ತಜ್ಞರನ್ನು ತೊಡಗಿಸಿಕೊಳ್ಳದೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪುನರ್ವಸತಿ ಕಾರ್ಯಕರ್ತರ[2] (ವಿಆರ್‌ಡಬ್ಲ್ಯು) ಮೂಲಕ ಸಮೀಕ್ಷೆಯನ್ನು ನಡೆಸಿತು (ಫೆಬ್ರವರಿ–ಮಾರ್ಚ್ 2021) ಮತ್ತು 21 ಅಂಗವಿಕಲತೆಗಳಲ್ಲಿ ಎಂಟರಿಂದ ಒಂಬತ್ತರ

[2] ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೇ ವಾಸವಾಗಿದ್ದು 10ನೇ ತರಗತಿವರೆಗೆ ವ್ಯಾಸಂಗ ಮಾಡಿರುವ 18–45 ವಯೋಮಾನದ ಅಂಗವಿಕಲ ವ್ಯಕ್ತಿಯನ್ನು ವಿಆರ್‌ಡಬ್ಲ್ಯೂ ಆಗಿ ನೇಮಕ ಮಾಡಲಾಗುತ್ತದೆ.

ವಿವರಗಳನ್ನು ಪಟ್ಟಿ ಮಾಡಿತು. ಇದಲ್ಲದೆ, ಬೆಂಗಳೂರು ನಗರ ಜಿಲ್ಲೆಯಲ್ಲಿ, 2011ರ ಜನಗಣತಿಯ ಪ್ರಕಾರ 2.74 ಲಕ್ಷ ಅಂಗವಿಕಲರಿಗೆ ಪ್ರತಿಯಾಗಿ ಕೇವಲ 3,860 ಅಂಗವಿಕಲರನ್ನು ಸಮೀಕ್ಷೆ ಮಾಡಿರುವುದರಿಂದ ನಡೆಸಿದ ಸಮೀಕ್ಷೆಯು ನಗಣ್ಯವಾಗಿತ್ತು. ಅಪೂರ್ಣ ವ್ಯಾಪ್ತಿಯ ಸಮೀಕ್ಷೆಯನ್ನು ನಿಷ್ಪರಿಣಾಮಕಾರಿಯನ್ನಾಗಿ ಮಾಡಿತ್ತು ಮತ್ತು ಅದರ ಉದ್ದೇಶವನ್ನು ಸಾಕಾರಗೊಳಿಸಲಿಲ್ಲ. ತತ್ಪರಿಣಾಮವಾಗಿ, ಅಧಿನಿಯಮ ಜಾರಿಗೆ ಬಂದು ಆರು ವರ್ಷಗಳಾದರೂ ಆರ್‌ಪಿಡಬ್ಲ್ಯುಡಿ ಅಧಿನಿಯಮದಡಿ ಗುರುತಿಸಲಾದ 21 ಅಂಗವಿಕಲತೆಗಳ ಪೈಕಿ ಅಂಗವಿಕಲ ವ್ಯಕ್ತಿಗಳ ಸಂಖ್ಯೆಯ ಬಗ್ಗೆ ಸಮಗ್ರ ಮಾಹಿತಿಯನ್ನು ಇಲಾಖೆಯು ಹೊಂದಿರಲಿಲ್ಲ.

ಇದಲ್ಲದೆ, ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 17 (ಎ) ಅಂಗವಿಕಲ ಮಕ್ಕಳನ್ನು ಗುರುತಿಸಲು ಮತ್ತು ಅವರ ವಿಶೇಷ ಅಗತ್ಯತೆಗಳನ್ನು ಎಷ್ಟರ ಮಟ್ಟಿಗೆ ಪೂರೈಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರತಿ ಐದು ವರ್ಷಗಳಿಗೊಮ್ಮೆ ಶಾಲೆಗೆ ಹೋಗುವ ಮಕ್ಕಳ ಸಮೀಕ್ಷೆಯನ್ನು ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ನಡೆಸಬೇಕೆಂದು ನಿಗದಿಪಡಿಸುತ್ತದೆ. ಈ ಅಧಿನಿಯಮ ಜಾರಿಯಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯಲ್ಲಿ ಮೊದಲ ಸಮೀಕ್ಷೆಯನ್ನು ನಡೆಸಬೇಕಾಗಿತ್ತು, ಆದರೆ ಸಮೀಕ್ಷೆಯನ್ನು ಇನ್ನೂ ನಡೆಸಿರಲಿಲ್ಲ (ಮಾರ್ಚ್ 2023). ರಾಜ್ಯ ಸರ್ಕಾರ ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಸಮೀಕ್ಷೆಯನ್ನು ಕೈಗೊಳ್ಳುವಲ್ಲಿ ಸರ್ಕಾರದ ವಿಫಲತೆಯು ಹೆಚ್ಚಿನ ಸಂಖ್ಯೆಯ ವಿಕಲಾಂಗ ವ್ಯಕ್ತಿಗಳು ತಮ್ಮನ್ನು ಸಬಲರಾಗಿಸುವ ಕಲ್ಯಾಣ ಕ್ರಮಗಳಿಂದ ವಂಚಿತರಾಗುವಲ್ಲಿ ಪರಿಣಮಿಸುತ್ತದೆ.

### *2.1.3 ದತ್ತಸಂಚಯದ ಅಲಭ್ಯತೆ*

ಪಿಡಬ್ಲ್ಯುಡಿ ಮತ್ತು ಆರ್‌ಪಿಡಬ್ಲ್ಯುಡಿ ಅಧಿನಿಯಮಗಳು ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳ ಅನುಷ್ಠಾನದ ಮೂಲಕ ಶಿಕ್ಷಣ, ಉದ್ಯೋಗ ಮತ್ತು ಪುನರ್ವಸತಿಗೆ ಅವಕಾಶಗಳನ್ನು ಒದಗಿಸುತ್ತವೆ. ತತ್ಪರಿಣಾಮವಾಗಿ, ಇಲಾಖೆಯು ರಾಜ್ಯದಲ್ಲಿನ ಅಂಗವಿಕಲರ, ವಿದ್ಯಾರ್ಥಿವೇತನಗಳ, ಪಿಂಚಣಿಗಳ ಮತ್ತು ಯೋಜನೆಗಳನ್ನು ಸ್ಥಾಪಿಸಲು ಇತರ ಹಣಕಾಸಿನ ನೆರವು ಸೇರಿದಂತೆ ಸರ್ಕಾರದಿಂದ ಪಡೆದ ಪ್ರಯೋಜನಗಳು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಚಯಿಸಿದ ವಿವಿಧ ಯೋಜನೆಗಳ ದತ್ತಾಂಶವನ್ನು ನಿರ್ವಹಿಸುವ ಅಗತ್ಯವಿದೆ.

ಅಂಗವಿಕಲರ, ಜಾರಿಗೊಳಿಸಿದ ಯೋಜನೆಗಳ, ಪಡೆದ ಪ್ರಯೋಜನಗಳು ಇತ್ಯಾದಿಗಳ ಸಮಗ್ರ ದತ್ತಸಂಚಯವನ್ನು ಇಲಾಖೆಯು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಯೋಜನಾ ಪ್ರಕ್ರಿಯೆ, ಮೇಲ್ವಿಚಾರಣೆ ಮತ್ತು ನಿರ್ಣಯ ತೆಗೆದುಕೊಳ್ಳುವಿಕೆಯನ್ನು ಸುಲಭಗೊಳಿಸುತ್ತಿತ್ತು.

ಆನ್‌ಲೈನ್ ಪೋರ್ಟಲ್ ಮೂಲಕ ಎಲ್ಲಾ ಫಲಾನುಭವಿ ಆಧಾರಿತ ಯೋಜನೆಗಳನ್ನು ಜಾರಿಗೊಳಿಸಲು ಇಲಾಖೆಯು ನಿರ್ಧರಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು.

ಅಂಗವಿಕಲ ವ್ಯಕ್ತಿಗಳಿಗಾಗಿನ ಯೋಜನೆಗಳ ಸುಗಮ ಮತ್ತು ಅಧಿಕೃತ ಅನುಷ್ಠಾನವನ್ನು ಸಕ್ರಿಯಗೊಳಿಸುವ ಅಂಗವಿಕಲ ವ್ಯಕ್ತಿಗಳ ದತ್ತಸಂಚಯದ ಅಗತ್ಯತೆಯನ್ನು ಬಗೆಹರಿಸುವ ಬಗ್ಗೆ ಸರ್ಕಾರದ ಉತ್ತರವು ಮೌನವಾಗಿತ್ತು.

### *2.1.4 ಅಂಗವಿಕಲ ವ್ಯಕ್ತಿಗಳಿಗೆ ವಿಶಿಷ್ಟ ಗುರುತಿನ ಚೀಟಿಗಳನ್ನು ನೀಡುವಲ್ಲಿ ವಿಳಂಬ*

ಭಾರತ ಸರ್ಕಾರವು ಅಂಗವಿಕಲ ವ್ಯಕ್ತಿಗಳಿಗೆ ಸಾರ್ವತ್ರಿಕ ಗುರುತಿನ ಚೀಟಿ (ಯುಡಿಐಡಿ) ಮತ್ತು ಅಂಗವಿಕಲತೆಯ ಪ್ರಮಾಣಪತ್ರಗಳನ್ನು ನೀಡುವುದಕ್ಕಾಗಿ ಅಂಗವಿಕಲರ ರಾಷ್ಟ್ರೀಯ

ದತ್ತಸಂಚಯವನ್ನು ರಚಿಸಲು ಮತ್ತು ಸಮಗ್ರವಾದ ಎಂಡ್–ಟು–ಎಂಡ್ ಇಂಟಿಗ್ರೇಟೆಡ್ ಸಿಸ್ಟಮ್‌ಅನ್ನು ನಿರ್ಮಿಸುವ ಯೋಜನೆಯನ್ನು ಪ್ರಾರಂಭಿಸಿತು (ಮಾರ್ಚ್ 2016).

ತಂತ್ರಾಂಶವು ಅಂಗವಿಕಲತೆ ಪ್ರಮಾಣಪತ್ರಗಳನ್ನು ನೀಡಲು ಆನ್‌ಲೈನ್ ವೇದಿಕೆಯನ್ನು ಒದಗಿಸುತ್ತದೆ. ಯೋಜನೆಯು ಪಾರದರ್ಶಕತೆ, ದಕ್ಷತೆ ಮತ್ತು ಅಂಗವಿಕಲರಿಗೆ ಸರ್ಕಾರದ ಸವಲತ್ತುಗಳನ್ನು ಸುಲಭವಾಗಿ ತಲುಪಿಸುವುದನ್ನು ಉತ್ತೇಜಿಸುತ್ತದೆ ಮತ್ತು ಶ್ರೇಣಿಯ ಎಲ್ಲಾ ಹಂತಗಳಲ್ಲಿ – ಅಂದರೆ, ಗ್ರಾಮ ಮಟ್ಟ, ಬ್ಲಾಕ್ ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಮತ್ತು ರಾಷ್ಟ್ರ ಮಟ್ಟದಲ್ಲಿ ಫಲಾನುಭವಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಸಹಾಯ ಮಾಡುತ್ತದೆ. ದತ್ತಸಂಚಯವು ವೈಯಕ್ತಿಕ ವಿವರಗಳು, ಗುರುತಿನ ವಿವರಗಳು, ಅಂಗವೈಕಲ್ಯ ವಿವರಗಳು (ಅಂಗವೈಕಲ್ಯದ ಪ್ರಕಾರ, ಅಂಗವೈಕಲ್ಯದ ಶೇಕಡಾ ಇತ್ಯಾದಿ.) ಶಿಕ್ಷಣದ ಸ್ಥಿತಿ, ಉದ್ಯೋಗದ ವಿವರಗಳು, ಆದಾಯದ ಮಟ್ಟ (ಬಿಪಿಎಲ್/ಎಪಿಎಲ್, ಇತ್ಯಾದಿ) ಯೋಜನೆಗೆ ಸಂಬಂಧಿಸಿದ ವಿವರಗಳು ಇತ್ಯಾದಿಗಳನ್ನು ಕಲೆಹಾಕುತ್ತದೆ.


ಅಂಗವಿಕಲ ವ್ಯಕ್ತಿಗಳು ಯುಡಿಐಡಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವ ಅಗತ್ಯವಿದೆ. ಒಮ್ಮೆ ನೋಂದಾಯಿಸಿದ ನಂತರ, ಲಾಗಿನ್ ಪೂರ್ಣಗೊಂಡ ನಂತರ, ಅಂಗವಿಕಲ ಪ್ರಮಾಣಪತ್ರ ಮತ್ತು ಯುಡಿಐಡಿ ಕಾರ್ಡ್‌ಗಾಗಿ ಅಂಗವಿಕಲ ವ್ಯಕ್ತಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತದೆ ಮತ್ತು ಅಂಗವೈಕಲ್ಯ ಪ್ರಮಾಣಪತ್ರ/ಯುಡಿಐಡಿ ಕಾರ್ಡ್‌ನ ನವೀಕರಣಕ್ಕಾಗಿ ಮತ್ತು ಅವರ ಯುಡಿಐಡಿ ಕಾರ್ಡ್ ಕಳೆದುಹೋದ ಸಂದರ್ಭದಲ್ಲಿ ಮತ್ತೊಂದು ಕಾರ್ಡ್‌ಗಾಗಿ ಅವರ ವಿನಂತಿಯನ್ನು ಮುಂದಿಡುವುದರ ಜೊತೆಗೆ ಅವರ ಅರ್ಜಿಯ ಸ್ಥಿತಿಯನ್ನು ಟ್ರ್ಯಾಕ್ ಮಾಡಲು ಸಾಧ್ಯವಾಗುತ್ತದೆ. ಅಂಗವಿಕಲರು ತಮ್ಮ ಅಂಗವೈಕಲ್ಯ ಪ್ರಮಾಣಪತ್ರ/ಯುಡಿಐಡಿ ಕಾರ್ಡ್‌ನ ಪ್ರತಿಯನ್ನು ಡೌನ್‌ಲೋಡ್ ಮಾಡಬಹುದು ಮತ್ತು ಮುದ್ರಿಸಬಹುದು.

ಯುಡಿಐಡಿಯ ಒಂದು ವಿಶಿಷ್ಟ ಲಕ್ಷಣವೆಂದರೆ ಅಂಗವೈಕಲ್ಯದ ಮೌಲ್ಯಮಾಪನಕ್ಕಾಗಿ ಅವರ ಮುಖ್ಯ ವೈದ್ಯಕೀಯ ಅಧಿಕಾರಿ ಕಛೇರಿ/ವೈದ್ಯಕೀಯ ಪ್ರಾಧಿಕಾರದ, ನೆರವನ್ನು ಪಡೆಯಲು ಜಿಲ್ಲಾ ಕಲ್ಯಾಣಾಧಿಕಾರಿಗಳ  ಸ್ಥಳವನ್ನು ಗುರುತಿಸಬಹುದು ಮತ್ತು ಇತ್ತೀಚಿನ ಸುದ್ದಿ/ಪ್ರಕಟಣೆಗಳನ್ನು ವೀಕ್ಷಿಸುವುದರ ಜೊತೆಗೆ ವಿಕಲಚೇತನರಿಗಾಗಿ ವಿವಿಧ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವ ಅವಕಾಶವಿರುತ್ತದೆ.

ಅಂಗವೈಕಲ್ಯತೆಯ ಪ್ರಮಾಣಪತ್ರ ನೀಡುವ ಅಧಿಕಾರಿಗಳು (ಸಿಎಮ್‌ಓ ಕಛೇರಿ/ವೈದ್ಯಕೀಯ ಪ್ರಾಧಿಕಾರ) ಅಂಗವಿಕಲರ ವಿವರಗಳನ್ನು ದಾಖಲಿಸಲು ಮತ್ತು ಅಂಗವೈಕಲ್ಯತೆಯ ಪ್ರಮಾಣಪತ್ರ/ಯುಡಿಐಡಿ ಕಾರ್ಡನ್ನು ವಿದ್ಯುನ್ಮಾನವಾಗಿ ನೀಡಲು ಈ ತಂತ್ರಾಂಶವನ್ನು ಬಳಸುತ್ತಾರೆ. ಅಂಗವಿಕಲ ವ್ಯಕ್ತಿಗಳಿಂದ ಅರ್ಜಿಯನ್ನು ಸಿಎಮ್‌ಓ ಕಛೇರಿ/ವೈದ್ಯಕೀಯ ಪ್ರಾಧಿಕಾರವು ಸ್ವೀಕರಿಸುತ್ತದೆ. ಅಗತ್ಯ ಪರಿಶೀಲನೆಯ ನಂತರ, ಅಂಗವಿಕಲತೆಯ ಮೌಲ್ಯಮಾಪನಕ್ಕಾಗಿ ಅಂಗವಿಕಲರನ್ನು ಗೊತ್ತುಪಡಿಸಿದ ತಜ್ಞ/ವೈದ್ಯಕೀಯ ಮಂಡಳಿಗೆ ಉಲ್ಲೇಖಿಸಲಾಗುತ್ತದೆ ಮತ್ತು ಮೌಲ್ಯಮಾಪನ ಮುಗಿದ ನಂತರ ಮೌಲ್ಯಮಾಪನದ ವಿವರಗಳನ್ನು ಸಲ್ಲಿಸಲಾಗುತ್ತದೆ ಹಾಗೂ ಅಂಗವೈಕಲ್ಯ ಪ್ರಮಾಣಪತ್ರ/ಯುಡಿಐಡಿ ಕಾರ್ಡನ್ನು ವಿದ್ಯುನ್ಮಾನವಾಗಿ ನೀಡಲಾಗುತ್ತದೆ. ಯುಡಿಯಡಿಯ ಮಾದರಿ ಚಿತ್ರವನ್ನು **ಪ್ರದರ್ಶಿಕೆ–2.1**ರಲ್ಲಿ ನೀಡಲಾಗಿದೆ.


ಅಂಗವಿಕಲರ ಪ್ರಮಾಣಪತ್ರ/ಯುಡಿಐಡಿ ಕಾರ್ಡ್ ಪಡೆಯಲು ಅಂಗವಿಕಲರಿಗೆ ಅನುಕೂಲವಾಗುವಂತೆ ಜಿಲ್ಲಾ ಕಲ್ಯಾಣಾಧಿಕಾರಿ/ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಯುಡಿಐಡಿ ಪೋರ್ಟಲ್ ಅನ್ನು ಅರ್ಜಿ ಸ್ವೀಕರಿಸುವ ಕೌಂಟರ್, ಶಿಬಿರಗಳಲ್ಲಿ ಅನುಕೂಲ ಕಲ್ಪಿಸುವ ಮೂಲಕ ಬಳಸಬೇಕು. ಅಂಗವಿಕಲರಿಗೆ ಉದ್ದೇಶಿಸಿರುವ ಯೋಜನೆಗಳ ಸುಗಮ ಅನುಷ್ಠಾನಕ್ಕೆ ವೆಬ್ ಪೋರ್ಟಲ್ ಸಹ ಸಹಾಯವಾಗುತ್ತದೆ.

**ಪ್ರದರ್ಶಿಕೆ–2.1. ಅಂಗವಿಕಲ ವ್ಯಕ್ತಿಗಳ ವಿಶಿಷ್ಟ ಗುರುತಿನ ಚೀಟಿ**




ಕರ್ನಾಟಕದಲ್ಲಿ ಯುಡಿಐಡಿ ಯೋಜನೆಯು ಏಪ್ರಿಲ್ 2019ರಲ್ಲಿ ಪ್ರಾರಂಭವಾಯಿತು. ರಾಜ್ಯದಲ್ಲಿ ಯುಡಿಐಡಿ ಯೋಜನೆಯ ಅನುಷ್ಠಾನವು ನಿಧಾನವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 31 ಡಿಸೆಂಬರ್ 2022ರಲ್ಲಿದ್ದಂತೆ, ರಾಜ್ಯದಲ್ಲಿ ಕೇವಲ ಶೇಕಡಾ 46ರಷ್ಟು ವಿಕಲಚೇತನರಿಗೆ ಮಾತ್ರ ಯುಡಿಐಡಿಗಳನ್ನು ನೀಡಲಾಗಿತ್ತು.

31 ಡಿಸೆಂಬರ್ 2022ರಲ್ಲಿದ್ದಂತೆ, ನೀಡಲಾದ ಯುಡಿಐಡಿಗಳ ಜಿಲ್ಲಾವಾರು ಸ್ಥಿತಿಯನ್ನು **ನಕ್ಷೆ–2.1**ರಲ್ಲಿ ನೀಡಲಾಗಿದೆ.




ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಉತ್ತರ ಕನ್ನಡ ಜಿಲ್ಲೆ ಶೇಕಡಾ 78ರಷ್ಟು ಸಾಧನೆಯೊಂದಿಗೆ ಅಗ್ರಸ್ಥಾನದಲ್ಲಿದ್ದರೆ, 2.74ಲಕ್ಷ ಅಂಗವಿಕಲರ ಜನಸಂಖ್ಯೆ ಹೊಂದಿರುವ ಬೆಂಗಳೂರು ನಗರ ಜಿಲ್ಲೆಯು ಶೇಕಡಾ 9ರಷ್ಟು ಕಳಪೆ ಸಾಧನೆಯೊಂದಿಗೆ ಕೊನೆಯ ಸ್ಥಾನದಲ್ಲಿರುವುದನ್ನು ವಿಶ್ಲೇಷಣೆ ತೋರಿಸುತ್ತದೆ. ಭಾರತ ಸರ್ಕಾರವು ಸೂಚಿಸಿದಂತೆ ಮತ್ತು ಇತರ ರಾಜ್ಯಗಳು (ಗುಜರಾತ್ ಮತ್ತು ಉತ್ತರ ಪ್ರದೇಶ) ಅನುಸರಿಸುತ್ತಿರುವಂತೆ ಯುಡಿಐಡಿಯೊಂದಿಗೆ ಪ್ರಯೋಜನಗಳು/ರಿಯಾಯಿತಿಗಳನ್ನು ಸೇರಿಸುವ ಕ್ರಮವನ್ನು ಪ್ರಾರಂಭಿಸಲು ಇಲಾಖೆಯು ವಿಫಲವಾಗಿತ್ತು.

ಸ್ವೀಕರಿಸಿದ 9.90 ಲಕ್ಷ ಅರ್ಜಿಗಳಲ್ಲಿ 8.11 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸುತ್ತಾ (ಮೇ 2023) ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ವಿಶಿಷ್ಟ ಗುರುತಿನ ಚೀಟಿಯನ್ನು ತ್ವರಿತವಾಗಿ ವಿತರಿಸಲು ಜಂಟಿ ಸುತ್ತೋಲೆಯನ್ನು (ಆಗಸ್ಟ್ 2022) ಹೊರಡಿಸಲಾಗಿದೆ ಹಾಗೂ ಈ ಯೋಜನೆಯ ಪ್ರಗತಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು.

ವಿಶಿಷ್ಟ ಗುರುತಿನ ಚೀಟಿಗಾಗಿ ಅರ್ಜಿಗಳನ್ನು ಪ್ರಕ್ರಿಯೆಗೊಳಿಸುವಲ್ಲಿ ರಾಜ್ಯ ಸರ್ಕಾರದ ಕ್ರಮಗಳು ಗಮನಾರ್ಹವಾಗಿದ್ದರೂ 1.79 ಲಕ್ಷ ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿರುವುದು ವಾಸ್ತವಾಂಶವಾಗಿದೆ. ಪ್ರಕ್ರಿಯೆಯ ಸಮಗ್ರ ಪರಿಶೀಲನೆ, ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಜಾರಿಗೆ ತಂದ ಕ್ರಮಗಳ ಪರಿಣಾಮಕಾರಿತ್ವವು ಕಡ್ಡಾಯವಾಗಿದೆ. ಸಂಪೂರ್ಣ ಪ್ರತಿಕ್ರಿಯೆಯನ್ನು ನೀಡಲು ಮತ್ತು ಅಂಗವಿಕಲರಿಗೆ ಗುಣಮಟ್ಟದ ಸೇವೆಗಳ ಸಮರ್ಥ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಈ ಪರಿಶೀಲನೆಯು ಅತ್ಯಗತ್ಯವಾಗಿದೆ.

**ಶಿಫಾರಸು–1: ರಾಜ್ಯ ಸರ್ಕಾರವು 21 ವರ್ಗಗಳಡಿಯಲ್ಲಿ ಅಂಗವಿಕಲರ ವಿವರಗಳನ್ನು ಸೆರೆಹಿಡಿಯುವ ತಜ್ಞರ ತೊಡಗಿಸಿಕೊಳ್ಳುವಿಕೆಯೊಂದಿಗೆ ವಿವರವಾದ ಸಮೀಕ್ಷೆಯನ್ನು ನಡೆಸುವ ಮೂಲಕ ಸಮಗ್ರ ದತ್ತಸಂಚಯವನ್ನು ತಯಾರಿಸಬೇಕು. ರಾಜ್ಯ/ಕೇಂದ್ರ ಯೋಜನೆಯಡಿಯಲ್ಲಿ ಡಿಬಿಟಿಗಾಗಿ ಆಧಾರ್‌ಗೆ ಲಿಂಕ್ ಮಾಡುವ ಸಮ್ಮತಿಯೊಂದಿಗೆ ಗುರುತಿಸಲಾದ ಎಲ್ಲಾ ಅಂಗವಿಕಲ ವ್ಯಕ್ತಿಗಳಿಗೆ ವಿಶಿಷ್ಟ ಗುರುತಿನ ಚೀಟಿಗಳನ್ನು ನೀಡಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.**

### *2.1.5 ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ*

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಎನ್ನುವುದು ಹೊಣೆಗಾರಿಕೆಯೊಂದಿಗೆ ಸಂಬಂಧಿಸಿರುವ ಕಾರ್ಯತಂತ್ರದ ಲೋಕೋಪಕಾರವಾಗಿದೆ ಮತ್ತು ವಿವಿಧ ಯೋಜನೆಗಳ ಮೂಲಕ ಸಮುದಾಯದ ಅಭಿವೃದ್ಧಿ ಮತ್ತು ಹಣಕಾಸಿನ ಕಾರ್ಯಕ್ಷಮತೆಯನ್ನು ಮೀರಿ ನೋಡುವುದು ಮತ್ತು ಸಾಮಾಜಿಕ ಮತ್ತು ಪರಿಸರ ಕಾಳಜಿಗಳನ್ನು ತಮ್ಮ ಕಾರ್ಯತಂತ್ರದ ನಿರ್ವಹಣೆಗೆ ಸಂಯೋಜಿಸುವುದು. ಸರಾಸರಿ ನಿವ್ವಳ ಲಾಭದ (ಒಂದು ವರ್ಷಕ್ಕೆ ₹5 ಕೋಟಿ ನಿವ್ವಳ ಲಾಭ ಹೊಂದಿರುವ ಕಂಪನಿಗಳಿಗೆ) ಶೇಕಡಾ ಎರಡರಷ್ಟನ್ನು ವಂತಿಗೆ ನೀಡುವುದನ್ನು ಕಂಪನಿಗಳ ಕಾಯಿದೆ, 2013 ಕಡ್ಡಾಯಗೊಳಿಸುತ್ತದೆ. ಶೆಡ್ಯೂಲ್ VIIರ ಪ್ರಕಾರ ವಿಕಲಚೇತನರು ಮತ್ತು ಜೀವನೋಪಾಯ ವರ್ಧನೆಯ ಯೋಜನೆಗಳಲ್ಲಿ ವಿಶೇಷ ಶಿಕ್ಷಣ ಮತ್ತು ಉದ್ಯೋಗವನ್ನು ಹೆಚ್ಚಿಸುವ ವೃತ್ತಿ ಕೌಶಲ್ಯಗಳನ್ನು ವಿಶೇಷವಾಗಿ ಉತ್ತೇಜಿಸುವುದು ಸೂಚಿಸಲಾದ ಚಟುವಟಿಕೆಯ ಕ್ಷೇತ್ರಗಳಲ್ಲಿ ಒಂದಾಗಿತ್ತು.

ವಿಶೇಷ ಶೈಕ್ಷಣಿಕ ಶಾಲೆಗಳಿಗೆ ಸಿಎಸ್‌ಆರ್ ನಿಧಿಗಳು ಪ್ರಾಥಮಿಕವಾಗಿ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದ್ದವು ಮತ್ತು 2016–17ರಿಂದ 2021–22ರ ಅವಧಿಯಲ್ಲಿ ಕೇವಲ ಏಳು ಸಂಸ್ಥೆಗಳು ₹207.65 ಕೋಟಿ ಮೊತ್ತದ ಅನುದಾನವನ್ನು ಪಡೆದಿದ್ದವು ಎಂಬುದು ಲೆಕ್ಕಪರಿಶೋಧನೆಯಿಂದ ತಿಳಿದುಬಂದಿತು.

ಇಲಾಖೆಯು ರಾಜ್ಯದಾದ್ಯಂತ ಹಣದ ಸಮಾನ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಮಾರ್ಗಸೂಚಿಗಳನ್ನು ರೂಪಿಸಿರಲಿಲ್ಲ ಅಥವಾ ಬೆಂಗಳೂರಿನ ಹೊರಗಿನ ಪ್ರದೇಶಗಳಲ್ಲಿ ಹೂಡಿಕೆ ಮಾಡಲು ಸಂಸ್ಥೆಗಳನ್ನು ಪ್ರೋತ್ಸಾಹಿಸಿರಲಿಲ್ಲ. ಇದು ವಿಕಲಚೇತನ ವ್ಯಕ್ತಿಗಳಿಗೆ ಮೂಲಭೂತ ಸೌಕರ್ಯಗಳ ಸುಧಾರಣೆ ಮತ್ತು ಶಿಕ್ಷಣದ ಅವಕಾಶವನ್ನು ಸೀಮಿತಗೊಳಿಸಿತು.

***ನಿದರ್ಶನ***

*ಸಿಎಸ್ಆರ್ ನಿಧಿಯ ದುರುಪಯೋಗದ ಪ್ರಕರಣವೊಂದರಲ್ಲಿ, ಪ್ರಸ್ತುತ 37 ದೃಷ್ಟಿಹೀನ ವಿದ್ಯಾರ್ಥಿಗಳನ್ನು ನೋಡಿಕೊಳ್ಳುತ್ತಿರುವ ಕರ್ನಾಟಕ ಅಂಧ ಮಕ್ಕಳ ಕಲ್ಯಾಣ ಸಂಘ, ಬೆಂಗಳೂರು (ಕೆಡಬ್ಲ್ಯುಎಬಿ), ಸಾಮಾಜಿಕ ಕಾರ್ಯಕರ್ತ/ ಸಮಾಲೋಚಕರೊಬ್ಬರಿಗೆ ₹13.37 ಲಕ್ಷವನ್ನು ಪಾವತಿಸಿತ್ತು, ಇದು ಸಂಘವು ಸ್ವೀಕರಿಸಿದ ಒಟ್ಟು ಸಿಎಸ್ಆರ್ ಮೊತ್ತವಾದ ₹33.00 ಲಕ್ಷದ ಶೇಕಡಾ 45ರಷ್ಟಿತ್ತು (₹13,36,500ಕ್ಕೆ ಚೆಕ್ ಸಂಖ್ಯೆ:607261 ದಿನಾಂಕ 26-07-2017). ಪಾವತಿ ಮಾಡುವ ಮೊದಲು ಟಿಡಿಎಸ್ಅನ್ನು ಸಹ ಕಡಿತಗೊಳಿಸಲಾಗಿತ್ತು. ಸಲಹೆಗಾರರು ಕಮಿಷನ್ ಆಧಾರದ ಮೇಲೆ ಸಿಎಸ್ಆರ್ ಹಣವನ್ನು ವಿತರಿಸಲು ಸಂಸ್ಥೆಗಳಿಗೆ ಸಹಾಯ ಮಾಡುತ್ತಾರೆ. ಎಫ್ಐಆರ್ (ಏಪ್ರಿಲ್ 2018) ದಾಖಲಿಸಿದ ನಂತರ (023981 ದಿನಾಂಕ 16-07-2018 ₹13.37 ಲಕ್ಷ) ಸಲಹಾ ಶುಲ್ಕವನ್ನು ಕೆಡಬ್ಲ್ಯುಎಬಿಗೆ ಹಿಂತಿರುಗಿಸಲಾಯಿತು. ಸಲಹೆಗಾರರು ಕೇಳಿದ ಶುಲ್ಕವನ್ನು ಪಾವತಿಸುವ ಮೊದಲು ಕಾನೂನು ಅಭಿಪ್ರಾಯವನ್ನು ತೆಗೆದುಕೊಳ್ಳಲಾಗಿತ್ತು ಮತ್ತು ಶೇಕಡಾ 10ರಿಂದ 15ಕ್ಕಿಂತ ಹೆಚ್ಚಿನದನ್ನು ಪಾವತಿಸುವುದು ಸೂಕ್ತವಲ್ಲ ಎಂದು ಕಾನೂನು ತಜ್ಞರು ಉಲ್ಲೇಖಿಸಿದ್ದರು ಎಂಬುದನ್ನು ಲೆಕ್ಕಪರಿಶೋಧನೆ ಗಮನಿಸಿತು.*

ಅಂಗವಿಕಲರಿಗೆ ಸಿಎಸ್ಆರ್ ಬೆಂಬಲಕ್ಕಾಗಿ ಎಲ್ಲಾ ಕೈಗಾರಿಕಾ ವಲಯಗಳು, ಬ್ಯಾಂಕಿಂಗ್ ವಲಯಗಳು ವೇದಿಕೆಯನ್ನು ರಚಿಸಲು ರಾಜ್ಯ ಆಯುಕ್ತರ ಕಛೇರಿ ವಿನಂತಿಸಿದೆ (ಮಾರ್ಚ್ 2023) ಮತ್ತು ಸಿಎಸ್ಆರ್ ನಿಧಿಯ ಸೂಕ್ತವಾದ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಮಾರ್ಗಸೂಚಿಗಳನ್ನು ರೂಪಿಸಲು ಪ್ರಮುಖ ಬ್ಯಾಂಕ್ ಮ್ಯಾನೇಜರ್‌ಗಳು ಮತ್ತು ಇತರ ಕಾರ್ಪೊರೇಟ್ ವಲಯಗಳೊಂದಿಗೆ ಸಭೆಯನ್ನು ಕರೆಯಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು.

ಅಂಗವಿಕಲ ವ್ಯಕ್ತಿಗಳಿಗೆ ಸಿಎಸ್ಆರ್ ಬೆಂಬಲವನ್ನು ಪ್ರೋತ್ಸಾಹಿಸುವ ರಾಜ್ಯ ಸರ್ಕಾರದ ಉಪಕ್ರಮವು ಸರಿಯಾದ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದ್ದರೂ, ಈ ಉಪಕ್ರಮಗಳ ರಚನೆ ಮತ್ತು ಅನುಷ್ಠಾನದಲ್ಲಿ ಹೊಣೆಗಾರಿಕೆ ಮತ್ತು ಪ್ರವೇಶದ ಅವಶ್ಯಕತೆಯಿದೆ. ಈ ಸಮಸ್ಯೆಗಳನ್ನು ಪರಿಹರಿಸುವ ಮೂಲಕ, ಅಂಗವಿಕಲರ ಜೀವನವನ್ನು ಸುಧಾರಿಸಲು ಮತ್ತು ಸಮಾಜದಲ್ಲಿ ಒಂದಾಗುವಿಕೆ ಮತ್ತು ಸಮಾನತೆಯನ್ನು ಉತ್ತೇಜಿಸಲು ಸಿಎಸ್ಆರ್ ನಿಧಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ ಎಂದು ಸರ್ಕಾರವು ಖಚಿತಪಡಿಸಿಕೊಳ್ಳಬಹುದು.

## 2.2 ಸಾಂಸ್ಥಿಕ ಚೌಕಟ್ಟು

ಆರ್‌ಪಿಡಬ್ಲ್ಯುಡಿ ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಸಮರ್ಥ ಸಾಂಸ್ಥಿಕ ರಚನೆಯನ್ನು ಹೊಂದಿರುವುದು ಅತ್ಯಗತ್ಯ. ಇದಕ್ಕೆ ಯುಡಿಐಡಿ ಯೋಜನೆಯಲ್ಲಿ ಮಾಡಿದಂತೆ ಕನಿಷ್ಠ ಹೊರಗುತ್ತಿಗೆ ಆಧಾರದ ಮೇಲೆ ಅಂಗವೈಕಲ್ಯ ಸಂಬಂಧಿತ ಸಮಸ್ಯೆಗಳಲ್ಲಿ ಜ್ಞಾನವನ್ನು ಹೊಂದಿರುವ (ಪುನರ್ವಸತಿ ಸಮಾಲೋಚನೆ, ಸಾಮಾಜಿಕ ಕಾರ್ಯ, ಸಲಹಾಸೇವೆ, ಮನೋವಿಜ್ಞಾನ, ವಿಶೇಷ ಶಿಕ್ಷಣ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಪದವಿ/ಸ್ನಾತಕೋತ್ತರ ಪದವಿ ಹೊಂದಿರುವ ಹಾಗೂ ಗೊತ್ತುಪಡಿಸಿದ ಅಸಾಮರ್ಥ್ಯಗಳು ಮತ್ತು ಕಾರ್ಯಕ್ರಮದ ಸಮನ್ವಯದೊಂದಿಗಿನ ವಿದ್ಯಾರ್ಥಿಗಳು/ ಜನಸಾಮಾನ್ಯರೊಂದಿಗೆ ನಾಲ್ಕು-ಐದು ವರ್ಷಗಳ ಕೆಲಸ ಮಾಡಿದ ಅನುಭವ ಹೊಂದಿರುವ) ತಾಂತ್ರಿಕ ವ್ಯಕ್ತಿಗಳನ್ನು ನಿಯೋಜಿಸುವ ಮೂಲಕ ಇಲಾಖೆಯ ಪುನರುಜ್ಜೀವನದ ಅಗತ್ಯವಿದೆ ಆದರೆ, ಇದನ್ನು ಇಲಾಖೆ ಮಾಡಿರಲಿಲ್ಲ.

ರಾಜ್ಯ ಆಯುಕ್ತರನ್ನು ಹೊರತುಪಡಿಸಿ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸಾಂಸ್ಥಿಕ ಚೌಕಟ್ಟನ್ನು **ಕೋಷ್ಟಕ-2.1**ರಲ್ಲಿ ನೀಡಲಾಗಿದೆ. ಅಧಿನಿಯಮದ ಪ್ರಕಾರ ಅಗತ್ಯವಿರುವ ಸಮಿತಿಗಳನ್ನು ರಾಜ್ಯ ಸರ್ಕಾರವು ವಿಳಂಬಿತವಾಗಿ ರಚಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ,

ನಿಯಮಿತವಾಗಿ ಸಭೆಗಳನ್ನು ನಡೆಸಿರಲಿಲ್ಲ, ಇದು ಅಧಿನಿಯಮದ ಬಗ್ಗೆ ಅರಿವು ಮೂಡಿಸುವುದು, ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಂಡ ಕ್ರಮಗಳ ಶಿಫಾರಸು/ಮೇಲ್ವಿಚಾರಣೆ, ಅಂಗವಿಕಲ ವ್ಯಕ್ತಿಗಳಿಗೆ ಭೇದಭಾವ ತೋರಿಸದಿರುವುದು, ಅಂಗವೈಕಲ್ಯ–ವಾರು ನಿರ್ದಿಷ್ಟ ನೀತಿಗಳು ಮತ್ತು ಕಾರ್ಯಕ್ರಮಗಳ ವಿನ್ಯಾಸದಂತಹ ತಕ್ಷಣದ ಗಮನದ ಅಗತ್ಯವಿರುವ ಪ್ರಮುಖ ಸಮಸ್ಯೆಗಳನ್ನು ಪರಿಗಣಿಸದಿರುವುದಕ್ಕೆ ಕಾರಣವಾಯಿತು.

**ಕೋಷ್ಟಕ–2.1: ಜನವರಿ 2023ರಲ್ಲಿದ್ದಂತೆ ಆರ್‌ಪಿಡಬ್ಲ್ಯುಡಿ ಅಧಿನಿಯಮದ ಅನುಷ್ಠಾನದ ಮೇಲ್ವಿಚಾರಣೆ ಮಾಡುವ ಸಾಂಸ್ಥಿಕ ರಚನೆಯ ಸ್ಥಿತಿ**

| ಕ್ರಮ ಸಂಖ್ಯೆ | ಅಧಿನಿಯಮದ ಪರಿಚ್ಛೇದ | ಸಮಿತಿ (ಅಧ್ಯಕ್ಷರು) | ಉದ್ದೇಶ | ಷರಾ |
|---|---|---|---|---|
| 1 | 66 | ರಾಜ್ಯ ಸಲಹಾ ಮಂಡಳಿ (ಇಲಾಖೆಯ ಉಸ್ತುವಾರಿ ಸಚಿವರು) | ಶಾಸನ, ಕಾರ್ಯಕ್ರಮಗಳು, ಯೋಜನೆಗಳ ಕುರಿತು ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ಮತ್ತು ಅಂಗವಿಕಲರ ಸಬಲೀಕರಣಕ್ಕಾಗಿ ಮತ್ತು ಹಕ್ಕುಗಳ ಸಂಪೂರ್ಣ ಅನುಭೋಗಕ್ಕಾಗಿ ಸಮಗ್ರ ನೀತಿಯ ನಿರಂತರ ವಿಕಸನಕ್ಕೆ ಅನುಕೂಲವಾಗುವಂತೆ ಮಾಡುವುದು | ಮಾರ್ಚ್ 2018 ರಲ್ಲಿ ರಚಿಸಲಾಗಿದೆ. ಜುಲೈ 2020ರಲ್ಲಿ ಕೇವಲ ಒಂದು ವರ್ಚುವಲ್ ಸಭೆಯನ್ನು ನಡೆಸಲಾಗಿದೆ. ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ನಂತರ ಯಾವುದೇ ಅನುಸರಣಾ ಕ್ರಮವಿಲ್ಲ. |
| 2 | 72 | ಜಿಲ್ಲಾ ಮಟ್ಟದ ಅಂಗವಿಕಲ ಸಮಿತಿ | ರಾಜ್ಯ ಸರ್ಕಾರವು ಸೂಚಿಸಿದ ಕಾರ್ಯಗಳನ್ನು ನಿರ್ವಹಿಸಲು | ರಾಜ್ಯದ 27 ಜಿಲ್ಲೆಗಳಲ್ಲಿ ಅಕ್ಟೋಬರ್ 2019 ಮತ್ತು ನವೆಂಬರ್ 2020ರ ನಡುವೆ ರಚಿಸಲಾಗಿದೆ ಮತ್ತು ಪರೀಕ್ಷಾ–ತನಿಖೆ ನಡೆಸಿದ 11 ಜಿಲ್ಲೆಗಳಲ್ಲಿ 10 ರಲ್ಲಿ ಸಭೆಗಳನ್ನು ನಡೆಸಲಾಗಿದೆ. |
| 3 | 79(7) | ವಿಕಲಚೇತನ ವಲಯದ ತಜ್ಞರಿಂದ ಪಡೆಯಲಾದ ಐದಕ್ಕಿಂತ ಹೆಚ್ಚಿರದ ಸದಸ್ಯರನ್ನು ಹೊಂದಿರುವ ರಾಜ್ಯ ಮಟ್ಟದ ಸಲಹಾ ಸಮಿತಿ | ರಾಜ್ಯ ಸರ್ಕಾರವು ಸೂಚಿಸಬಹುದಾದ ರೀತಿಯಲ್ಲಿ ರಾಜ್ಯ ಆಯುಕ್ತರಿಗೆ ನೆರವು ನೀಡುವುದು | ಡಿಸೆಂಬರ್ 2018ರಲ್ಲಿ ಸ್ಥಾಪಿಸಲಾಗಿದೆ. ಇದುವರೆಗೆ ಒಮ್ಮೆ ಮಾತ್ರ ಸಭೆ ನಡೆದಿದೆ (ಜೂನ್ 2019) |
| 4 | 23 | ಕುಂದುಕೊರತೆ ನಿವಾರಣಾ ಅಧಿಕಾರಿ | ಕುಂದುಕೊರತೆಗಳು/ ದೂರುಗಳನ್ನು ನೋಂದಾಯಿಸಲು, ಅವುಗಳನ್ನು ತನಿಖೆ ಮಾಡಿ ಮತ್ತು ಸರಿಪಡಿಸುವ ಕ್ರಮಕ್ಕಾಗಿ ಆಡಳಿತ ಮಂಡಳಿಯೊಂದಿಗೆ ವಿಷಯವನ್ನು ಚರ್ಚಿಸುವುದು | ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು ನೇಮಿಸಿಲ್ಲ. |

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ರಾಜ್ಯ ಮಟ್ಟದ ಸಲಹಾ ಮಂಡಳಿಯನ್ನು ನಡೆಸಲು ಪ್ರಸ್ತಾವನೆ ಸಲ್ಲಿಸಲಾಗಿದೆ ಮತ್ತು ಜುಲೈ 2020ರಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಅನುಪಾಲನಾ ವರದಿಗಳನ್ನು ಪಡೆಯಲು ಎಲ್ಲಾ ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು. ಆದರೆ, ಅನುಪಾಲನಾ ವರದಿಗಳು ಇನ್ನೂ ಸ್ವೀಕರಿಸಿರಲಿಲ್ಲ. 30 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ ಮತ್ತು ಎಲ್ಲಾ ಜಿಲ್ಲಾ ಮಟ್ಟದ ಸಮಿತಿಗಳು ರಾಜ್ಯ ಆಯುಕ್ತರಿಗೆ ಪ್ರಗತಿ ವರದಿಗಳನ್ನು ಸಲ್ಲಿಸಲು ಸೂಚಿಸಲಾಗಿದೆ ಎಂದೂ ಸಹ ತಿಳಿಸಲಾಯಿತು.

ಅಧಿನಿಯಮದ ಅನುಷ್ಠಾನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲು ಆರ್‌ಪಿಡಬ್ಲ್ಯುಡಿ ಅಧಿನಿಯಮದ ರಾಜ್ಯ ಆಯುಕ್ತರ ಕಛೇರಿಯು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ (ಎಐಐಎಸ್‌ಎಚ್) ರಾಜ್ಯ ಮಟ್ಟದ ಸಲಹಾ ಸಮಿತಿಯ ಸಭೆಯನ್ನು ನಡೆಸಿತು (ಆಗಸ್ಟ್ 2022).

ಕುಂದುಕೊರತೆ ನಿವಾರಣಾ ಅಧಿಕಾರಿಯ ನೇಮಕಾತಿಗೆ ಸಂಬಂಧಿಸಿದಂತೆ, ಅಧಿನಿಯಮದ ನಿಬಂಧನೆಗಳ ಪ್ರಕಾರ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು ನೇಮಿಸಲು ನಿರ್ದೇಶಿಸುವ ಸುತ್ತೋಲೆಯನ್ನು ಇಲಾಖೆಗಳು/ಮಂಡಳಿಗಳು/ನಿಗಮಗಳು/ಆಯೋಗಗಳಿಗೆ ಜಾರಿಮಾಡಿದ (ಜನವರಿ 2023) ನಂತರ ರಾಜ್ಯ ಸರ್ಕಾರದ ಹೆಚ್ಚಿನ ಇಲಾಖೆಗಳು, ಮಂಡಳಿಗಳು ಮತ್ತು ನಿಗಮಗಳು ಕುಂದುಕೊರತೆ ಅಧಿಕಾರಿಗಳನ್ನು ನೇಮಿಸಿವೆ ಎಂದು ರಾಜ್ಯ ಸರ್ಕಾರವು ತಿಳಿಸಿತು.

ಲೆಕ್ಕಪರಿಶೋಧನೆಯ ಸೂಚಿಸಿದ ನಂತರ ಮಾತ್ರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ವಿಕಲಚೇತನರ ಕಲ್ಯಾಣಕ್ಕಾಗಿ ಮತ್ತು ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಇಲಾಖೆಯ ಸಾಂಸ್ಥಿಕ ಹಸ್ತಕ್ಷೇಪವು ಪರಿಣಾಮಕಾರಿಯಾಗಿರಲಿಲ್ಲ/ಅಥವಾ ಅನುಪಸ್ಥಿತಿಯಿದ್ದಿತು ಎಂಬುದು ಮೇಲಿನವುಗಳಿಂದ ಸ್ಪಷ್ಟವಾಗಿದೆ.

### *2.2.1 ಅಂಗವಿಕಲ ವ್ಯಕ್ತಿಗಳಿಗೆ ರಾಜ್ಯ ಆಯುಕ್ತರು*

#### 2.2.1.1 ರಾಜ್ಯ ಆಯುಕ್ತರ ನಿಯೋಜನೆ

ಅಧಿನಿಯಮದ ಪರಿಚ್ಛೇದ 79ರ ನಿಬಂಧನೆಗಳ ಪ್ರಕಾರ, ಈ ಕಾಯಿದೆಯ ಅನುಷ್ಠಾನಕ್ಕಾಗಿ ಅಂಗವಿಕಲರಿಗಾಗಿ ರಾಜ್ಯ ಆಯುಕ್ತರು ಇರುತ್ತಾರೆ. ಫೆಬ್ರವರಿ 2021ರಲ್ಲಿ ರಾಜ್ಯ ಆಯುಕ್ತರ ಅವಧಿ ಪೂರ್ಣಗೊಂಡ ನಂತರ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕರು ಉಸ್ತುವಾರಿ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಲಕಾಲಕ್ಕೆ ಅಧಿಸೂಚನೆಗಳನ್ನು ಹೊರಡಿಸಲಾಗುತ್ತಿದ್ದರೂ, ಹುದ್ದೆಯನ್ನು ಇನ್ನೂ ಭರ್ತಿ ಮಾಡಲಾಗಿಲ್ಲ (ಮೇ 2023).

ಪಿಡಬ್ಲ್ಯುಡಿ ಅಧಿನಿಯಮ, 1995ರ ಪರಿಚ್ಛೇದ 60 ಮತ್ತು ಆರ್‌ಪಿಡಬ್ಲ್ಯುಡಿ ಅಧಿನಿಯಮ 2016ರ ಪರಿಚ್ಛೇದ 79ರ ಪ್ರಕಾರ, 'ಒಬ್ಬ ವ್ಯಕ್ತಿಯು ಪುನರ್ವಸತಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವವನ್ನು ಹೊಂದಿರದ ಹೊರತು ರಾಜ್ಯ ಆಯುಕ್ತರಾಗಿ ನೇಮಕಗೊಳ್ಳಲು ಅರ್ಹತೆ ಹೊಂದಿರುವುದಿಲ್ಲ'.

ಜನವರಿ 1999ರಲ್ಲಿ ಅಂಗವಿಕಲರ ರಾಜ್ಯ ಆಯುಕ್ತರ ಕಛೇರಿ ಪ್ರಾರಂಭವಾದಾಗಿನಿಂದ, ಆಯುಕ್ತರಾಗಿ ನೇಮಕಗೊಂಡಿದ್ದರು 17 ಅಧಿಕಾರಿಗಳಲ್ಲಿ 5 ಮಂದಿ ಮಾತ್ರ ಪುನರ್ವಸತಿಗೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಹೊಂದಿರುವ ವ್ಯಕ್ತಿಗಳಾಗಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉಳಿದ 12 ಮಂದಿ ಪ್ರಧಾನ ಕಾರ್ಯದರ್ಶಿಗಳು ಮತ್ತು ನಿರ್ದೇಶಕರಂತಹ ರಾಜ್ಯ ಸರ್ಕಾರದ ಅಧಿಕಾರಿಗಳಾಗಿದ್ದರು. ಸಹಾಯಕ ಆಯುಕ್ತರ ಹುದ್ದೆಯನ್ನೂ ಬೇರೆ ಇಲಾಖೆಗಳಿಂದ ಭರ್ತಿ ಮಾಡಲಾಗುತ್ತಿತ್ತು. ಹೀಗೆ, ಉನ್ನತ ನಿರ್ವಹಣೆಗೆ ವಿಶೇಷ ಅರ್ಹ ಅಧಿಕಾರಿಗಳನ್ನು ನೇಮಿಸುವ ಅಧಿನಿಯಮದ ನಿಯಮವನ್ನು ಅನೇಕ ಸಂದರ್ಭಗಳಲ್ಲಿ ಪಾಲನೆ ಮಾಡಿರಲಿಲ್ಲ.

ರಾಜ್ಯ ಆಯುಕ್ತರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ರಾಜ್ಯ ಆಯುಕ್ತರ ಹುದ್ದೆಯನ್ನು ಭರ್ತಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು. ಆದಾಗ್ಯೂ, ಫೆಬ್ರವರಿ 2021ರಿಂದ ಕಳೆದ 27 ತಿಂಗಳುಗಳಿಂದ ರಾಜ್ಯ ಆಯುಕ್ತರ ಹುದ್ದೆ ಖಾಲಿ ಉಳಿದಿತ್ತು ಎಂಬುದು ವಾಸ್ತವಾಂಶವಾಗಿದೆ. ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ, ಇದು ಅಧಿನಿಯಮದ ನಿಬಂಧನೆಗಳ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು ಏಕೆಂದರೆ ಹಲವಾರು ವಿಷಯಗಳಲ್ಲಿ ಅಧಿನಿಯಮದ ನಿಬಂಧನೆಗಳನ್ನು ಅನುಸರಿಸುತ್ತಿರಲಿಲ್ಲ ಅಥವಾ ಅನುಸರಣಾ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ.

### 2.2.1.2 ರಾಜ್ಯ ಆಯುಕ್ತರ ಕಾರ್ಯ ನಿರ್ವಹಣೆ

(i) ಆರ್‌ಪಿಡಬ್ಲ್ಯುಡಿ ಕಾಯಿದೆಯ ಪರಿಚ್ಛೇದ 80ರ ಪ್ರಕಾರ, ರಾಜ್ಯ ಆಯುಕ್ತರು (ಎ) ಈ ಅಧಿನಿಯಮಕ್ಕೆ ಅಸಮಂಜಸವಾಗಿರುವ ಯಾವುದೇ ಕಾನೂನು ಅಥವಾ ನೀತಿ, ಕಾರ್ಯಕ್ರಮ ಮತ್ತು ಕಾರ್ಯವಿಧಾನಗಳ ನಿಬಂಧನೆಗಳನ್ನು ಸ್ವಯಂಪ್ರೇರಿತವಾಗಿ ಅಥವಾ ಬೇರೆ ರೀತಿಯಲ್ಲಿ ಗುರುತಿಸಬೇಕು ಮತ್ತು ಅಗತ್ಯ ಸರಿಪಡಿಸುವ ಕ್ರಮಗಳನ್ನು ಶಿಫಾರಸು ಮಾಡಬೇಕು; ಮತ್ತು (ಬಿ) ರಾಜ್ಯ ಸರ್ಕಾರವು ಸೂಕ್ತವಾದ ಸರ್ಕಾರವಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಅಂಗವಿಕಲ ವ್ಯಕ್ತಿಗಳ ಹಕ್ಕುಗಳು ಮತ್ತು ಅವರಿಗೆ ಲಭ್ಯವಿರುವ ರಕ್ಷಣೋಪಾಯಗಳ ಹಕ್ಕುಗಳ ವಂಚನೆಯನ್ನು ಸ್ವಯಂಪ್ರೇರಿತವಾಗಿ ವಿಚಾರಿಸಬೇಕು ಮತ್ತು ಸರಿಪಡಿಸುವ ಕ್ರಮಕ್ಕಾಗಿ ಸೂಕ್ತ ಅಧಿಕಾರಿಗಳೊಂದಿಗೆ ಚರ್ಚಿಸಬೇಕು.

ಪರಿಚ್ಛೇದ 81ರ ಪ್ರಕಾರ, ರಾಜ್ಯ ಆಯುಕ್ತರು ಪರಿಚ್ಛೇದ 80ರ ಅನುಸಾರ ಪ್ರಾಧಿಕಾರಕ್ಕೆ ಶಿಫಾರಸು ಮಾಡಿದಾಗ, ಆ ಪ್ರಾಧಿಕಾರವು ಅದರ ಮೇಲೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳುತ್ತದೆ ಮತ್ತು ಶಿಫಾರಸು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ತೆಗೆದುಕೊಂಡ ಕ್ರಮವನ್ನು ಅವರಿಗೆ ತಿಳಿಸುತ್ತದೆ ಮತ್ತು ಒಂದು ವೇಳೆ ಪ್ರಾಧಿಕಾರವು ಶಿಫಾರಸನ್ನು ಸ್ವೀಕರಿಸದಿದ್ದಲ್ಲಿ, ಮೂರು ತಿಂಗಳೊಳಗೆ ರಾಜ್ಯ ಆಯುಕ್ತರಿಗೆ ಮತ್ತು ನೊಂದ ವ್ಯಕ್ತಿಗೆ ಶಿಫಾರಸನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳನ್ನು ತಿಳಿಸಬೇಕು.

ರಾಜ್ಯ ಆಯುಕ್ತರು ತಮ್ಮ ಕರ್ತವ್ಯದ ಭಾಗವಾಗಿ ಜಿಲ್ಲೆಗಳಿಗೆ ಭೇಟಿ ನೀಡಬೇಕು ಮತ್ತು ಜಾರಿಯಲ್ಲಿರುವ ಅಧಿನಿಯಮದ ಅನುಷ್ಠಾನವನ್ನು ಪರಿಶೀಲಿಸಬೇಕು ಹಾಗೂ ಸರಿಪಡಿಸಲು ಅಗತ್ಯ ಕ್ರಮಗಳನ್ನು ಶಿಫಾರಸು ಮಾಡಬೇಕು. ಆದರೆ, ಜಿಲ್ಲಾ ಮುಖ್ಯಸ್ಥರು/ಇಲಾಖೆಗಳ ಪ್ರಾಧಿಕಾರಿಗಳ ಅಧಿಕಾರಿಗಳೊಂದಿಗಿನ ಸಭೆಯ ನಡಾವಳಿಗಳನ್ನು ತಯಾರಿಸುತ್ತಿರಲಿಲ್ಲ ಮತ್ತು ದಾಖಲಿಸುತ್ತಿರಲಿಲ್ಲ. ತತ್ಪರಿಣಾಮವಾಗಿ ಶಿಫಾರಸುಗಳ ಮೇಲೆ ಯಾವುದೇ ಅನುಸರಣೆ ಇರಲಿಲ್ಲ.

ಭಾರತ ಸರ್ಕಾರದ ಅಂಗವಿಕಲ ವ್ಯಕ್ತಿಗಳ ಮುಖ್ಯ ಆಯುಕ್ತರ ರೀತಿಯಲ್ಲಿ ರಾಜ್ಯ ಆಯುಕ್ತರು ದಾಖಲಾದ ಮತ್ತು ವಿಲೇವಾರಿ ಮಾಡಿದ ಎಲ್ಲಾ ಪ್ರಕರಣಗಳ ವಿವರಗಳನ್ನು ಇಲಾಖೆಯ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ದಾಖಲಾದ ಮತ್ತು ತೀರ್ಪುಗಳನ್ನು ನೀಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಮೂರು ತಿಂಗಳೊಳಗೆ ರಾಜ್ಯ ಆಯುಕ್ತರ ಶಿಫಾರಸಿನ ಮೇರೆಗೆ ಸಂಬಂಧಿಸಿದ ಇಲಾಖೆಗಳು ತೆಗೆದುಕೊಂಡ ಕ್ರಮವು ದಾಖಲೆಯಲ್ಲಿರಲಿಲ್ಲ ಮತ್ತು ರಾಜ್ಯ ಆಯುಕ್ತರ ಕಛೇರಿಯಿಂದಲೂ ಸಹ ಅನುಸರಣಾ ಕ್ರಮ ಕೈಗೊಳ್ಳಲಾಗಿರಲಿಲ್ಲ. ಇದರಿಂದಾಗಿ ಪ್ರಕರಣಗಳ ನೋಂದಣಿ ಮತ್ತು ತೀರ್ಪುಗಳನ್ನು ನೀಡುವ ಸಂಪೂರ್ಣ ಪ್ರಕ್ರಿಯೆಯು ಬಹುಮಟ್ಟಿಗೆ ನಿಷ್ಪರಿಣಾಮಕಾರಿಯಾಗಿತ್ತು. ರಾಜ್ಯ ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

(ii) ಆರ್‌ಪಿಡಬ್ಲ್ಯುಡಿ ಕಾಯಿದೆ 2016ರ ಪರಿಚ್ಛೇದ 40ರಿಂದ 45ರ ಪ್ರಕಾರ ಮುಖ್ಯ ಆಯುಕ್ತರು ವಿಕಲಾಂಗ ವ್ಯಕ್ತಿಗಳಿಗೆ ಭೌತಿಕ ಪರಿಸರ, ಸಾರಿಗೆ, ಮಾಹಿತಿ ಮತ್ತು ಸಂವಹನಗಳಿಗೆ ಪ್ರವೇಶದ ಮಾನದಂಡಗಳನ್ನು ರೂಪಿಸುವ ನಿಯಮಗಳನ್ನು ರೂಪಿಸಬೇಕು.

ಖಾಸಗಿ ವಸತಿ ಕಟ್ಟಡದಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಪ್ರವೇಶಿಸಬಹುದಾದ ಮಾರ್ಗಗಳು, ಎಲಿವೇಟರ್‌ಗಳಲ್ಲಿ ಬ್ರೈಲ್ ಸಂಖ್ಯೆಗಳು, ನಿರ್ದಿಷ್ಟ ಪಾರ್ಕಿಂಗ್ ಜಾಗಗಳು ಮುಂತಾದ ಪ್ರವೇಶಿಸುವಿಕೆ ಸಮಸ್ಯೆಗಳ ನಿದರ್ಶನವನ್ನು ಆಯುಕ್ತರ ಕಛೇರಿಯಲ್ಲಿನ ದಾಖಲೆಗಳ ಪರಿಶೀಲನೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು.

ಅಂಗವಿಕಲರ ಹಕ್ಕುಗಳನ್ನು ರಕ್ಷಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಆರ್‌ಪಿಡಬ್ಲ್ಯುಡಿ ಕಾಯಿದೆಯ ಪ್ರಕಾರ ಅಗತ್ಯ ತಡೆರಹಿತ ವೈಶಿಷ್ಟ್ಯಗಳನ್ನು ರಚಿಸಲು ಅಪಾರ್ಟ್‌ಮೆಂಟ್‌ಗಳ ಮಾಲೀಕರಿಗೆ ರಾಜ್ಯ ಆಯುಕ್ತರು ಸೂಚನೆ ನೀಡಿದ್ದರು (ಸೆಪ್ಟೆಂಬರ್ 2020) ಮತ್ತು ಆಕ್ಯುಪೆನ್ಸಿ ಪ್ರಮಾಣಪತ್ರಗಳನ್ನು ನೀಡುವ ಮೊದಲು ಬಹುಮಹಡಿ ಕಟ್ಟಡಗಳಿಗೆ ಅಂಗವಿಕಲ ವ್ಯಕ್ತಿಗಳಿಗೆ ಪ್ರವೇಶಿಸಬಹುದಾದ ಮಾರ್ಗಗಳನ್ನು ಒದಗಿಸಬೇಕು, ಎಲಿವೇಟರ್‌ಗಳಲ್ಲಿ ಬ್ರೈಲ್ ಸಂಖ್ಯೆಗಳು ಲಭ್ಯವಿರಬೇಕು, ಅಂಗವಿಕಲ ವ್ಯಕ್ತಿಗಳಿಗೆ ನಿರ್ದಿಷ್ಟ ಪಾರ್ಕಿಂಗ್ ಜಾಗಗಳು ಇರಬೇಕು ಇತ್ಯಾದಿಗಳನ್ನು ಮತ್ತು ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ರಕ್ಷಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸ್ಥಳೀಯ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲು ಇಲಾಖೆಗೆ ನಿರ್ದೇಶನ ನೀಡಿದರು.

ಆರ್‌ಪಿಡಬ್ಲ್ಯುಡಿ ಕಾಯಿದೆಯ ರಾಜ್ಯ ಆಯುಕ್ತರು ಕಟ್ಟಡಗಳಲ್ಲಿ ಅಗತ್ಯ ಪ್ರವೇಶ ಸೌಕರ್ಯವನ್ನು ಒದಗಿಸುವಂತೆ ಪ್ರಮುಖ ವಸತಿ ಕಲ್ಯಾಣ ಸಂಘದ ಮಾಲೀಕರಿಗೆ ಸೂಚಿಸಿದ್ದಾರೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ಆದರೆ, ಕಟ್ಟಡದ ಮಾಲೀಕರು ನಿರ್ದೇಶನಗಳನ್ನು ಪಾಲಿಸಿದ್ದಾರೆಯೇ ಎಂಬ ಬಗ್ಗೆ ಉತ್ತರವು ಮೌನವಾಗಿತ್ತು.

### *2.2.2 ಅಂಗವಿಕಲತೆಯ ಮೇಲಿನ ಸಂಶೋಧನಾ ಸಮಿತಿ*

ಆರ್‌ಪಿಡಬ್ಲ್ಯುಡಿ ಕಾಯಿದೆಯ ಪರಿಚ್ಛೇದ 6ರ ಪ್ರಕಾರ, ಅಂಗವಿಕಲತೆ ಹೊಂದಿರುವ ಯಾವುದೇ ವ್ಯಕ್ತಿಯನ್ನು ಸಂವಹನದ ಸ್ವರೂಪಗಳ ಪ್ರವೇಶಿಸಬಹುದಾದ ವಿಧಾನಗಳ ಮೂಲಕ ಅವರ ಉಚಿತ ಮತ್ತು ತಿಳುವಳಿಕೆಯುಳ್ಳ ಸಮ್ಮತಿಯನ್ನು ಪಡೆದುಕೊಳ್ಳದೆ ಮತ್ತು ಅಂಗವಿಕಲತಾ ಸಂಶೋಧನಾ ಸಮಿತಿಯ ಪೂರ್ವಾನುಮತಿಯಿಲ್ಲದೆ ಯಾವುದೇ ಸಂಶೋಧನೆಯ ವಿಷಯವನ್ನಾಗಿ ಮಾಡಬಾರದು. ಸಮಿತಿಯ ಅಧ್ಯಕ್ಷರು ವಿಜ್ಞಾನ ಮತ್ತು ವೈದ್ಯಕೀಯ ಸಂಶೋಧನೆಯ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಪ್ರಖ್ಯಾತ ವ್ಯಕ್ತಿಯಾಗಿದ್ದು ನಾಮನಿರ್ದೇಶನಗೊಂಡ ಸದಸ್ಯರೊಂದಿಗೆ ಸಮಿತಿಯನ್ನು ರಚಿಸಬೇಕು. ಸಮಿತಿಯು ಸರ್ಕಾರದ ಅನುಮೋದನೆಯೊಂದಿಗೆ ವೇಳಾಪಟ್ಟಿ ಮತ್ತು ಸಂಶೋಧನಾ ನಿಯಮಗಳ ಕುರಿತು ಮಾರ್ಗಸೂಚಿಗಳನ್ನು ರೂಪಿಸುತ್ತದೆ.

ನಿಯಮಾವಳಿಗಳನ್ನು ರೂಪಿಸಿ ಎರಡೂವರೆ ವರ್ಷ ಕಳೆದರೂ ರಾಜ್ಯ ಸರ್ಕಾರ ಅಂಗವಿಕಲರ ಸಂಶೋಧನಾ ಸಮಿತಿಯನ್ನು ರಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಸಂಶೋಧನೆಗೆ ಯಾವುದೇ ಅಂಗವಿಕಲ ವ್ಯಕ್ತಿಯನ್ನು ಒಳಪಡಿಸುವ ಮೊದಲು ಒಪ್ಪಿಗೆ ಪಡೆಯುವ ಮೂಲಕ ವೈದ್ಯಕೀಯ ತನಿಖೆಗಳು/ಸಂಶೋಧನೆಗಳನ್ನು ನಡೆಸಲು ಅನುಸರಿಸಬೇಕಾದ ಕಾರ್ಯವಿಧಾನವನ್ನು ಸೂಚಿಸುವ ವಿವರವಾದ ಮಾರ್ಗಸೂಚಿಗಳು ಅಸ್ತಿತ್ವದಲ್ಲಿರಲಿಲ್ಲ.

ಅಂಗವೈಕಲ್ಯ ಕುರಿತು ಸಂಶೋಧನೆಗಾಗಿ ಸಮಿತಿಯನ್ನು ರಚಿಸಲು ಇಲಾಖೆಯು (ಫೆಬ್ರವರಿ 2023) ಸಲ್ಲಿಸಿದ ಪ್ರಸ್ತಾವನೆಯು ಪ್ರಕ್ರಿಯೆಯಲ್ಲಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು.

### *2.2.3 ಸಮಾನ ಅವಕಾಶ ನೀತಿ*

ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 21ರ ಪ್ರಕಾರ, ಪ್ರತಿ ಸಂಸ್ಥೆಯು ಅಧಿನಿಯಮದ ಪ್ರಕಾರ ತಾನು ತೆಗೆದುಕೊಳ್ಳಲು ಪ್ರಸ್ತಾವಿಸಿದ ಕ್ರಮಗಳನ್ನು ವಿವರಿಸಿ ಅಂಗವಿಕಲ ವ್ಯಕ್ತಿಗಳಿಗೆ ಸಮಾನ ಅವಕಾಶ ನೀತಿಯನ್ನು ಅಧಿಸೂಚಿಸಬೇಕು ಮತ್ತು ರಾಜ್ಯ ಆಯುಕ್ತರಲ್ಲಿ ಮೇಲೆ ಹೇಳಿದ ನೀತಿಯ ಪ್ರತಿಯನ್ನು ನೋಂದಾಯಿಸಬೇಕು. ಭಾರತ ಸರ್ಕಾರದ ಅಂಗವಿಕಲರ ಹಕ್ಕುಗಳ ನಿಯಮಗಳು, 2017ರ ನಿಯಮ 8, ಪ್ರತಿ ಸಂಸ್ಥೆಯು ಅಂಗವಿಕಲ ವ್ಯಕ್ತಿಗಳಿಗೆ ಸಮಾನ ಅವಕಾಶ ನೀತಿಯನ್ನು ಪ್ರಕಟಿಸಬೇಕು ಮತ್ತು ಸಮಾನ ಅವಕಾಶ ನೀತಿಯನ್ನು ತಮ್ಮ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಬೇಕು,

ಅದರಲ್ಲಿ ವಿಫಲವಾದರೆ ಸಂಸ್ಥೆಯ ಆವರಣದಲ್ಲಿ ಪ್ರಮುಖವಾಗಿ ಕಾಣುವ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

ಪ್ರತಿ ಸಂಸ್ಥೆಯು (ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಖಾಸಗಿ ಸಂಸ್ಥೆಗಳ ನೀತಿ ಮತ್ತು ಎಲ್ಲಾ ಸರ್ಕಾರಿ ಸಂಸ್ಥೆಗಳು) ಸಹಾಯಕ ಸಾಧನಗಳು/ತಡೆರಹಿತ ಪ್ರವೇಶ, ಸಂಪರ್ಕ ಅಧಿಕಾರಿಯ ನೇಮಕಾತಿ, ಅಂಗವಿಕಲರಿಗೆ ಹುದ್ದೆಗಳ ಗುರುತಿಸುವಿಕೆ ಮತ್ತು ಅಂತಹ ಉದ್ಯೋಗಿಗಳಿಗೆ ಒದಗಿಸಬೇಕಾದ ಸೌಲಭ್ಯಗಳು ಮತ್ತು ಸೌಕರ್ಯಗಳಿಗೆ ನಿಬಂಧನೆಗಳನ್ನು ಒಳಗೊಂಡಿರುತ್ತದೆ.

ರಾಜ್ಯ ಸರ್ಕಾರವು ಕರ್ನಾಟಕ ಅಂಗವಿಕಲ ವ್ಯಕ್ತಿಗಳ ರಾಜ್ಯ ಹಕ್ಕುಗಳ ನಿಯಮಗಳು, 2019ನ್ನು (ಕೆಆರ್‌ಪಿಡಬ್ಲ್ಯುಡಿ ನಿಯಮಗಳು) ಜಾರಿಗೊಳಿಸಿದ್ದರೂ ಮತ್ತು ಸಮಾನ ಅವಕಾಶ ನೀತಿಯ ಪ್ರಕಟಣೆ ಮತ್ತು ಪ್ರದರ್ಶನವನ್ನು ನಿಗದಿಪಡಿಸಿದ್ದರೂ, ಮೇಲೆ ಉಲ್ಲೇಖಿಸಲಾದ ಅಧಿನಿಯಮದ ಇತರ ನಿಬಂಧನೆಗಳ ಬಗ್ಗೆ ಅದು ಮೌನವಾಗಿತ್ತು. ತತ್ಪರಿಣಾಮವಾಗಿ, ನೇಮಕಗೊಂಡ ಅಂಗವಿಕಲರ ವಿವರಗಳನ್ನು ಮತ್ತು ಅವರಿಗೆ ಒದಗಿಸಲಾದ ಸೌಲಭ್ಯಗಳು ಮತ್ತು ಸೌಕರ್ಯಗಳನ್ನು ನಿರ್ವಹಿಸಲು ಖಾಸಗಿ ಸಂಸ್ಥೆಗಳಿಗೆ ಯಾವುದೇ ನಿರ್ಬಂಧವಿರಲಿಲ್ಲ. ಈ ಸಂಸ್ಥೆಗಳು ನೀತಿಯ ಪ್ರತಿಯನ್ನು ರಾಜ್ಯ ಆಯುಕ್ತರಲ್ಲಿ ನೋಂದಾಯಿಸಿಲ್ಲದಿರುವುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

ಲೆಕ್ಕಪರಿಶೋಧನೆಯಲ್ಲಿ ಸೂಚಿಸಿದ ನಂತರ ಸಮಾನ ಅವಕಾಶ ನೀತಿಯನ್ನು ಪ್ರಕಟಿಸಲು ಪ್ರತಿ ಸಂಸ್ಥೆಯು ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ ಮಾರ್ಗಸೂಚಿಗಳೊಂದಿಗೆ ರಾಜ್ಯ ಆಯುಕ್ತರ ಕಛೇರಿಯು ಸುತ್ತೋಲೆಯನ್ನು ಹೊರಡಿಸಿದೆ (ಮಾರ್ಚ್ 2023) ಎಂದು ರಾಜ್ಯ ಸರ್ಕಾರವು ತಿಳಿಸಿತು.

### *2.2.4 ಹೆಚ್ಚಿನ ಬೆಂಬಲದ ಅಗತ್ಯತೆ ಇರುವ ಅಂಗವಿಕಲ ವ್ಯಕ್ತಿಗಳಿಗೆ ಪ್ರಾಧಿಕಾರ*

ಶಿಕ್ಷಣ, ಉದ್ಯೋಗ, ಕುಟುಂಬ, ಚಿಕಿತ್ಸೆ, ಸಮುದಾಯ ಜೀವನ ಮತ್ತು ಚಿಕಿತ್ಸೆ ಸೇರಿದಂತೆ ದೈನಂದಿನ ಚಟುವಟಿಕೆಗಳನ್ನು ಕೈಗೊಳ್ಳಲು ದೈಹಿಕ, ಮಾನಸಿ ಅಥವಾ ಇನ್ನಾವುದೇ, ಸೌಲಭ್ಯಗಳು /ಸೇವೆಗಳನ್ನು ಪ್ರವೇಶಿಸಲು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳಲು ತೀವ್ರ ಬೆಂಬಲದ ಅಗತ್ಯವಿರುವ ಬೆಂಚ್‌ಮಾರ್ಕ್ ಅಂಗವೈಕಲ್ಯ ಹೊಂದಿರುವ ವ್ಯಕ್ತಿಯನ್ನು ಹೆಚ್ಚಿನ ಬೆಂಬಲದ ಅಗತ್ಯತೆಗಳನ್ನು ಹೊಂದಿರುವ ಅಂಗವಿಕಲ ವ್ಯಕ್ತಿ ಎಂದು ಕರೆಯಬಹುದು.

ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 38 ಮತ್ತು ಆರ್‌ಪಿಡಬ್ಲ್ಯುಡಿ ನಿಯಮಗಳು 2017ರ ನಿಯಮ 14ಎ ಪ್ರಕಾರ, ಹೆಚ್ಚಿನ ಬೆಂಬಲದ ಅಗತ್ಯವಿದೆ ಎಂದು ಪರಿಗಣಿಸುವ ಮಾನದಂಡ ಅಸಾಮರ್ಥ್ಯ ಹೊಂದಿರುವ ಯಾವುದೇ ವ್ಯಕ್ತಿ ಸೂಕ್ತ ಸರ್ಕಾರದಿಂದ ಅಧಿಸೂಚಿಸಲಾಗುವ ಪ್ರಾಧಿಕಾರಕ್ಕೆ ಹೆಚ್ಚಿನ ಬೆಂಬಲವನ್ನು ಒದಗಿಸಲು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಸ್ವೀಕರಿಸಿದ ನಂತರ, ಪ್ರಾಧಿಕಾರವು ಅದನ್ನು ರಾಜ್ಯ ಸರ್ಕಾರವು ನಿಗದಿಪಡಿಸಿದ ಜಿಲ್ಲಾ ಮುಖ್ಯ ವೈದ್ಯಾಧಿಕಾರಿ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಐದು ಪುನರ್ವಸತಿ ತಜ್ಞರು, ಔದ್ಯೋಗಿಕ ಚಿಕಿತ್ಸಕ ಅಥವಾ ಸ್ಪೀಚ್ ಥೆರಪಿಸ್ಟ್ ಅಥವಾ ಕ್ಲಿನಿಕಲ್ ಸೈಕಾಲಜಿಸ್ಟ್ ಅಥವಾ ಫಿಸಿಯೋಥೆರಪಿಸ್ಟ್ (ಅವಶ್ಯಕತೆಯ ಪ್ರಕಾರ), ಇವರುಗಳನ್ನು ಒಳಗೊಂಡಿರುವ ಮೌಲ್ಯಮಾಪನ ಮಂಡಳಿಗೆ ಉಲ್ಲೇಖಿಸುತ್ತದೆ. ಮೌಲ್ಯಮಾಪನ ಮಂಡಳಿಯು ಅರ್ಜಿದಾರರನ್ನು ಕ್ಲಿನಿಕಲ್ ಮೌಲ್ಯಮಾಪನಕ್ಕೆ ಆಹ್ವಾನಿಸುತ್ತದೆ ಮತ್ತು ಹೆಚ್ಚಿನ ಬೆಂಬಲದ ಅಗತ್ಯತೆ ಮತ್ತು ಅದರ ಸ್ವರೂಪವನ್ನು ಪ್ರಮಾಣೀಕರಿಸುವ ವರದಿಯನ್ನು ಪ್ರಾಧಿಕಾರಕ್ಕೆ ಕಳುಹಿಸುತ್ತದೆ ಮತ್ತು ವರದಿಯನ್ನು ಸ್ವೀಕರಿಸಿದ

ನಂತರ, ಪ್ರಾಧಿಕಾರವು ವರದಿಗೆ ಅನುಗುಣವಾಗಿ ಬೆಂಬಲವನ್ನು ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

ಕೆಆರ್‌ಪಿಡಬ್ಲ್ಯುಡಿ ನಿಯಮಗಳು ಬೆಂಚ್‌ಮಾರ್ಕ್ ಅಸಾಮರ್ಥ್ಯ ಹೊಂದಿರುವ ವ್ಯಕ್ತಿಯು ಹೆಚ್ಚಿನ ಬೆಂಬಲದ ಅವಶ್ಯಕತೆಗಾಗಿ ಅರ್ಜಿ ಸಲ್ಲಿಸಬಹುದಾದ ಪ್ರಾಧಿಕಾರವನ್ನೂ ಅಧಿಸೂಚಿಸಿರಲಿಲ್ಲ ಅಥವಾ ಅಂತಹ ಸಂದರ್ಭಗಳಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನವನ್ನೂ ನಿರ್ದಿಷ್ಟಪಡಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಲೋಪವು ಮಾನದಂಡ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗೆ ಹೆಚ್ಚಿನ ಬೆಂಬಲದಿಂದ ವಂಚಿತರಾಗುವಂತೆ ಮಾಡಿತು.

ಅಗತ್ಯವಿರುವ ಅಂಗವಿಕಲರಿಗೆ ಹೆಚ್ಚಿನ ಬೆಂಬಲವನ್ನು ಒದಗಿಸಲು ಕಾಯಿದೆಯ ನಿಬಂಧನೆಗಳ ಪ್ರಕಾರ ಪ್ರಾಧಿಕಾರ ಮತ್ತು ಮೌಲ್ಯಮಾಪನ ಮಂಡಳಿಗಳನ್ನು ಅಧಿಸೂಚಿಸಲಾಗಿದೆ (ನವೆಂಬರ್ 2022) ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2023). ಇದಲ್ಲದೆ, ಮೌಲ್ಯಮಾಪನ ಮಂಡಳಿಗಳನ್ನು ರಚಿಸುವಂತೆ ರಾಜ್ಯ ಆಯುಕ್ತರ ಕಛೇರಿಯು ಜಿಲ್ಲಾ ಪ್ರಾಧಿಕಾರಗಳಿಗೆ ನಿರ್ದೇಶನಗಳನ್ನು (ಮೇ 2023) ನೀಡಿದೆ ಎಂದೂ ತಿಳಿಸಿತು. ಆದಾಗ್ಯೂ, ಜಿಲ್ಲಾ ಪ್ರಾಧಿಕಾರಗಳು ಮೌಲ್ಯಮಾಪನ ಮಂಡಳಿಗಳನ್ನು ರಚಿಸಿದ್ದವೇ ಅಥವಾ ನಿರ್ದೇಶನಗಳ ಪ್ರಕಾರ ಮೌಲ್ಯಮಾಪನ ಮಂಡಳಿಗಳನ್ನು ರಚಿಸುವ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದವೇ ಎಂಬ ಬಗ್ಗೆ ಉತ್ತರವು ಮೌನವಾಗಿತ್ತು.

### *2.2.5 ಮಾನವ ಸಂಪನ್ಮೂಲ ನಿರ್ವಹಣೆ*

#### 2.2.5.1 ಮಾನವ ಸಂಪನ್ಮೂಲದ ಕೊರತೆ

ನಿರ್ದೇಶಕರು ಒದಗಿಸಿದ ಮಾಹಿತಿಯ ಪ್ರಕಾರ, ಒಟ್ಟು ಮಂಜೂರಾದ 464 ಹುದ್ದೆಗಳಲ್ಲಿ 162 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲಾಗಿತ್ತು ಹಾಗೂ 31 ಮಾರ್ಚ್ 2023ರಲ್ಲಿದ್ದಂತೆ ಉಳಿದ 302 ಹುದ್ದೆಗಳು ಖಾಲಿ ಉಳಿದಿದ್ದವು. ಮಂಜೂರಾದ ಸಾಮರ್ಥ್ಯ ಮತ್ತು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಸ್ಥಿತಿಯನ್ನು **ಕೋಷ್ಟಕ–2.2**ರಲ್ಲಿ ನೀಡಲಾಗಿದೆ.

**ಕೋಷ್ಟಕ–2.2: ಇಲಾಖೆಯಲ್ಲಿ ಮಂಜೂರಾತಿ ಮತ್ತು ಕಾರ್ಯ ನಿರ್ವಹಿಸುತ್ತಿರುವವ ವಿವರ (2022–23)**

| ಪ್ರವರ್ಗ | ಮಂಜೂರಾದ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವವರು | ಖಾಲಿ ಹುದ್ದೆ | ಷರಾ |
|---|---|---|---|---|
| ನಿರ್ದೇಶಕರು | 01 | 01 | 00 | ಈ ಹುದ್ದೆಗಳು ತಾತ್ಕಾಲಿಕ ಹುದ್ದೆಗಳಾಗಿದ್ದು ಖಾಯಂ ಹುದ್ದೆಗಳಲ್ಲ ಮತ್ತು ಇತರೆ ಇಲಾಖೆಗಳಿಂದ ಪ್ರತಿನಿಯೋಜನೆ ಮೇಲೆ ಭರ್ತಿ ಮಾಡಲಾಗಿತ್ತು. |
| ಜಂಟಿ ನಿರ್ದೇಶಕರು | 01 | 01 | 00 | |
| ಸಹಾಯಕ ನಿರ್ದೇಶಕರು | 02 | 00 | 02 | |
| ಸಹಾಯಕ ನಿರ್ದೇಶಕರು | 01 | 00 | 01 | |
| ಜಿಲ್ಲಾ ಅಂಗವಿಕಲ ವ್ಯಕ್ತಿಗಳ ಕಲ್ಯಾಣ ಅಧಿಕಾರಿಗಳು/ ಅಧೀಕ್ಷಕರು | 35 | 14 | 21 | 21 ಖಾಲಿ ಹುದ್ದೆಗಳನ್ನು ಡಬ್ಲ್ಯುಸಿಡಿ ಮತ್ತು ಇತರ ಇಲಾಖೆಗಳ ಪ್ರಭಾರ ಸಿಬ್ಬಂದಿ ಮತ್ತು ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ |
| ವಿಶೇಷ ಶಾಲೆಗಳ ಅಧೀಕ್ಷಕರು | 08 | 00 | 08 | |
| ಗೆಜ್ಜೆಟೆಡ್ ಅಲ್ಲದ ಸಹಾಯಕರು | 12 | 05 | 07 | |

| ಪ್ರವರ್ಗ | ಮಂಜೂರಾದ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವವರು | ಖಾಲಿ ಹುದ್ದೆ | ಷರಾ |
|---|---|---|---|---|
| ಕಾರ್ಯಕ್ರಮ ಸಹಾಯಕರು ಮೊದಲನೇ ದರ್ಜೆ ಸಹಾಯಕರು | 51 | 32 | 19 | ಕಾರ್ಯಕ್ರಮ ಸಹಾಯಕರ 6 ಹುದ್ದೆಗಳನ್ನು ಪ್ರತಿನಿಯೋಜನೆ ಮೇಲೆ ಭರ್ತಿ ಮಾಡಲಾಗಿದೆ |
| ಪದವೀಧರ ಸಹಾಯಕರು | 34 | 15 | 19 | |
| ವೃತ್ತಿಪರ/ಕಂಪ್ಯೂಟರ್ ಶಿಕ್ಷಕರು | 09 | 01 | 08 | |
| ಎರಡನೇ ದರ್ಜೆ ಸಹಾಯಕ/ ವಾರ್ಡನ್/ಸ್ಟೋರ್‌ಕೀಪರ್ | 39 | 19 | 20 | |
| ಇತರೆ | 271 | 74 | 197 | |
| **ಒಟ್ಟು** | **464** | **162** | **302** | |

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಡಿಡಿಡಬ್ಲ್ಯುಒ/ಅಧೀಕ್ಷಕರ ಪ್ರವರ್ಗಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಶೇಕಡಾ 60ರಷ್ಟನ್ನು ಪ್ರಭಾರ ವ್ಯವಸ್ಥೆಗಳ ಮೂಲಕ ಅಥವಾ ಪ್ರತಿನಿಯೋಜನೆ ಮೂಲಕ ಭರ್ತಿ ಮಾಡಲಾಗಿತ್ತು ಎಂಬುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಎಲ್ಲ ವಿಶೇಷ ಶಾಲೆಗಳಲ್ಲಿ ಅಧೀಕ್ಷಕರ ಹುದ್ದೆ ಖಾಲಿ ಉಳಿದಿತ್ತು. ಅದೇ ರೀತಿ ನಿರ್ದೇಶಕರು, ಜಂಟಿ ನಿರ್ದೇಶಕರು, ಉಪನಿರ್ದೇಶಕರ ಹುದ್ದೆಗಳನ್ನು ಇತರೆ ಇಲಾಖೆಗಳಿಂದ ಪ್ರತಿನಿಯೋಜನೆ ಮೇಲೆ ಭರ್ತಿ ಮಾಡಲಾಗಿತ್ತು. ತತ್ಪರಿಣಾಮವಾಗಿ ಗ್ರೂಪ್ ಬಿ ಹುದ್ದೆಯಾಗಿರುವ ಡಿಡಿಡಬ್ಲ್ಯೂಒ ಆಗಿ ನೇಮಕಗೊಂಡ ಅಧಿಕಾರಿಗಳು ಯಾವುದೇ ಪದನ್ನೋತಿಯ ಅವಕಾಶವಿಲ್ಲದೆ ಡಿಡಿಡಬ್ಲ್ಯೂಒಗಳಾಗಿಯೇ ಮುಂದುವರಿದಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಸಮಾಜದ ದುರ್ಬಲ ವರ್ಗಗಳೊಂದಿಗೆ ವ್ಯವಹರಿಸುವ ಇಲಾಖೆಗಳಲ್ಲಿ ವಿಶೇಷವಾಗಿ ಜಿಲ್ಲಾ ಮಟ್ಟದಲ್ಲಿ ಪ್ರಭಾರಿ ಅಥವಾ ಬದಲಿ ವ್ಯವಸ್ಥೆಗಳನ್ನು ಆಶ್ರಯಿಸುವುದು ಅಧಿನಿಯಮಗಳು/ ನಿಯಮಗಳಲ್ಲಿ ಸೂಚಿಸಿದಂತೆ ಅನುಷ್ಠಾನ ಮತ್ತು ಚಟುವಟಿಕೆಗಳ ಮೇಲ್ವಿಚಾರಣೆಯಲ್ಲಿ ಇಲಾಖೆಗಳ ಪರಿಣಾಮಕಾರಿ ಕಾರ್ಯ ನಿರ್ವಹಣೆಯನ್ನು ಕುಂಠಿತಗೊಳಿಸುತ್ತದೆ.

ಎಲ್ಲಾ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2023).

### 2.2.5.2 ಸಾಮರ್ಥ್ಯ ವೃದ್ಧಿ

ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 47ರ ಪ್ರಕಾರ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯದ ಶಿಕ್ಷಕರು, ವೈದ್ಯರು, ದಾದಿಯರು, ಅರೆ ವೈದ್ಯಕೀಯ ಸಿಬ್ಬಂದಿ, ಗ್ರಾಮೀಣಾಭಿವೃದ್ಧಿ ಅಧಿಕಾರಿಗಳು ಮುಂತಾದ ಮಧ್ಯಸ್ಥಗಾರರು ಮತ್ತು ಆರೈಕೆ ಒದಗಿಸುವವರಿಗೆ ಆರೈಕೆ ಮತ್ತು ಬೆಂಬಲವನ್ನು ಕುರಿತು ಕಡ್ಡಾಯವಾದ ತರಬೇತಿಯನ್ನು ನೀಡಬೇಕು.

ಇದಕ್ಕೆ ರಾಜ್ಯ ಸರ್ಕಾರ/ಇಲಾಖೆಯು ಸಂಬಂಧಪಟ್ಟವರೆಲ್ಲರಿಗೂ ಅಗತ್ಯ ತರಬೇತಿಗಳನ್ನು ನೀಡಲು ಸೂಕ್ತ ಕಾರ್ಯ ಯೋಜನೆಯನ್ನು ತಯಾರಿಸುವುದು, ಎಲ್ಲಾ ಹಂತಗಳಲ್ಲಿನ ಶಿಕ್ಷಣ ಕೋರ್ಸ್‌ಗಳಲ್ಲಿ ಅಂಗವೈಕಲ್ಯವನ್ನು ಒಂದು ಘಟಕವಾಗಿ ಪರಿಚಯಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಶಿಕ್ಷಣ ಇಲಾಖೆಯೊಂದಿಗೆ ಸಮನ್ವಯತೆ ಸಾಧಿಸುವುದು ಮತ್ತು ವಿನ್ಯಾಸಗೊಳಿಸಲು ಸಂಶೋಧನಾ ಸಂಸ್ಥೆಗಳೊಂದಿಗೆ ಸಂಯೋಜಿಸುವುದು ಅಗತ್ಯವಾಗಿದೆ. ಅಂಗವಿಕಲ ವ್ಯಕ್ತಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ಅವರ ಕುಟುಂಬದಲ್ಲಿ ಸಂವಹನ ಮತ್ತು ಭಾಷಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಪೋಷಕರು ಮತ್ತು ಸದಸ್ಯರಿಗೆ ವಿಶೇಷವಾಗಿ ಕೋರ್ಸ್‌ಗಳನ್ನು ವಿನ್ಯಾಸ ಮಾಡಲು ಸಂಶೋಧನಾ ಸಂಸ್ಥೆಗಳನ್ನು ಒಳಗೊಳ್ಳಬೇಕು.

ಆರ್‌ಪಿಡಬ್ಲ್ಯುಡಿ ಕಾಯಿದೆಯ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರ ಅಥವಾ ಇಲಾಖೆಯು ಅಂತಹ ಯಾವುದೇ ಕ್ರಮಗಳನ್ನು ಪ್ರಾರಂಭಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ ಶಿಕ್ಷಣ ಕೋರ್ಸ್‌ಗಳಲ್ಲಿ ಅಂಗವೈಕಲ್ಯವನ್ನು ಒಂದು ಅಂಶವಾಗಿ ಪರಿಚಯಿಸಲಾಗಿಲ್ಲ ಮತ್ತು ಪೋಷಕರು ಮತ್ತು ಕುಟುಂಬ ಸದಸ್ಯರಿಗೆ ಪರಿಣಾಮಕಾರಿಯಾಗಿ ಅಂಗವಿಕಲ ವ್ಯಕ್ತಿಗಳನ್ನು ನಿಭಾಯಿಸಲು ತರಬೇತಿ ಕೋರ್ಸ್‌ಗಳನ್ನು ರೂಪಿಸಿರಲಿಲ್ಲ.

ಮೊದಲ ಬ್ಯಾಚ್‌ನ ಜಿಲ್ಲಾ ಕಲ್ಯಾಣಾಧಿಕಾರಿಗಳಿಗೆ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ (ಎಟಿಐ) 2022–23ರಲ್ಲಿ ತರಬೇತಿ ನೀಡಲಾಯಿತು ಎಂದು ರಾಜ್ಯ ಸರ್ಕಾರ ತಿಳಿಸಿತು. ಅಲ್ಲದೆ, ಬುದ್ಧಿಮಾಂದ್ಯತೆ ಹೊಂದಿರುವ ವ್ಯಕ್ತಿಗಳಿಗೆ ವೃತ್ತಿಪರ ತರಬೇತಿ ನೀಡಲು ಆಶ್ರಯ ಕಾರ್ಯಾಗಾರವನ್ನು ಸ್ಥಾಪಿಸಲು ಪ್ರಸ್ತಾವಿಸಲಾಗಿದೆ ಎಂದೂ ಕೂಡ ತಿಳಿಸಲಾಯಿತು.

### *2.2.6 ಆಂತರಿಕ ನಿಯಂತ್ರಣ*

ಆಂತರಿಕ ನಿಯಂತ್ರಣಗಳು ತನ್ನ ನೀತಿಗಳು ಮತ್ತು ಯೋಜನೆಗಳಿಗೆ ಬದ್ಧತೆಯನ್ನು ಖಚಿತಪಡಿಸಿಕೊಳ್ಳಲು ಕಾಯಿದೆ/ಮಾರ್ಗಸೂಚಿಗಳನ್ನು ಅನುಸರಿಸಲು ಇಲಾಖೆಯು ರೂಪಿಸಿದ ಕಾರ್ಯವಿಧಾನಗಳ ವ್ಯವಸ್ಥಿತ ಪರಿಶೀಲನೆಯನ್ನು ಉಲ್ಲೇಖಿಸುತ್ತದೆ. ಆಂತರಿಕ ನಿಯಂತ್ರಣದ ಒಟ್ಟಾರೆ ಉದ್ದೇಶವು ಇಲಾಖೆಯು ತನ್ನ ಧ್ಯೇಯವನ್ನು ಸಾಧಿಸಲು ಮತ್ತು ಗುರಿಗಳು ಮತ್ತು ಉದ್ದೇಶಗಳನ್ನು ಸಾಧಿಸಲು ಸಹಾಯ ಮಾಡುವುದಾಗಿದೆ.

ಅಧಿನಿಯಮವನ್ನು ಡಿಸೆಂಬರ್ 2016ರಲ್ಲಿ ಜಾರಿಗೊಳಿಸಿ ಆರು ವರ್ಷಗಳಿಗಿಂತ ಹೆಚ್ಚು ಕಾಲ ಕಳೆದರೂ ಸಹ ಅಧಿನಿಯಮದ ವಿವಿಧ ನಿಬಂಧನೆಗಳ ಅನುಸರಣೆಗೆ ಕಾರಣವಾದ ಆಂತರಿಕ ನಿಯಂತ್ರಣಗಳ ಅನುಪಸ್ಥಿತಿ ಮತ್ತು ಮೇಲ್ವಿಚಾರಣೆಯಲ್ಲಿ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು ವಿವರವಾದ ಅವಲೋಕನಗಳನ್ನು ಈ ಅಧ್ಯಾಯದ ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ.

#### **2.2.6.1 ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ**

ಯೋಜನೆ ಮತ್ತು ಕಾರ್ಯಕ್ರಮಗಳು ಅಂಗವಿಕಲರ ಮೇಲೆ ಪ್ರತಿಕೂಲ ಪರಿಣಾಮ ಬೀರುವುದಿಲ್ಲ ಮತ್ತು ಅಂಗವಿಕಲರ ಅವಶ್ಯಕತೆಗಳು ಮತ್ತು ಕಾಳಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಂಗವಿಕಲರನ್ನು ಒಳಗೊಂಡಿರುವ ಎಲ್ಲಾ ಸಾಮಾನ್ಯ ಯೋಜನೆಗಳು ಮತ್ತು ಕಾರ್ಯಕ್ರಮಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 48 ಸೂಕ್ತ ಸರ್ಕಾರವನ್ನು ಕಡ್ಡಾಯಗೊಳಿಸುತ್ತದೆ. ಲೆಕ್ಕಪರಿಶೀಲನಾ ಅವಧಿಯಲ್ಲಿ ರಾಜ್ಯ ಆಯುಕ್ತರು ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಲು ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆಗಳನ್ನು ರವಾನಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಅಲ್ಲದೆ, ಡಿಇಡಿಎಎಸ್‌ಸಿಯ ವ್ಯಾಪ್ತಿಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಕಛೇರಿಗಳು ಮತ್ತು 211 ಶಾಲೆಗಳು/ಸಂಸ್ಥೆಗಳ ನಿಯತಕಾಲಿಕ ಆಂತರಿಕ ಲೆಕ್ಕಪರಿಶೋಧನೆಯನ್ನು, ಅದರ ನೀತಿಗಳು ಮತ್ತು ಯೋಜನೆಗಳಿಗೆ ನಿಯತಕಾಲಿಕವಾಗಿ ಬದ್ಧತೆಯನ್ನು ಖಚಿತಪಡಿಸಿಕೊಳ್ಳಲು ನಡೆಸಲಾಗಿಲ್ಲ.

ಈ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡಲು ರಾಜ್ಯ ಸರ್ಕಾರವು ಸೂಚನೆಯನ್ನು ನೀಡದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಅನುದಾನ ಬಿಡುಗಡೆಗಾಗಿ ಶಾಲೆಗಳು/ಸಂಸ್ಥೆಗಳ ಅರ್ಹತೆಯನ್ನು ನಿರ್ಣಯಿಸಲು ಇಲಾಖೆಯು ನಿಯಮಿತವಾಗಿ ವಾರ್ಷಿಕ ತಪಾಸಣೆಗಳನ್ನು ನಡೆಸುತ್ತಿತ್ತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಳ್ಳುವಾಗ ರಾಜ್ಯ ಆಯುಕ್ತರು ಮತ್ತು ಡಿಇಡಿಎಸ್‌ಸಿ ನಿರ್ದೇಶನಾಲಯಗಳು ಪ್ರತ್ಯೇಕ ಲೆಕ್ಕಪರಿಶೋಧನಾ ವಿಭಾಗಗಳನ್ನು ಹೊಂದಿಲ್ಲದ ಕಾರಣ ಜಿಲ್ಲಾ ಕಛೇರಿಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ನಿಯಮಿತ ಅಂತರಗಳಲ್ಲಿ ನಡೆಸಲಾಗಿಲ್ಲ ಮತ್ತು ನಿರ್ದೇಶನಾಲಯದಲ್ಲಿ ಪ್ರತ್ಯೇಕವಾಗಿ ಲೆಕ್ಕಪರಿಶೋಧನಾ ವಿಭಾಗವನ್ನು ಸ್ಥಾಪಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿತು.

### 2.2.6.2 ಪ್ರಮಾಣಿತ ಕಾರ್ಯನಿರ್ವಹಣಾ ಪದ್ಧತಿ ಕೈಪಿಡಿಯ ಅನುಪಸ್ಥಿತಿ

ಅಂಗವಿಕಲರ ಅಗತ್ಯತೆಗಳನ್ನು ಪೂರೈಸಲು ಇಲಾಖೆಯು ವಿವಿಧ ರೀತಿಯ ಸಂಸ್ಥೆಗಳೊಂದಿಗೆ ವ್ಯವಹರಿಸುವುದರಿಂದ, ಅಂಗವಿಕಲರಿಗೆ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳಾದ್ಯಂತ ಏಕರೂಪದ ಮಾನದಂಡಗಳನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಪ್ರಮಾಣಿತ ಕಾರ್ಯಾಚರಣೆಯ ಕಾರ್ಯವಿಧಾನದ ಕೈಪಿಡಿಯನ್ನು ಸಿದ್ಧಪಡಿಸಬೇಕು. ಈ ಕೈಪಿಡಿಯು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಅರ್ಹತೆಗಳು, ತರಗತಿಯ ವಿನ್ಯಾಸಗಳು ಮತ್ತು ವಿಕಲಾಂಗ ವಿದ್ಯಾರ್ಥಿಗಳಿಗೆ ಸೂಕ್ತವಾದ ಆಸನ ವ್ಯವಸ್ಥೆಗಳನ್ನು ವಿವರಿಸಬೇಕು. ಜೊತೆಗೆ, ಇದು ಟ್ರ್ಯಾಂಪೊಲೈನ್, ಬ್ಯಾಲೆನ್ಸ್ ಬಾಲ್, ಸಿಪಿ ಕುರ್ಚಿ, ಸೈಕಲ್/ವಾಕರ್, ಫಿಸಿಯೋಥೆರಪಿ ಮೇಜುಗಳು ಮತ್ತು ಫಿಂಗರ್ ಲ್ಯಾಡರ್‌ಗಳಂತಹ ಅಗತ್ಯವಿರುವ ಫಿಸಿಯೋಥೆರಪಿ ಚಿಕಿತ್ಸೆಯ ಸಾಧನಗಳನ್ನು ಮತ್ತು ಶಾಲೆ ಮತ್ತು ಹಾಸ್ಟೆಲ್ ರಚನೆಗಳಿಗೆ ಪ್ರವೇಶಿಸುವಿಕೆ ವೈಶಿಷ್ಟ್ಯಗಳು ಮತ್ತು ಅಂಗವೈಕಲ್ಯ ಪ್ರಕಾರಗಳ ಆಧಾರದ ಮೇಲೆ ಸೂಕ್ತವಾದ ಶಿಕ್ಷಕ– ವಿದ್ಯಾರ್ಥಿ ಅನುಪಾತಗಳು, ಇವುಗಳನ್ನು ನಿರ್ದಿಷ್ಟಪಡಿಸಬೇಕು. ಇದಲ್ಲದೆ, ಕೈಪಿಡಿಯು ವಿವಿಧ ಅಂಗವೈಕಲ್ಯ ವರ್ಗಗಳಿಗೆ ಪಠ್ಯಕ್ರಮದ ಅಭಿವೃದ್ಧಿಯನ್ನು ತಿಳಿಸಬೇಕು ಮತ್ತು ಇಲಾಖೆಯ ಅಧಿಕಾರ ವ್ಯಾಪ್ತಿಯೊಳಗೆ ಡಿಡಿಡಬ್ಲ್ಯುಒ ಕಛೇರಿಗಳು ಸೇರಿದಂತೆ ಸಂಸ್ಥೆಗಳ ನಿಯಮಿತ ಆಂತರಿಕ ಲೆಕ್ಕಪರಿಶೋಧನಾ ವೇಳಾಪಟ್ಟಿಯನ್ನು ಸ್ಥಾಪಿಸಬೇಕು.

ಇಲಾಖೆಯು ತನ್ನಲ್ಲಿ ತೊಡಗಿಸಿಕೊಂಡಿರುವ ಎಲ್ಲ ಪಾಲುದಾರರಿಗೆ (ಎನ್‌ಜಿಒ) ಅಂತಹ ಕೈಪಿಡಿಯನ್ನು ತಯಾರಿಸಲು ಕ್ರಮಗಳನ್ನು ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಈ ಹಿಂದೆ ಚರ್ಚಿಸಿದಂತೆ ಮಾನಸಿಕ ವಿಕಲಾಂಗತೆ ಹೊಂದಿರುವ ವಿದ್ಯಾರ್ಥಿಗಳೊಂದಿಗೆ ವ್ಯವಹರಿಸುವಾಗ ವಿವಿಧ ಸಂಸ್ಥೆಗಳು ಬೋಧನಾ ವಿಧಾನಗಳಲ್ಲಿ ವಿಭಿನ್ನ ರೀತಿಯ ಅಭ್ಯಾಸಗಳನ್ನು ಅನುಸರಿಸುತ್ತಿದ್ದವು, ಜೊತೆಗೆ ಕಟ್ಟಡಗಳಲ್ಲಿ ರೇಲಿಂಗ್ ಹೊಂದಿರುವ ರ್‍ಯಾಂಪ್‌ಗಳಂತಹ ಕನಿಷ್ಠ ಪ್ರವೇಶದ ವೈಶಿಷ್ಟ್ಯಗಳನ್ನು ಮತ್ತು ಅಂಗವಿಕಲ ಮಕ್ಕಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಿದ ಶೌಚಾಲಯಗಳು, ಇವುಗಳನ್ನು ಅನುಪಾಲಿಸಲಿಲ್ಲ.

**ಶಿಫಾರಸು–2: ರಾಜ್ಯ ಸರ್ಕಾರವು ಅಂಗವಿಕಲರ ಅಗತ್ಯತೆಗಳನ್ನು ಪೂರೈಸಲು ಸಾಂಸ್ಥಿಕ ಕಾರ್ಯವಿಧಾನವನ್ನು ಬಲಪಡಿಸಬೇಕು ಮತ್ತು ಆರ್‌ಪಿಡಬ್ಲ್ಯುಡಿ ಅಧಿನಿಯಮ, 2016ರ ತ್ವರಿತ ಅನುಷ್ಠಾನಕ್ಕಾಗಿ ಗುರುತಿಸಲ್ಪಟ್ಟ ಮತ್ತು ಅಧಿಸೂಚಿತ ಪ್ರಾಧಿಕಾರಗಳ ಮೂಲಕ ಅಧಿನಿಯಮದ/ ನಿಯಮಗಳ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.**

## 2.3 ಹಣಕಾಸು ನಿರ್ವಹಣೆ

2017–18ರಿಂದ 2022–23ರ ಅವಧಿಯಲ್ಲಿ ಡಿಇಡಿಎಎಸ್‌ಸಿಯಿಂದ ಆಯವ್ಯಯ ಹಂಚಿಕೆ, ಬಿಡುಗಡೆಗಳು ಮತ್ತು ವೆಚ್ಚವನ್ನು **ಕೋಷ್ಟಕ–2.3**ರಲ್ಲಿ ನೀಡಲಾಗಿದೆ.

**ಕ್ಟೋಷ್ಟಕ–2.3: ಆಯವ್ಯಯ ಹಂಚಿಕೆ, ಬಿಡುಗಡೆಗಳು ಮತ್ತು ವೆಚ್ಚ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯ ಅವಕಾಶ | ಬಿಡುಗಡೆಗಳು | ವೆಚ್ಚ | ಉಳಿತಾಯಗಳು | ಬಿಡುಗಡೆಗೆ ಉಳಿತಾಯಗಳ ಶೇಕಡಾ |
|---|---|---|---|---|---|
| 2017–18 | 198.10 | 198.10 | 168.72 | 29.38 | 15 |
| 2018–19 | 162.04 | 162.04 | 138.96 | 23.08 | 14 |
| 2019–20 | 195.46 | 186.14 | 160.00 | 26.14 | 14 |
| 2020–21 | 199.38 | 199.38 | 167.81 | 31.57 | 16 |
| 2021–22 | 177.81 | 177.40 | 168.20 | 9.20 | 05 |
| 2022–23 | 254.57 | 253.89 | 235.31 | 18.58 | 07 |
| **ಒಟ್ಟು** | **1,187.36** | **1,176.95** | **1,039.00** | **137.95** | **12** |

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

ಆಧಾರ, ನಿರಾಮಯ, ಮೋಟಾರು ವಾಹನಗಳ ವಿತರಣೆ ಮುಂತಾದ ವಿವಿಧ ಯೋಜನೆಗಳಡಿಯಲ್ಲಿ ಹಣವನ್ನು ಬಳಸದಿರುವುದು ಉಳಿತಾಯಕ್ಕೆ ಕಾರಣವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2017–18ರಿಂದ 2022–23ರ ಅವಧಿಯಲ್ಲಿ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಯೋಜನೆಗಳನ್ನು ವೆಚ್ಚದ ವಿವರಗಳೊಂದಿಗೆ **ಕೋಷ್ಟಕ–2.4**ರಲ್ಲಿ ನೀಡಲಾಗಿದೆ.

**ಕೋಷ್ಟಕ –2.4: ಸರ್ಕಾರವು ಅನುಷ್ಠಾನಗೊಳಿಸಿದ ಪ್ರಮುಖ ಯೋಜನೆಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಯೋಜನೆಯ ಉದ್ದೇಶ | ಬಿಡುಗಡೆ ಮಾಡಿದ ಹಣ | ವಾಸ್ತವ ವೆಚ್ಚ |
|---|---|---|---|---|
| 1 | ಮಕ್ಕಳ ಕೇಂದ್ರಿತ ಯೋಜನೆ | ವಸತಿ ಮತ್ತು ವಸತಿರಹಿತ ವಿಶೇಷ ಶಾಲೆಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳಿಗೆ ಮಕ್ಕಳ ಕೇಂದ್ರಿತ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯದ ಆಧಾರದ ಮೇಲೆ ಅನುದಾನವನ್ನು ನೀಡಲಾಗುತ್ತದೆ. | 362.71 | 333.61 |
| 2 | 1982 ಸಹಾಯಾನುದಾನ ಯೋಜನೆ | ವಿಶೇಷ ಶಿಕ್ಷಣವನ್ನು ನೀಡುವ ಸಂಸ್ಥೆಗಳಿಗೆ ರಾಜ್ಯ ಸರ್ಕಾರಿ ಶಿಕ್ಷಕರಿಗೆ ಸಮಾನವಾದ ಸಂಬಳದ ರೂಪದಲ್ಲಿ ಸಹಾಯಾನುದಾನವನ್ನು ನೀಡಲಾಗುತ್ತದೆ. | 96.88 | 96.88 |
| 3 | ನಿರಾಮಯ ಆರೋಗ್ಯ ವಿಮೆ ಯೋಜನೆ | ಯೋಜನೆಯ ಫಲಾನುಭವಿಗಳಿಗೆ ಒಂದು ಬಾರಿ ಪಾವತಿಸುವ ₹250 ಪ್ರೀಮಿಯಂ ಆಧಾರದ ಮೇಲೆ ವರ್ಷಕ್ಕೆ ₹1.00 ಲಕ್ಷದವರೆಗೆ ವೈದ್ಯಕೀಯ ವಿಮಾ ರಕ್ಷಣೆಯನ್ನು ಒದಗಿಸುತ್ತದೆ. | 0.31 | 0.25 |
| 4 | ಆಧಾರ ಯೋಜನೆ | ಅಂಗವಿಕಲರು ಸ್ವಯಂ ಉದ್ಯೋಗ ಕೈಗೊಂಡು ಜೀವನ ನಡೆಸಲು ಆಧಾರ ಸಾಲ ಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಇಲಾಖೆಯಿಂದ ಶೇಕಡಾ 50 ಬ್ಯಾಂಕ್ ಸಾಲ ಮತ್ತು ಶೇಕಡಾ 50 ಸಹಾಯಧನ ನೀಡಲಾಗುತ್ತದೆ. | 14.32 | 10.70 |

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಯೋಜನೆಯ ಉದ್ದೇಶ | ಬಿಡುಗಡೆ ಮಾಡಿದ ಹಣ | ವಾಸ್ತವ ವೆಚ್ಚ |
|---|---|---|---|---|
| 5 | ದೈಹಿಕ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗೆ ಮೋಟಾರು ದ್ವಿಚಕ್ರ ವಾಹನ | 20–60 ವರ್ಷ ವಯೋಮಾನದ ತೀವ್ರ ದೈಹಿಕ ವಿಕಲಚೇತನರು ಮತ್ತು ವಾರ್ಷಿಕ ₹2.00 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಂದ ಬಂದ ಫಲಾನುಭವಿಗಳಿಗೆ ಜೀವಿತಾವಧಿಯಲ್ಲಿ ಒಮ್ಮೆ ಅರ್ಹ ಮೋಟಾರು ಚಾಲಿತ ದ್ವಿಚಕ್ರ ವಾಹನಗಳನ್ನು ನೀಡಲಾಗುತ್ತದೆ. | 75.93 | 75.93 |
| 6 | ಡಿಡಿಆರ್‌ಸಿ ಯೋಜನೆ | ಏಕ ಗವಾಕ್ಷಿ ವ್ಯವಸ್ಥೆಯಡಿ ಸಮಗ್ರ ಪುನರ್ವಸತಿ ಸೇವೆಯನ್ನು ಗುರುತಿಸುವುದು ಮತ್ತು ಫಲಾನುಭವಿಗಳ ಮನೆ ಬಾಗಿಲಿಗೆ ಒದಗಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. | 14.05 | 14.16 |
| 7 | ಅಂಗವಿಕಲರಿಗೆ ಸಾಧನಗಳು ಮತ್ತು ಉಪಕರಣಗಳು | ಈ ಯೋಜನೆಯಡಿಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ₹11,500 ಮತ್ತು ನಗರ ಪ್ರದೇಶದಲ್ಲಿ ₹24,000 ಕ್ಕಿಂತ ಕಡಿಮೆ ಕುಟುಂಬ ಆದಾಯ ಹೊಂದಿರುವ ಅಂಗವಿಕಲ ವ್ಯಕ್ತಿಗಳಿಗೆ ನೆರವು ಮತ್ತು ಉಪಕರಣಗಳನ್ನು ವಿತರಿಸಲಾಗುತ್ತದೆ. | 14.63 | 13.09 |
| | | **ಒಟ್ಟು** | **578.83** | **544.62** |

ಆಧಾರ: ಇಲಾಖೆಯು ಸಲ್ಲಿಸಿದ ಮಾಹಿತಿ

ಯೋಜನೆಗಳ ಅನುಷ್ಠಾನದಲ್ಲಿನ ನ್ಯೂನತೆಗಳನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

### *2.3.1 ಅಂಗವಿಕಲ ವ್ಯಕ್ತಿಗಳಿಗಾಗಿನ ರಾಜ್ಯ ನಿಧಿಯ ರಚನೆ*

ಆರ್‌ಪಿಡಬ್ಲ್ಯುಡಿ ಕಾಯಿದೆ, 2016ರ ಪರಿಚ್ಛೇದ 88ರ ಪ್ರಕಾರ, ರಾಜ್ಯ ಸರ್ಕಾರವು ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿಯನ್ನು ರಚಿಸಬೇಕು ಮತ್ತು ಅದನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ಸೂಚಿಸಿದ ಕಾರ್ಯವಿಧಾನದ ಪ್ರಕಾರ ಬಳಸಬೇಕು ಮತ್ತು ನಿರ್ವಹಿಸಬೇಕು.

ಕೆಎಸ್‌ಆರ್‌ಪಿಡಬ್ಲ್ಯುಡಿ 2019ರ ನಿಯಮ 41ರ ಪ್ರಕಾರ, ಅನುದಾನ, ಉಡುಗೊರೆಗಳು, ದೇಣಿಗೆಗಳು, ಉಪಕಾರಗಳು, ಉಯಿಲುಗಳು ಅಥವಾ ವರ್ಗಾವಣೆಗಳ ಮೂಲಕ ಪಡೆದ ಎಲ್ಲಾ ಮೊತ್ತಗಳು ಮತ್ತು ಸಹಾಯಾನುದಾನ ಸೇರಿದಂತೆ ರಾಜ್ಯ ಸರ್ಕಾರದಿಂದ ಪಡೆದ ಎಲ್ಲಾ ಮೊತ್ತಗಳನ್ನು ರಚಿಸಿದ ಮತ್ತು ಬಳಸಿಕೊಳ್ಳುವ ರಾಜ್ಯ ನಿಧಿಗೆ ಜಮಾ ಮಾಡಬೇಕು. ಮತ್ತು ನಿರ್ದಿಷ್ಟವಾಗಿ ಯಾವುದೇ ಯೋಜನೆಯ ಅಡಿಯಲ್ಲಿ ಸೇರಿರದ ಕ್ಷೇತ್ರಗಳಲ್ಲಿ ಮತ್ತು ಕೇಂದ್ರ ಸರ್ಕಾರದ ಯಾವುದೇ ಯೋಜನೆ ಅಥವಾ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯ ಸರ್ಕಾರದ ಯಾವುದೇ ಕಾರ್ಯಕ್ರಮಗಳಿಗೆ ಸಮರ್ಪಕವಾಗಿ ಹಣವನ್ನು ನೀಡದ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತದೆ.

ಅಂಗವಿಕಲ ವ್ಯಕ್ತಿಗಳಿಗಾಗಿ ರಾಜ್ಯ ನಿಧಿಯನ್ನು ರಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ಸಲಹಾ ಮಂಡಳಿಗೆ ತಿಳಿಸಲು ಇಲಾಖೆಯು ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ ಎಂಬುದನ್ನು ದಾಖಲೆಗಳು ಸೂಚಿಸಿದವು. ರಾಜ್ಯ ಸಲಹಾ ಮಂಡಳಿಯು ಅಂಗವಿಕಲರಿಗಾಗಿ ರಾಜ್ಯ ನಿಧಿಯ ಸಂವಿಧಾನದ ಅಧಿಸೂಚನೆಯನ್ನು ಹೊರಡಿಸಲು ರಾಜ್ಯ ಸರ್ಕಾರಕ್ಕೆ ಸಲಹೆ ಮತ್ತು ಶಿಫಾರಸುಗಳನ್ನು ಮಾಡುತ್ತದೆ.

ಅಂಗವಿಕಲರಿಗಾಗಿ ರಾಜ್ಯ ನಿಧಿಯ ರಚನೆಗಾಗಿ ಮಾರ್ಚ್ 2020ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ ಮತ್ತು ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಮಾರ್ಗಸೂಚಿಗಳನ್ನು ತಯಾರಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು.

### 2.3.2 ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮೀಸಲಾತಿ

ಕೃಷಿ ಭೂಮಿ ಮತ್ತು ವಸತಿ ಹಂಚಿಕೆ, ಬಡತನ ನಿರ್ಮೂಲನೆ ಮತ್ತು ಇತರ ಅಭಿವೃದ್ಧಿ ಯೋಜನೆಗಳಲ್ಲಿ ಶೇಕಡ ಐದು ಮೀಸಲಾತಿಯನ್ನು ಒದಗಿಸಲು ಮತ್ತು ವಸತಿ, ಆಶ್ರಯ, ಉದ್ಯೋಗ, ವ್ಯಾಪಾರ, ಉದ್ಯಮ, ಮನರಂಜನಾ ಕೇಂದ್ರಗಳು ಮತ್ತು ಉತ್ಪಾದನಾ ಕೇಂದ್ರಗಳ ಉದ್ದೇಶಕ್ಕಾಗಿ ರಿಯಾಯಿತಿ ದರದಲ್ಲಿ ಭೂಮಿಯನ್ನು ಹಂಚಿಕೆ ಮಾಡಲು ಅಧಿಸೂಚನೆಯ ಮೂಲಕ ಅಂಗವಿಕಲ ವ್ಯಕ್ತಿಗಳ ಪರವಾಗಿ ಸೂಕ್ತ ಯೋಜನೆಗಳನ್ನು ಮಾಡಲು ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳನ್ನು ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 37 ಕಡ್ಡಾಯಗೊಳಿಸುತ್ತದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಆಯವ್ಯಯದ ಶೇಕಡಾ ಐದರಷ್ಟನ್ನು ಅಂಗವಿಕಲರಿಗೆ ಕಡ್ಡಾಯವಾಗಿ ಮೀಸಲಿಡಬೇಕು ಎಂದು ರಾಜ್ಯ ಸರ್ಕಾರವು ಪುನರುಚ್ಚರಿಸಿತ್ತು (ಆಗಸ್ಟ್ 2018).

ಸ್ಥಳೀಯ ಪ್ರಾಧಿಕಾರಗಳು ತಮ್ಮ ಕಾರ್ಯ ಯೋಜನೆಗಳನ್ನು ಸಿದ್ಧಪಡಿಸಿ ಇಲಾಖೆಗೆ ರವಾನಿಸದ ಕಾರಣ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳಡಿಯಲ್ಲಿ ಪ್ರಯೋಜನಗಳನ್ನು ಪಡೆದ ಫಲಾನುಭವಿಗಳ ದತ್ತಾಂಶವನ್ನು ಇಲಾಖೆಯು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಕಡ್ಡಾಯವಾಗಿ ಹಣ ಹಂಚಿಕೆಯನ್ನು ಮತ್ತು ಅದರ ಬಳಕೆಯನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆ ಇಲಾಖೆಯಲ್ಲಿ ಅಸ್ತಿತ್ವದಲ್ಲಿಲ್ಲದಿರುವುದನ್ನು ಗಮನಿಸಲಾಯಿತು. ಆದ್ದರಿಂದ, ಯೋಜನೆಗಳ ಅನುಷ್ಠಾನದ ಸಮಯದಲ್ಲಿ ನಿಗದಿತ ಶೇಕಡಾ ಐದರಷ್ಟು ಮೀಸಲಾತಿಯನ್ನು ಅನುಪಾಲಿಸಲಾಗುತ್ತಿದೆಯೇ ಎಂಬುದನ್ನು ಇಲಾಖೆಯು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ವಿಷಯವಾಗಿ ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

***ನಿದರ್ಶನ***

***ರಾಜ್ಯ ಆಯುಕ್ತರ ಕಛೇರಿಯಿಂದ ಅಂಗವಿಕಲರಿಗೆ ಆಯವ್ಯಯದ ಶೇಕಡ ಐದರಷ್ಟು ಕಡ್ಡಾಯ ಹಂಚಿಕೆ ಮತ್ತು ಬಳಕೆಯ ಕುರಿತು ಅಧ್ಯಯನ***

*ಕಾಯಿದೆಯ ಪ್ರಸ್ತುತ ನಿಬಂಧನೆಗಳ ಪ್ರಕಾರ ನಿಗದಿಪಡಿಸಲಾದ ಮೀಸಲಾತಿಗಳ ಅನುಸರಣೆ ಮತ್ತು ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು, ರಾಜ್ಯ ಆಯುಕ್ತರು ಬೆಂಗಳೂರಿನ ಧ್ವನಿ ಫೌಂಡೇಶನ್ ಬೆಂಬಲದೊಂದಿಗೆ ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅಧ್ಯಯನವನ್ನು ನಡೆಸಿದರು (ಆಗಸ್ಟ್–ಸೆಪ್ಟೆಂಬರ್ 2019). ಬಡತನ ನಿರ್ಮೂಲನೆ ಮತ್ತು ಇತರ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಅನುಮೋದಿಸಲಾದ/ಬಿಡುಗಡೆಯಾದ ಒಟ್ಟಾರೆ ಆಯವ್ಯಯದಿಂದ ಅಂಗವಿಕಲರ ಕಲ್ಯಾಣಕ್ಕಾಗಿ ಕೇವಲ ಶೇಕಡಾ 0.75ರಷ್ಟು ಹಣವನ್ನು ಮಾತ್ರ ಬಳಸಲಾಗಿತ್ತು ಎಂಬುದನ್ನು ಅಧ್ಯಯನವು ಬಹಿರಂಗಪಡಿಸಿತು. ಗ್ರಾಮೀಣ ಸ್ಥಳೀಯ ಸಂಸ್ಥೆಗಳು (ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್) ಶೇಕಡಾ ನಾಲ್ಕರಷ್ಟು ಹಣವನ್ನು ಬಳಸಿದರೆ, ಸಂಬಂಧಿತ ಇಲಾಖೆಗಳು ಕೇವಲ ಶೇಕಡಾ 0.51ರಷ್ಟು ಹಣವನ್ನು ಬಳಸಿದ್ದವು. ನೀಡಲಾದ ಪ್ರಯೋಜನಗಳು ಎಲ್ಲಾ ರೀತಿಯ ಅಂಗವೈಕಲ್ಯಗಳನ್ನು ವ್ಯಾಪಿಸಿರಲಿಲ್ಲ ಮತ್ತು ಹೆಚ್ಚಿನ ಅರ್ಹವಾದ ಅಂಗವೈಕಲ್ಯಗಳನ್ನು (ಮಾನಸಿಕ ಆರೋಗ್ಯ ಮತ್ತು ಶ್ರವಣದೋಷವುಳ್ಳವರು) ನಿರ್ಲಕ್ಷಿಸಲಾಗಿತ್ತು ಎಂಬುದು ಅಧ್ಯಯನದಿಂದ ತಿಳಿದುಬಂದಿತು. ಶೇಕಡಾ ಐದರಷ್ಟು ಆಯವ್ಯಯ ಮೀಸಲಾತಿಯು ಮೇಲ್ವಿಚಾರಣೆ ಮತ್ತು ವರದಿ ಮಾಡುವ ವ್ಯವಸ್ಥೆಯಲ್ಲಿ ಕಾಣಿಸಿಕೊಂಡಿರಲಿಲ್ಲ. ಅಂಗವಿಕಲ ವ್ಯಕ್ತಿಗಳಲ್ಲಿ, ಅವರ ಹಕ್ಕುಗಳು ಮತ್ತು ಅರ್ಹತೆಗಳ ಬಗ್ಗೆ ಜಾಗೃತಿ ಮೂಡಿಸಲು ಯಾವುದೇ ಮಹತ್ವದ ಪ್ರಯತ್ನಗಳು ನಡೆದಿರಲಿಲ್ಲ ಮತ್ತು ಕ್ಷೇತ್ರ ಕಾರ್ಯನಿರ್ವಾಹಕರಿಗೆ ಸಹ ಸೂಕ್ತ ತರಬೇತಿ ನೀಡಿರಲಿಲ್ಲ ಎಂಬುದು ಅಧ್ಯಯನದಿಂದ ತಿಳಿದುಬಂದಿತು.*

**ಶಿಫಾರಸು–3: ಸ್ಥಳೀಯ ಪ್ರಾಧಿಕಾರಗಳು ಕಡ್ಡಾಯವಾಗಿ ವಂತಿಗೆ ನೀಡುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಎಲ್ಲಾ ಅಂಗವೈಕಲ್ಯತೆಗಳನ್ನು ಒಳಗೊಂಡಿರಬೇಕು.**

### *2.3.3 ಕೇಂದ್ರದ ನೆರವನ್ನು ಪಡೆಯದಿರುವುದು*

ಭಾರತ ಸರ್ಕಾರವು ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು, ವಿಶೇಷವಾಗಿ ಪುನರ್ವಸತಿ ಮತ್ತು ತಡೆ–ಮುಕ್ತ ಪ್ರವೇಶ ವೈಶಿಷ್ಟ್ಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ, ವಿವಿಧ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ರಾಜ್ಯ ಸರ್ಕಾರಗಳಿಗೆ ಹಾಗೂ ಸ್ವಾಯತ್ತ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸ್ಥಾಪಿಸಲಾದ ವಿವಿಧ ಸಂಸ್ಥೆಗಳಿಗೆ ಸಹಾಯಾನುದಾನವನ್ನು ನೀಡಲಾಗುತ್ತದೆ.

ಮೊದಲ ಎರಡು ಯೋಜನೆಗಳಿಗೆ ಸಂಬಂಧಿಸಿದಂತೆ ಇಲಾಖೆಯು ಕೇಂದ್ರದ ಅನುದಾನಗಳನ್ನು ಪಡೆಯದ ಕಾರಣ ಕೇಂದ್ರದ ನೆರವಿನ ನಷ್ಟವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಇತರ ನಾಲ್ಕು ಯೋಜನೆಗಳಿಗೆ ಸಂಬಂಧಿಸಿದಂತೆ, ಇಲಾಖೆಯು ಅವುಗಳನ್ನು ಅನುಷ್ಠಾನಗೊಳಿಸದ ಕಾರಣ ಕೇಂದ್ರದ ನೆರವಿನ ಸಂಭಾವ್ಯ ನಷ್ಟವಾಗಿದೆ. ಹೀಗೆ, **ಕೋಷ್ಟಕ–2.5**ರಲ್ಲಿ ವಿವರಿಸಿದಂತೆ ಕೇಂದ್ರ ಯೋಜನೆಗಳ ಉದ್ದೇಶಗಳಿಂದ ಫಲಾನುಭವಿಗಳನ್ನು ವಂಚಿತಗೊಳಿಸಿದಂತಾಯಿತು.

**ಕೋಷ್ಟಕ–2.5: ಕೇಂದ್ರದ ನೆರವನ್ನು ಪಡೆಯದಿರುವುದು ಮತ್ತು ಕೇಂದ್ರದ ನೆರವಿನ ಸಂಭಾವ್ಯ ನಷ್ಟ**

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಉದ್ದೇಶಗಳು | ಲೆಕ್ಕಪರಿಶೋಧನಾ ಷರಾ |
|---|---|---|---|
| 1 | "ಬ್ರೈಲ್ ಪ್ರೆಸ್‌ಗಳ ಸ್ಥಾಪನೆ/ ಆಧುನೀಕರಣ/ಸಾಮರ್ಥ್ಯ ವರ್ಧನೆಗೆ ಬೆಂಬಲ" ದ ಕೇಂದ್ರ ವಲಯ ಯೋಜನೆ. | ಭಾರತ ಸರ್ಕಾರವು ನವೆಂಬರ್ 2014ರಲ್ಲಿ "ಬ್ರೈಲ್ ಪ್ರೆಸ್‌ಗಳ ಸ್ಥಾಪನೆ/ಆಧುನೀಕರಣ/ ಸಾಮರ್ಥ್ಯ ವರ್ಧನೆಗೆ ಬೆಂಬಲ" ದ ಕೇಂದ್ರ ವಲಯ ಯೋಜನೆಯನ್ನು ಪ್ರಾರಂಭಿಸಿತು. | ಮೈಸೂರಿನ ಸರ್ಕಾರಿ ಬ್ರೈಲ್ ಪ್ರಿಂಟಿಂಗ್ ಪ್ರೆಸ್‌ನ ಬಳಕೆಗಾಗಿ 2005ರಲ್ಲಿ ಖರೀದಿಸಿದ್ದ ಅಸ್ತಿತ್ವದಲ್ಲಿರುವ ಬ್ರೈಲ್ ಎಂಬೋಸರ್ (ಬ್ರೈಲ್ಲೋ 400 ಎಸ್‌ಆರ್) ಬದಲಿಗೆ ₹71.40 ಲಕ್ಷ ವೆಚ್ಚದಲ್ಲಿ ಇಲಾಖೆಯು ಹೈಸ್ಪೀಡ್ ಗಣಕೀಕೃತ ಬ್ರೈಲ್ಲೋ ಎಂಬೋಸರ್ ಅನ್ನು ಖರೀದಿಸಿತು (ಜೂನ್ 2018). ಆದರೆ, ಇಲಾಖೆಯು ಯೋಜನೆಯಡಿಯಲ್ಲಿ ಹೇಳಲಾದ ಉಪಕರಣಗಳನ್ನು ಖರೀದಿಸಲು ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸಲಿಲ್ಲ ಮತ್ತು ಪರಿಣಾಮವಾಗಿ ಕೇಂದ್ರದ ನೆರವನ್ನು ಪಡೆಯುವಲ್ಲಿ ವಿಫಲವಾಯಿತು. |
| 2 | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅನುಷ್ಠಾನ ಅಧಿನಿಯಮ, 2016ರ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರಗಳು/ ಕೇಂದ್ರಶಾಸಿತ ಪ್ರದೇಶಗಳ ಮೂಲಸೌಕರ್ಯ ಸೌಲಭ್ಯಗಳಿಗೆ ಅನುದಾನ (ಎಸ್‌ಐಪಿಡಿಎ). | ರಾಜ್ಯ ಆಯುಕ್ತರ ಕಛೇರಿಗೆ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಎಸ್‌ಐಪಿಡಿಎ ಅಡಿಯಲ್ಲಿ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಒಂದು–ಬಾರಿ ಅನುದಾನವನ್ನು (2016) ಭಾರತ ಸರ್ಕಾರ ಒದಗಿಸಿತು. | ರಾಜ್ಯ ಸರ್ಕಾರವು ಈ ನೆರವಿನ ಪ್ರಯೋಜನವನ್ನು ಪಡೆಯಲಿಲ್ಲ ಮತ್ತು ರಾಜ್ಯ ಆಯುಕ್ತರ ಕಛೇರಿ ಮೂಲಸೌಕರ್ಯಗಳನ್ನು ಒದಗಿಸಲು ತನ್ನ ಸ್ವಂತ ಬಜೆಟ್‌ನ ₹27.50 ಲಕ್ಷವನ್ನು ವೆಚ್ಚ ಮಾಡಿತು (ಮಾರ್ಚ್ 2020) ಎಸ್‌ಐಪಿಡಿಎ ಯೋಜನೆಯಡಿ, ಆರ್‌ಪಿಡಬ್ಲ್ಯು ಅಧಿನಿಯಮ, ಕರ್ನಾಟಕ ರಾಜ್ಯ ಆಯುಕ್ತರ ಕಛೇರಿಯ ನವೀಕರಣಕ್ಕೆ ಅವಕಾಶವಿರಲಿಲ್ಲವಾದ್ದರಿಂದ ಈ ಕಛೇರಿಯ ನವೀಕರಣಕ್ಕಾಗಿ ರಾಜ್ಯ ನಿಧಿಯಿಂದ ₹27.50 ಲಕ್ಷವನ್ನು ವೆ ಮಾಡಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ಭಾರ ಸರ್ಕಾರದ ಮಾರ್ಗಸೂಚಿಗಳು ಈ ವೆಚ್ಚವನ್ನು ಒಂದ ಬಾರಿಯ ಅನುದಾನವಾಗಿ ಒದಗಿಸಿರುವುದರಿಂ ಉತ್ತರವನ್ನು ಒಪ್ಪಲಾಗುವುದಿಲ್ಲ. |
| 3 | ಜಾಗೃತಿ ಮತ್ತು ಪ್ರಚಾರ ಯೋಜನೆ | ಸಂದರ್ಭ ಆಧಾರಿತ ಪ್ರಚಾರವನ್ನು ಒಳಗೊಂಡು ವಿದ್ಯುನ್ಮಾನ, ಮುದ್ರಣ, ಚಲನಚಿತ್ರ ಮಾಧ್ಯಮ, ಮಲ್ಟಿಮೀಡಿಯಾಗಳ ಮೂಲಕ ಯೋಜನೆಗಳು, ವಿವಿಧ ಇಲಾಖೆಗಳು ನಡೆಸುತ್ತಿರುವ ಕಾರ್ಯಕ್ರಮಗಳು ಸೇರಿದಂತೆ ವ್ಯಾಪಕ ಪ್ರಚಾರವನ್ನು ನೀಡುವ ಉದ್ದೇಶದಿಂದ ಭಾರತ ಸರ್ಕಾರವು ಈ ಯೋಜನೆಯನ್ನು ಪ್ರಾರಂಭಿಸಿತು (2015–16 ರಲ್ಲಿ ಪರಿಷ್ಕರಿಸಲಾಗಿದೆ). | ಇಲಾಖೆಯು ರಾಜ್ಯದಲ್ಲಿ ಯೋಜನೆಯನ್ನು ಜಾರಿಗೊಳಿಸಲಿಲ್ಲವಾಗಿ ಅರ್ಹ ಸಂಸ್ಥೆಗಳು ಕೇಂದ್ರದ ನೆರವಿನಿಂದ ವಂಚಿತವಾದವು. |
| 4 | ಉಪಕರಣಗಳ ಖರೀದಿ/ಅಳವಡಿಕೆಗೆ ಅಂಗವಿಕಲರಿಗೆ ನೆರವು (ಎಡಿಐಪಿ ಯೋಜನೆ) | ಅಗತ್ಯವುಳ್ಳ ಅಂಗವಿಕಲರಿಗೆ ಆಧುನಿಕ, ಪ್ರಮಾಣಿತ ಸಾಧನಗಳು ಮತ್ತು ಉಪಕರಣಗಳೊಂದಿಗೆ ಸಹಾಯ ಮಾಡುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ, ಇದು ಅವರ ಅಂಗವೈಕಲ್ಯಗಳ | ರಾಜ್ಯದ 16 ಜಿಲ್ಲೆಗಳಲ್ಲಿ ಡಿಡಿಆರ್‌ಸಿಗಳು ಅಸ್ತಿತ್ವದಲ್ಲಿದ್ದರೂ ಸಹ ಇಲಾಖೆಯು ಈ ಯೋಜನೆಯನ್ನು ಜಾರಿಗೊಳಿಸಲಿಲ್ಲ. ತತ್ಪರಿಣಾಮವಾಗಿ ಕೇಂದ್ರದ ನೆರವು ಪಡೆಯುವ ಅವಕಾಶವನ್ನು ಕಳೆದುಕೊಂಡಿತು. 2016– |

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ಉದ್ದೇಶಗಳು | ಲೆಕ್ಕಪರಿಶೋಧನಾ ಷರಾ |
|---|---|---|---|
| | | ಪರಿಣಾಮಗಳನ್ನು ಕಡಿಮೆ ಮಾಡುವ ಮೂಲಕ ಅವರ ದೈಹಿಕ, ಸಾಮಾಜಿಕ ಮತ್ತು ಮಾನಸಿಕ ಪುನರ್ವಸತಿಯನ್ನು ಉತ್ತೇಜಿಸುತ್ತದೆ ಮತ್ತು ಸರಿಪಡಿಸುವ ಶಸ್ತ್ರಚಿಕಿತ್ಸೆಗಳನ್ನು ನಡೆಸುವುದು ಸೇರಿದಂತೆ ಅವರ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಫಲಾನುಭವಿಗಳು ₹8,000ಕ್ಕಿಂತ ಹೆಚ್ಚಿನ ವೆಚ್ಚವಿಲ್ಲದ ಸಾಧನಗಳು/ಉಪಕರಣಗಳಿಗೆ ಮಾತ್ರ ಅರ್ಹರಾಗಿರುತ್ತಾರೆ ಹಾಗೂ ದೃಷ್ಟಿ, ಮಾನಸಿಕ, ಮಾತು ಮತ್ತು ಶ್ರವಣ ಅಥವಾ ಬಹು ಅಂಗವಿಕಲರಿಗೆ ಈ ಮಿತಿಯು ₹12,000 ಆಗಿದೆ. | 17ರಿಂದ 2021–22ರ ಅವಧಿಯಲ್ಲಿ ಅಂಗವಿಕಲರಿಗೆ (28,573) ಸಹಾಯಕ ಸಾಧನಗಳ ಖರೀದಿ ಮತ್ತು ವಿತರಣೆಗಾಗಿ ಇಲಾಖೆಯು ₹12.78 ಕೋಟಿ ರಾಜ್ಯ ಹಣವನ್ನು ವೆಚ್ಚ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.<br><br>ಡಿಡಿಆರ್‌ಸಿಗಳು ಎಡಿಐಪಿ ಯೋಜನೆಗಳ ಅಡಿಯಲ್ಲಿ ಅನುದಾನಕ್ಕಾಗಿ ಅರ್ಜಿ ಸಲ್ಲಿಸಲಿಲ್ಲ ಎಂದು ರಾಜ್ಯ ಸರ್ಕಾರ ತಿಳಿಸಿತು. ಎಡಿಐಪಿ ಯೋಜನೆಯ ಪ್ರಯೋಜನಗಳನ್ನು ಪಡೆಯಲು ಡಿಡಿಆರ್‌ಸಿಗಳಿಗೆ ತಿಳಿಸುವಲ್ಲಿ ಇಲಾಖೆಯು ಪೂರ್ವಭಾವಿ ಪಾತ್ರವನ್ನು ವಹಿಸಲು ವಿಫಲವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ ಏಕೆಂದರೆ ರಾಜ್ಯ ಬಜೆಟ್‌ನಲ್ಲಿ ಯಾವಾಗಲೂ ನಿರ್ಬಂಧವಿರುವುದರಿಂದ ರಾಜ್ಯ ನಿಧಿಗಳ ಜೊತೆಗೆ ಕೇಂದ್ರ ಯೋಜನೆಯ ನಿಧಿಗಳು ಹೆಚ್ಚಿನ ಫಲಾನುಭವಿಗಳಿಗೆ ಲಾಭವಾಗುತ್ತದೆ. |
| 5 | ಸ್ವಾವಲಂಬನ್ ಛಾತ್ರವಾಸ್ ಯೋಜನೆ. | ಪರಿಸರ ಮತ್ತು ಸಾರಿಗೆ ವ್ಯವಸ್ಥೆಯಲ್ಲಿನ ಅಡೆತಡೆಗಳಿಂದಾಗಿ ತಮ್ಮ ಶಿಕ್ಷಣದ ಸ್ಥಳಗಳನ್ನು ತಲುಪಲು ಸಾಧ್ಯವಾಗದ ಅಂಗವಿಕಲ ಮಕ್ಕಳು ಮತ್ತು ಯುವಕರಿಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಹಂತಗಳಲ್ಲಿ ಶಿಕ್ಷಣದ ಅವಕಾಶಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಭಾರತ ಸರ್ಕಾರವು ಸ್ವಾವಲಂಬನ್ ಛಾತ್ರವಾಸ್ ಯೋಜನೆಯನ್ನು ಪರಿಚಯಿಸಿತು (2015). ಯೋಜನೆಯಡಿಯಲ್ಲಿ, ಪ್ರತಿ ಮೂರು ವರ್ಷಗಳಿಗೊಮ್ಮೆ ಪರಿಶೀಲಿಸಬೇಕಾದ ಪ್ರಮಾಣಿತ ವೆಚ್ಚವಾಗಿ ಅಂಗವೈಕಲ್ಯ ಹೊಂದಿರುವ ಪ್ರತಿ ನಿವಾಸಿಗೆ ₹ ಎರಡು ಲಕ್ಷದಂತೆ ಪ್ರತಿ ಹಾಸ್ಟೆಲ್‌ಗೆ ₹ ಎರಡು ಕೋಟಿಯವರೆಗೆ ಕೇಂದ್ರ ನೆರವನ್ನು ಒದಗಿಸಲಾಗುತ್ತದೆ. | ರಾಜ್ಯ ಸರ್ಕಾರವು ಯೋಜನೆ ಅಡಿಯಲ್ಲಿ ಜಿಲ್ಲೆಗಳು, ಸ್ವಯಂಸೇವಾ ಸಂಸ್ಥೆಗಳು ಅಥವಾ ಶಿಕ್ಷಣ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಕೋರಿರಲಿಲ್ಲವಾಗಿ ಯಾವುದೇ ನೆರವನ್ನು ಪಡೆದಿರಲಿಲ್ಲ. ತತ್ಪರಿಣಾಮವಾಗಿ, ಅಂಗವಿಕಲರಿಗೆ ಅಗತ್ಯ ಪುನರ್ವಸತಿ ಕ್ರಮಗಳನ್ನು ಒದಗಿಸಲು ಕೇಂದ್ರದ ನೆರವನ್ನು ಪಡೆಯುವ ಅವಕಾಶವನ್ನು ರಾಜ್ಯ ಸರ್ಕಾರವು ಕಳೆದುಕೊಂಡಿತು. 88ರಲ್ಲಿ 35 ಸಂಸ್ಥೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.<br><br>ಭಾರತ ಸರ್ಕಾರ ಮಾರ್ಗಸೂಚಿಗಳನ್ನು ರೂಪಿಸದ ಕಾರಣ ಈ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿಲ್ಲ ಎಂದು ರಾಜ್ಯ ಸರ್ಕಾರ ತಿಳಿಸಿತು. ಆದರೆ, 2015ರಲ್ಲಿ ಇಲಾಖೆಯು ಯಾವುದೇ ಆರಂಭಿಕ ಪ್ರಸ್ತಾವನೆಗಳನ್ನು ಸಲ್ಲಿಸದ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ. |
| 6 | ಅಂಗವಿಕಲ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡುವ ಯೋಜನೆ. | ಯೋಜನೆಯ ಮಾರ್ಗಸೂಚಿಗಳ ಅಡಿಯಲ್ಲಿ, ಇಂಜಿನಿಯರಿಂಗ್, ವೈದ್ಯಕೀಯ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಪ್ರವೇಶಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು/ಪ್ರವೇಶ ಪರೀಕ್ಷೆಗಳನ್ನು ಬರೆಯಲು ಕನಿಷ್ಠ ಶೇಕಡಾ 40 ಅಥವಾ ಅದಕ್ಕಿಂತ ಹೆಚ್ಚಿನ ಅಂಗವೈಕಲ್ಯ ಹೊಂದಿರುವ ವಿಕಲಾಂಗ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡುವ ಯೋಜನೆಯನ್ನು ಭಾರತ ಸರ್ಕಾರವು ಪರಿಚಯಿಸಿತು (ಏಪ್ರಿಲ್ 2017). ವಿದ್ಯಾರ್ಥಿಗಳಿಗೆ ಮಾಸಿಕ ಸ್ಟೈಫಂಡ್/ವಿಶೇಷ ಭತ್ಯೆಗಳನ್ನು ಪಾವತಿಸುವುದರ ಜೊತೆಗೆ ಶುಲ್ಕವನ್ನು ಸಹಾಯಾನುದಾನದ ರೂಪದಲ್ಲಿ ನೇರವಾಗಿ ತರಬೇತಿ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. | ರಾಜ್ಯ ಸರ್ಕಾರ/ಇಲಾಖೆಯು ಈ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತಂದಿಲ್ಲ ಅಥವಾ ವಿಕಲಚೇತನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಯೋಜನೆಯ ಬಗ್ಗೆ ಯಾವುದೇ ಜಾಗೃತಿ ಮೂಡಿಸಿಲ್ಲ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. |

# ಅಧ್ಯಾಯ–III

# ಸುಲಭ ಸೌಕರ್ಯ

# ಅಧ್ಯಾಯ–III: ಸುಲಭ ಸೌಕರ್ಯ

*ಅಂಗವಿಕಲರಿಗೆ ಪ್ರವೇಶ ಸೌಲಭ್ಯಗಳನ್ನು ಒದಗಿಸುವುದಕ್ಕೆ ರಾಜ್ಯ ಸರ್ಕಾರವು ಉಪಕ್ರಮಗಳನ್ನು ತೆಗೆದುಕೊಂಡಿತ್ತು. ಆದರೆ ನಿಗದಿತ ಮಾನದಂಡಗಳಿಗೆ ಪ್ರತಿಯಾಗಿ ಎಲ್ಲಾ ಸಾರ್ವಜನಿಕ ಕಟ್ಟಡಗಳಲ್ಲಿ ತಡೆರಹಿತ ಸೌಲಭ್ಯಗಳನ್ನು ಒದಗಿಸುವುದು, ಸಾರಿಗೆ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಅಂಗವಿಕಲ ಸ್ನೇಹಿ ಸೌಲಭ್ಯಗಳನ್ನು ಸುಧಾರಿಸಲು ಮತ್ತು ನಿಯಮಿತ ಮತ್ತು ವಿಶೇಷ ಶಾಲೆಗಳಿಗೆ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಇನ್ನೂ ಕ್ರಮಗಳನ್ನು ಕೈಗೊಂಡಿರಲಿಲ್ಲ.*

"ಸುಲಭ ಸೌಕರ್ಯ" ಎಂದರೆ ಅಂಗವೈಕಲ್ಯ ಹೊಂದಿರುವ ವ್ಯಕ್ತಿಯು ಅಂಗವೈಕಲ್ಯವಿಲ್ಲದ ವ್ಯಕ್ತಿಗೆ ಸಮಾನವಾದ ಪರಿಣಾಮಕಾರಿ ಮತ್ತು ಸಮಾನವಾದ ಏಕೀಕೃತ ರೀತಿಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳಲು, ಅದೇ ಸಂವಹನಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಆನಂದಿಸಲು ಅವಕಾಶವನ್ನು ನೀಡುವುದು. ಎಲ್ಲಾ ಸಾರ್ವಜನಿಕ ಕೇಂದ್ರಿತ ಕಟ್ಟಡಗಳು, ಸಾರಿಗೆ ವ್ಯವಸ್ಥೆಗಳು, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಸೇವೆಗಳು (ಐಸಿಟಿ), ಗ್ರಾಹಕ ಉತ್ಪನ್ನಗಳು ಮತ್ತು ಸಮಯ ಬದ್ಧವಾಗಿ ಸರ್ಕಾರ ಅಥವಾ ಇತರೆ ಸೇವಾ ಪೂರೈಕೆದಾರರು ಒದಗಿಸುವ ಎಲ್ಲಾ ಸೇವೆಗಳಲ್ಲಿ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಆರ್‌ಪಿಡಬ್ಲ್ಯುಡಿ ಕಾಯಿದೆಯ ಪರಿಚ್ಛೇದ 40–46 ಕಡ್ಡಾಯಗೊಳಿಸುತ್ತವೆ. ಈ ಕಾಯಿದೆಯು ವಿವಿಧ ಕ್ಷೇತ್ರಗಳಾದ್ಯಂತ ಅಳವಡಿಕೆಗಾಗಿ ಪ್ರವೇಶಿಸುವಿಕೆ ಮಾನದಂಡಗಳು/ ಮಾರ್ಗಸೂಚಿಗಳನ್ನು ರೂಪಿಸಲು ಸಹ ಅವಕಾಶ ನೀಡುತ್ತದೆ.

2018–19 ಮತ್ತು 2019–20ರ ಅವಧಿಯಲ್ಲಿ ಸಾರ್ವಜನಿಕ ಕಟ್ಟಡಗಳಲ್ಲಿ ಸುಲಭ ಪ್ರವೇಶ ಸೌಲಭ್ಯಗಳನ್ನು ಒದಗಿಸಲು ಭಾರತ ಸರ್ಕಾರವು ₹27.09 ಕೋಟಿ ಬಿಡುಗಡೆ ಮಾಡಿತ್ತು. ಆದರೆ, ರಾಜ್ಯ ಸರ್ಕಾರವು ಇಲಾಖೆಯ ವ್ಯಾಪ್ತಿಯಲ್ಲಿರುವ ವಿಶೇಷ ಶಾಲೆಗಳು, ಪುನರ್ವಸತಿ ಗೃಹಗಳು/ಕೇಂದ್ರಗಳಲ್ಲಿ ಪ್ರವೇಶಿಸಬಹುದಾದ ವೈಶಿಷ್ಟ್ಯಗಳನ್ನು ಒದಗಿಸಲು ಹಣ ಹಂಚಿಕೆಗೆ ಯಾವುದೇ ಪ್ರತ್ಯೇಕ ಅವಕಾಶವನ್ನು ಮಾಡಿರಲಿಲ್ಲ. ಅಕ್ಸೆಸ್ಸಿಬಲ್ ಇಂಡಿಯಾ ಅಭಿಯಾನಕ್ಕಾಗಿ ಒದಗಿಸಲಾದ ಹಣವನ್ನು ಅತ್ಯುತ್ತಮವಾಗಿ ಬಳಸಿರಲಿಲ್ಲ. ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ ವಿಶೇಷ ಮತ್ತು ಸಾಮಾನ್ಯ ಶಾಲೆಗಳು ತಮ್ಮ ಆವರಣದಲ್ಲಿ ಪ್ರವೇಶಿಸಬಹುದಾದ ವೈಶಿಷ್ಟ್ಯಗಳನ್ನು ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

## 3.1 ಅಕ್ಸೆಸ್ಸಿಬಲ್ ಇಂಡಿಯಾ ಅಭಿಯಾನ

ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಯು (ಡಿಇಪಿಡಬ್ಲ್ಯುಡಿ) ಅಂಗವಿಕಲರಿಗೆ ಸಾರ್ವತ್ರಿಕ ಪ್ರವೇಶವನ್ನು ಸಾಧಿಸಲು ಅಕ್ಸೆಸ್ಸಿಬಲ್ ಇಂಡಿಯಾ ಅಭಿಯಾನವನ್ನು (ಸುಗಮ್ಯ ಭಾರತ್ ಅಭಿಯಾನ್) ರಾಷ್ಟ್ರವ್ಯಾಪಿ ಅಭಿಯಾನವಾಗಿ ಪ್ರಾರಂಭಿಸಿತು (ಡಿಸೆಂಬರ್ 2015). ಅಭಿಯಾನವು, **ನಕ್ಷೆ–3.1ರಲ್ಲಿ** ತೋರಿಸಿರುವಂತೆ, ಮೂರು ಪ್ರಮುಖ ಘಟಕಗಳ ಮೇಲೆ ಗಮನ ಕೇಂದ್ರೀಕರಿಸಿತ್ತು, ಅವುಗಳೆಂದರೆ ಪರಿಸರ ನಿರ್ಮಾಣ, ಸಾರಿಗೆ ವಲಯ ಮತ್ತು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ (ಐಸಿಟಿ) ಪರಿಸರ ವ್ಯವಸ್ಥೆ.

**ನಕ್ಷೆ–3.1: ಘಟಕಗಳು ಮತ್ತು ಅವುಗಳ ಉದ್ದೇಶಗಳು**

| ಘಟಕ | ಉದ್ದೇಶ |
| --- | --- |
| ತಡೆರಹಿತ ವಾತಾವರಣ | •ಪ್ರವೇಶಿಸಬಹುದಾದ ಸರ್ಕಾರಿ ಕಟ್ಟಡಗಳ ಅನುಪಾತವನ್ನು ಹೆಚ್ಚಿಸುವುದು ಮತ್ತು ಬೆಂಗಳೂರು ಸೇರಿದಂತೆ 26 ನಗರಗಳಲ್ಲಿ ಕನಿಷ್ಠ 50 ಪ್ರಮುಖ ಸರ್ಕಾರಿ ಕಟ್ಟಡಗಳ ಪ್ರವೇಶ ಸಾಧ್ಯತೆಯ ಲೆಕ್ಕಪರಿಶೋಧನೆ ನಡೆಸುವುದು ಮತ್ತು ಅವುಗಳನ್ನು ಸಂಪೂರ್ಣವಾಗಿ ಪ್ರವೇಶಿಸಬಹುದಾದ ಕಟ್ಟಡಗಳನ್ನಾಗಿ ಪರಿವರ್ತಿಸುವುದು. |
| ಸಾರಿಗೆ ವಲಯ | •ಪ್ರವೇಶಿಸಬಹುದಾದ ಸಾರ್ವಜನಿಕ ಸಾರಿಗೆಯ ಅನುಪಾತವನ್ನು ಹೆಚ್ಚಿಸುವುದು – ದೇಶದಲ್ಲಿ ಶೇಕಡಾ 10ರಷ್ಟು ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಸಾರಿಗೆ ವಾಹನಗಳನ್ನು ಸಂಪೂರ್ಣವಾಗಿ ಪ್ರವೇಶಿಸಬಹುದಾದ ವಾಹನಗಳಾಗಿ ಪರಿವರ್ತಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. |
| ಐಸಿಟಿ ಪರಿಸರ ವ್ಯವಸ್ಥೆ | •ಎಲ್ಲಾ ಸರ್ಕಾರಿ (ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ) ವೆಬ್‌ಸೈಟ್‌ಗಳಲ್ಲಿ ಶೇಕಡಾ 50ರಷ್ಟು ಪ್ರವೇಶಿಸುವಿಕೆ ಲೆಕ್ಕಪರಿಶೋಧನೆಯನ್ನು ನಡೆಸುವುದು ಮತ್ತು ಅವುಗಳನ್ನು ಸಂಪೂರ್ಣವಾಗಿ ಪ್ರವೇಶಿಸಬಹುದಾದ ವೆಬ್‌ಸೈಟ್‌ಗಳಾಗಿ ಪರಿವರ್ತಿಸುವುದು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಎಲ್ಲಾ ಸಾರ್ವಜನಿಕ ದಾಖಲೆಗಳಲ್ಲಿ ಕನಿಷ್ಠ ಶೇಕಡಾ 50ರಷ್ಟು ಪ್ರವೇಶದ ಮಾನದಂಡಗಳನ್ನು ಪೂರೈಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. |

### *3.1.1 ತಡೆರಹಿತ ವಾತಾವರಣ ನಿರ್ಮಾಣ*

ಪ್ರವೇಶ ಸೌಲಭ್ಯಗಳನ್ನು ಒದಗಿಸಲು, ರಾಜ್ಯ ಸರ್ಕಾರವು ಸಲ್ಲಿಸಿದ ಅಂದಾಜುಗಳ ಆಧಾರದ ಮೇಲೆ ಭಾರತ ಸರ್ಕಾರವು 47 ಕಟ್ಟಡಗಳಿಗೆ ₹27.09 ಕೋಟಿಯನ್ನು (2018–19ರಲ್ಲಿ 20 ಕಟ್ಟಡಗಳಿಗೆ ₹11.04 ಕೋಟಿ ಮತ್ತು 2019–20ರಲ್ಲಿ 27 ಕಟ್ಟಡಗಳಿಗೆ ₹16.05 ಕೋಟಿ) ಬಿಡುಗಡೆ ಮಾಡಿತು. ಸ್ವೀಕರಿಸಿದ ಮೇಲಿನ ಹಣದಲ್ಲಿ ರಾಜ್ಯ ಸರ್ಕಾರವು ಜನವರಿ 2020ರಲ್ಲಿ ಇಲಾಖೆಗೆ ₹11.04 ಕೋಟಿ ಬಿಡುಗಡೆ ಮಾಡಿತು ಮತ್ತು ಉಳಿದ ಹಣವನ್ನು ಇಲಾಖೆಗೆ ಬಿಡುಗಡೆ (2022–23) ಮಾಡಿತು. ಇಲಾಖೆಯು ₹8.44 ಕೋಟಿ ವೆಚ್ಚದಲ್ಲಿ 18 ಕಟ್ಟಡಗಳಿಗೆ ಪ್ರವೇಶ ಸೌಲಭ್ಯಗಳನ್ನು ಒದಗಿಸಿತು ಮತ್ತು ಉಳಿದ ಎರಡು ಕಟ್ಟಡಗಳಿಗೆ ಇನ್ನೂ ಸೌಲಭ್ಯಗಳನ್ನು ಒದಗಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2019–20ನೇ ಅವಧಿಗೆ ಇಲಾಖೆಯು ಹಣವನ್ನು ಇನ್ನೂ ಸ್ವೀಕರಿಸಬೇಕಿರುವುದರಿಂದ 27 ಕಟ್ಟಡಗಳಿಗೆ ಕಾಮಗಾರಿಯನ್ನು ಇನ್ನೂ ಕೈಗೆತ್ತಿಕೊಂಡಿರಲಿಲ್ಲ. 2018–19ನೇ ಅವಧಿಯಲ್ಲಿ ಗುರುತಿಸಲಾದ ಕಾಮಗಾರಿಗಳಿಗೆ ₹2.60 ಕೋಟಿ ಸ್ವೀಕರಿಸಿದ್ದು ಇಲಾಖೆಯು ಇನ್ನೂ ಅದನ್ನು ಬಳಕೆ ಮಾಡಿರಲಿಲ್ಲ (ಮೇ 2023).

ರಾಜ್ಯದ ಇತರ ಭಾಗಗಳಲ್ಲಿ ತಡೆರಹಿತ ಪರಿಸರವನ್ನು ಒದಗಿಸಲು ಸಾರ್ವಜನಿಕ ಕಟ್ಟಡಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಇನ್ನೂ ಕೈಗೊಳ್ಳಬೇಕಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2022–23ರ ಅವಧಿಯಲ್ಲಿ ಹಣಕಾಸು ಇಲಾಖೆಯು ಈ ಆಯವ್ಯಯವನ್ನು ಡಿಇಡಿಎಸ್‌ಸಿಗೆ ಬಿಡುಗಡೆ ಮಾಡಿದ್ದರೂ, ನಿಗದಿತ ದರಗಳಲ್ಲಿನ ಬದಲಾವಣೆಯಿಂದಾಗಿ ಉಪ–ಸಂಸ್ಥೆಗಳು ಬಿಡುಗಡೆಯಾದ ಆಯವ್ಯಯವನ್ನು ಸ್ವೀಕರಿಸದ ಕಾರಣ ಇಲಾಖೆಯು ಹಣವನ್ನು ಬಳಸಿಕೊಳ್ಳಲು

ಸಾಧ್ಯವಾಗಲಿಲ್ಲ ಮತ್ತು ಹೆಚ್ಚುವರಿ ಆಯವ್ಯಯಕ್ಕಾಗಿ ಮನವಿ ಮಾಡಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2023). ಆದ್ದರಿಂದ, ಬಿಡುಗಡೆಯಾದ ₹16.05 ಕೋಟಿ ಮೊತ್ತವನ್ನು ಭಾರತ ಸರ್ಕಾರದ ಸೂಚನೆಗಳ ಪ್ರಕಾರ ಕೇಂದ್ರೀಯ ನೋಡಲ್ ಏಜೆನ್ಸಿ (ಸಿಎನ್ಎ) ಖಾತೆಗೆ ಜಮಾ ಮಾಡಲಾಗಿತ್ತು.

ಹಣವನ್ನು ಬಿಡುಗಡೆ ಮಾಡುವಲ್ಲಿ ರಾಜ್ಯ ಸರ್ಕಾರದ ವಿಳಂಬ ಮತ್ತು ಅನುದಾನದ ಬಳಕೆಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವಲ್ಲಿ ಇಲಾಖೆಯ ವಿಫಲತೆಯು ಅಂಗವಿಕಲರಿಗೆ ಕಟ್ಟಡವನ್ನು ಪ್ರವೇಶಿಸಲು ಮತ್ತು ತಡೆಮುಕ್ತಗೊಳಿಸುವ ಕಾಮಗಾರಿಯ ಅನುಷ್ಠಾನದ ಮೇಲೆ ಪರಿಣಾಮ ಬೀರಿತು ಮತ್ತು ದಿವ್ಯಾಂಗ ಜನರಿಗೆ ಪ್ರವೇಶಿಸಬಹುದಾದ ಮೂಲಸೌಕರ್ಯವನ್ನು ವಂಚಿಸುವಲ್ಲಿ ಪರಿಣಮಿಸಿತು.

***ನಿದರ್ಶನ***

***ಅಂಗವಿಕಲರಿಗೆ ಮತದಾನ ಮಾಡಲು ಅನುಕೂಲತೆ***

*ಮನೆ-ಮನೆ ಸಮೀಕ್ಷೆಯ ಮೂಲಕ ಅಂಗವಿಕಲ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ದಾಖಲಿಸುವುದು ಗಾಲಿಕುರ್ಚಿಗಳನ್ನು ಬುಕ್ ಮಾಡುವುದು, ಚುನಾವಣಾ ಅಪ್ಲಿಕೇಶನ್‌ನ ಪರಿಚಯಿಸುವುದು, ಹ್ಯಾಂಡ್‌ರೈಲ್‌ಗಳೊಂದಿಗೆ ಗಟ್ಟಿಮುಟ್ಟಾದ ರ್‍ಯಾಂಪ್‌ಗಳನ್ನು ಒದಗಿಸುವುದು, ಬ್ರೈಲ್ ಲಿಪಿಯಲ್ಲಿ ವೋಟರ್ ಸ್ಲಿಪ್‌ಗಳನ್ನು ಸಿದ್ಧಪಡಿಸುವುದು, ರಾಜ್ಯದ ಪ್ರತಿನಿಧಿಯಾಗಿ ಹೆಸರಾಂತ ಅಂಗವಿಕಲರನ್ನು ತೊಡಗಿಸಿಕೊಳ್ಳುವುದು, ಇವುಗಳಲ್ಲಿ ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಸಂಘಟಿತ ಪ್ರಯತ್ನಗಳ ನಂತರ ರಾಜ್ಯವು 2013ರ ವಿಧಾನಸಭಾ ಚುನಾವಣೆಯಲ್ಲಿನ ಶೇಕಡಾ 67ರಿಂದ 2018ರ ವಿಧಾನಸಭಾ ಚುನಾವಣೆಯಲ್ಲಿ ಶೇಕಡಾ 76ಕ್ಕೆ ಮತ್ತು 2019ರ ಲೋಕಸಭಾ ಚುನಾವಣೆಯಲ್ಲಿ ಶೇಕಡಾ 80ಕ್ಕೆ ಅಂಗವಿಕಲ ಮತದಾರರ ಮತದಾನದಲ್ಲಿ ಹೆಚ್ಚಳ ಕಂಡಿತ್ತು.*

*ಕರ್ನಾಟಕದಲ್ಲಿನ ನಿರಂತರ ಗುರುತಿಸುವಿಕೆ ಮತ್ತು ಪರಿಹಾರಗಳು, ಮತದಾರರ ನೋಂದಣಿ ಮತ್ತು ಮತದಾನ, ಮತದಾರರ ಅಂತರ್ಗತ ಶಿಕ್ಷಣ, ಚುನಾವಣೆಗಳಿಗೆ ಪ್ರವೇಶಿಸಬಹುದಾದ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು ಇತ್ಯಾದಿಗಳಂತಹ ಉತ್ತಮ ಅಭ್ಯಾಸಗಳು ಮತ್ತು ಹೊಸ ಉಪಕ್ರಮಗಳನ್ನು ಭಾರತದ ಚುನಾವಣಾ ಆಯೋಗವು ಅಂಗೀಕರಿಸಿತು ಮತ್ತು ಅವುಗಳನ್ನು ತನ್ನ ಕಾರ್ಯತಂತ್ರದ ಚೌಕಟ್ಟಿನಲ್ಲಿ ಅಳವಡಿಸಿಕೊಂಡಿತು.*

*ಕರ್ನಾಟಕದಲ್ಲಿ 5.71 ಲಕ್ಷ ಅಂಗವಿಕಲ ಮತದಾರರಿದ್ದರು (ಮೇ 2023ರಲ್ಲಿ ನಡೆದ ವಿಧಾನಸಭೆ ಚುನಾವಣೆಗಳು) ಮತ್ತು ಕರ್ನಾಟಕದಲ್ಲಿ ಮೊದಲ ಬಾರಿಗೆ ಮಾನದಂಡದ ಅಂಗವಿಕಲತೆ ಹೊಂದಿರುವ 19,279 ಅಂಗವಿಕಲ ಮತದಾರರಿಗೆ ಮನೆಯಲ್ಲಿಯೇ ಮತದಾನ ಮಾಡುವ ಸೌಲಭ್ಯವನ್ನು ಒದಗಿಸಲಾಯಿತು ಮತ್ತು ಅವರಲ್ಲಿ ಶೇಕಡಾ 95ರಷ್ಟು ಅಂಗವಿಕಲರು ಮನೆಯಿಂದಲೇ ಮತದಾನ ಮಾಡಿದರು.*

### *3.1.2 ಸಾರಿಗೆ ವಲಯ*

ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 41 ಸಮುಚಿತ ಸರ್ಕಾರವು ಕೆಳಗಿನವುಗಳನ್ನು ಒದಗಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆದೇಶಿಸುತ್ತದೆ.

- ಅಂಗವಿಕಲ ವ್ಯಕ್ತಿಗಳಿಗೆ ವಾಹನ ನಿಲುಗಡೆ ಸ್ಥಳಗಳ, ಶೌಚಾಲಯಗಳ, ಟಿಕೇಟ್ ನೀಡಿಕೆ ಕೌಂಟರ್‌ಗಳಲ್ಲಿ ಮತ್ತು ಟಿಕೆಟ್ ನೀಡಿಕೆ ಯಂತ್ರಗಳು ಸುಲಭವಾಗಿ ಲಭ್ಯವಾಗುವಂತೆ ರೂಪಿಸಿರುವ ಮಾನದಂಡಗಳಿಗೆ ಅನುಸಾರವಾಗಿ ಬಸ್ ನಿಲ್ದಾಣಗಳಲ್ಲಿ, ರೈಲ್ವೇ ನಿಲ್ದಾಣಗಳಲ್ಲಿ ಮತ್ತು ವಿಮಾನ ನಿಲ್ದಾಣಗಳಲ್ಲಿ ಸೌಕರ್ಯಗಳು;
- ತಾಂತ್ರಿಕವಾಗಿ ಕಾರ್ಯಸಾಧ್ಯವಿದ್ದಲ್ಲಿ ಮತ್ತು ವಿಕಲಚೇತನರಿಗೆ ಸುರಕ್ಷಿತ, ಆರ್ಥಿಕವಾಗಿ ಲಾಭದಾಯಕ ಮತ್ತು ವಿನ್ಯಾಸದಲ್ಲಿ ಪ್ರಮುಖ ರಚನಾತ್ಮಕ ಬದಲಾವಣೆಗಳಿಲ್ಲದೆ,

ಹಳೆಯ ಸಾರಿಗೆ ವಿಧಾನಗಳನ್ನು ಮರುಹೊಂದಿಸುವುದು ಸೇರಿದಂತೆ ವಿನ್ಯಾಸ ಮಾನದಂಡಗಳಿಗೆ ಅನುಗುಣವಾಗಿ ಎಲ್ಲಾ ಸಾರಿಗೆ ವಿಧಾನಗಳಿಗೆ ಪ್ರವೇಶ.

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಕಾರ್ಯಾಚರಣೆಗೊಳಿಸುತ್ತಿರುವ 8,673 ಬಸ್‌ಗಳಿವೆ (ಅಂತರ ಜಿಲ್ಲೆ/ರಾಜ್ಯ) ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಮ್‌ಟಿಸಿ) ಕಾರ್ಯಾಚರಣೆಗೊಳಿಸುತ್ತಿರುವ 6,603 ಬಸ್‌ಗಳಿವೆ. ಪ್ರವೇಶಿಸುವಿಕೆ ವೈಶಿಷ್ಟ್ಯಗಳ ಸ್ಥಿತಿಯ ಬಗ್ಗೆ ಲೆಕ್ಕಪರಿಶೋಧನೆಯ ಪ್ರಶ್ನೆಗೆ ಪ್ರತಿಕ್ರಿಯೆಯಾಗಿ, ಕೆಎಸ್‌ಆರ್‌ಟಿಸಿ ಮತ್ತು ಬಿಎಮ್‌ಟಿಸಿಗಳ ವ್ಯವಸ್ಥಾಪಕ ನಿರ್ದೇಶಕರುಗಳು ಸಾರಿಗೆ–ಸಂಬಂಧಿತ ಮೂಲಸೌಕರ್ಯ ಯೋಜನೆಗಳನ್ನು ಯೋಜಿಸುವಾಗ ಮತ್ತು ಕಾರ್ಯಗತಗೊಳಿಸುವಾಗ ಅಂಗವಿಕಲ ಸ್ನೇಹಿ ಸಲಹೆಗಳನ್ನು ಪರಿಗಣಿಸಲು ಅಂಗವಿಕಲರ ಸಮಿತಿಯನ್ನು ರಚಿಸಿರಲಿಲ್ಲ ಎಂದು ತಿಳಿಸಿದರು (ಅಕ್ಟೋಬರ್ 2020). ಸುಲಭವಾಗಿ ಪ್ರವೇಶಿಸಲು ಅನುಕೂಲವಾಗುವಂತೆ ಎಲ್ಲಾ ಪ್ರಮುಖ ಮತ್ತು ಚಿಕ್ಕ ಬಸ್ ನಿಲ್ದಾಣಗಳಲ್ಲಿ ಅನುಕೂಲಕ್ಕೆ ತಕ್ಕಂತೆ ಮಾಡಿದ ಗಾಲಿಕುರ್ಚಿಗಳೊಂದಿಗೆ ಮಡಚಬಹುದಾದ ಮತ್ತು ಸೂಕ್ತವಾದ ಇಳಿಜಾರುಗಳಂತಹ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಎಲ್ಲಾ ರೀತಿಯ ಬಸ್‌ಗಳಲ್ಲಿ ಕಡಿಮೆ ಚಲನಶೀಲತೆಯಿರುವ ಪ್ರಯಾಣಿಕರ ಆಗಮನ ಮತ್ತು ನಿರ್ಗಮನಕ್ಕೆ ಬಸ್ ಆಕಾರದ ವಿಶೇಷಣಗಳನ್ನು ರೂಪಿಸುವಾಗ ಬಸ್ ಆಕಾರದ ಕೋಡ್‌ನಲ್ಲಿ ನಮೂದಿಸಲಾದ ಅಂಗವಿಕಲ ವ್ಯಕ್ತಿಗಳ ಪ್ರವೇಶದ ವೈಶಿಷ್ಟ್ಯಗಳ ನಿಬಂಧನೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಎಂದೂ ಸಹ ತಿಳಿಸಲಾಯಿತು.

ಅಸ್ತಿತ್ವದಲ್ಲಿರುವ ಬಸ್‌ಗಳಿಗೆ ಸಂಬಂಧಿಸಿದಂತೆ, ಎಲ್ಲಾ ಎತ್ತರದ ಮೆಟ್ಟಿಲಿರುವ ಬಸ್‌ಗಳಲ್ಲಿ ಲಿಫ್ಟ್ ಮೆಕ್ಯಾನಿಸಂ ಸೌಲಭ್ಯವನ್ನು ಅಳವಡಿಸಲು ತಾಂತ್ರಿಕವಾಗಿ ಕಾರ್ಯಸಾಧ್ಯವಲ್ಲ ಮತ್ತು ಈ ಬಸ್‌ಗಳಿಗೆ ಅಂಗವಿಕಲ ವ್ಯಕ್ತಿಗಳು ಪ್ರವೇಶಿಸುವಂತೆ ಮಾಡಲು ತಾಂತ್ರಿಕ ಸಹಾಯವನ್ನು ಕೋರಲಾಗಿದೆ ಮತ್ತು ಆಡಿಯೊ ಅಲರ್ಟ್, ಬಜರ್‌ಗಳು ಮತ್ತು ರಿಂಗ್ ಹೋಲ್ಡರ್‌ಗಳಂತಹ ಸೌಲಭ್ಯಗಳನ್ನು ಮುಂದಿನ ದಿನಗಳಲ್ಲಿ ಒದಗಿಸಲಾಗುವುದು ಎಂದು ಭರವಸೆ ನೀಡಿದರು. ಕೆಎಸ್‌ಆರ್‌ಟಿಸಿ ಮತ್ತು ಬಿಎಮ್‌ಟಿಸಿಯ ನಿಬಂಧನೆಗಳ ಅನುಸರಣೆಯನ್ನು ತೋರಿಸುವ ತ:ಖ್ತೆಯನ್ನು **ಅನುಬಂಧ–3.1** ರಲ್ಲಿ ನೀಡಲಾಗಿದೆ.

ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ (ಮೇ 2023).

### *3.1.3 ಅಮೃತ್ ಯೋಜನೆಗಳಲ್ಲಿ ಪ್ರವೇಶಿಸುವಿಕೆ ವೈಶಿಷ್ಟ್ಯಗಳ ಅನುಪಸ್ಥಿತಿ*

ಭಾರತ ಸರ್ಕಾರದ ಯೋಜನೆಯಾದ "ಪುನರುಜ್ಜೀವನ ಮತ್ತು ನಗರ ಪರಿವರ್ತನೆಗಾಗಿ ಅಟಲ್ ಮಿಷನ್" (ಅಮೃತ್), ನೀರು ಸರಬರಾಜು, ಒಳಚರಂಡಿ, ನಗರ ಸಾರಿಗೆಯಂತಹ ಮೂಲಭೂತ ಸೇವೆಗಳನ್ನು ಮನೆಗಳಿಗೆ ಒದಗಿಸಲು ಮತ್ತು ಎಲ್ಲರಿಗೂ, ವಿಶೇಷವಾಗಿ ಬಡವರು ಮತ್ತು ಹಿಂದುಳಿದವರ ಜೀವನದ ಗುಣಮಟ್ಟವನ್ನು ಸುಧಾರಿಸಲು ನಗರಗಳಲ್ಲಿ ಸೌಕರ್ಯಗಳನ್ನು ನಿರ್ಮಿಸುವ ಗುರಿಯನ್ನು ಹೊಂದಿತ್ತು. ಅಮೃತ್‌ನ ಘಟಕಗಳು ಇತರ ವಿಷಯಗಳ ಜೊತೆಗೆ, ಸಾಮರ್ಥ್ಯ ನಿರ್ಮಾಣ, ನಗರ ಸಾರಿಗೆ ಮತ್ತು ಹಸಿರು ಸ್ಥಳಗಳು ಮತ್ತು ಉದ್ಯಾನವನಗಳ ಅಭಿವೃದ್ಧಿಯನ್ನು ಒಳಗೊಂಡಿತ್ತು.

ವಿಕಲಚೇತನರಿಗೆ ಕನಿಷ್ಠ ಪ್ರವೇಶದ ವೈಶಿಷ್ಟ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿದ್ದವು:

| | |
|---|---|
| ನಗರ ಸಾರಿಗೆ | ನಿಲ್ದಾಣಗಳಲ್ಲಿ ಸಮನಾದ ಹತ್ತುವಿಕೆ/ಇಳಿಯುವಿಕೆ ಮತ್ತು ಗಾಲಿಕುರ್ಚಿ ಚಲನೆಗೆ ಸ್ಥಳಾವಕಾಶ, ಬಸ್ ನಿಲ್ದಾಣಗಳ ಪ್ರವೇಶದ್ವಾರದಲ್ಲಿ ಸುಲಭ ಪ್ರವೇಶವನ್ನು ಒದಗಿಸುವುದು, ಸ್ಪರ್ಶ ಬ್ಲಾಕ್‌ಗಳೊಂದಿಗೆ ರ್‍ಯಾಂಪ್ ಪ್ರವೇಶ, ಅಂಗವಿಕಲ ಸ್ನೇಹಿ ಚಿತ್ರವನ್ನು ಪ್ರದರ್ಶಿಸುವ ಇಳಿಜಾರುಗಳು ಮತ್ತು ಕಡಿಮೆ ನೆಲಹಾಸುಗಳನ್ನು ಬಸ್ ನಿಲ್ದಾಣಗಳೊಂದಿಗೆ ಜೋಡಿಸಿರುವುದು |
| ಹಸಿರು ಸ್ಥಳ ಮತ್ತು ಉದ್ಯಾನವನಗಳು ಸಾಮಾನ್ಯ ಪ್ರವೇಶದ ವೈಶಿಷ್ಟ್ಯಗಳು | ಗಾಲಿಕುರ್ಚಿ–ಪ್ರವೇಶಿಸಬಹುದಾದ ಪ್ರವೇಶ ದ್ವಾರಗಳು ಮತ್ತು ಮಾರ್ಗಗಳು, ಹ್ಯಾಂಡ್‌ರೈಲ್‌ನಿಂದ ಸುತ್ತುವರೆದ ಜಾರಿಕೆಯಿಲ್ಲದ ಮತ್ತು ಸಮತಟ್ಟಾದ ಮಾರ್ಗಗಳು, ಪ್ರವೇಶ ದ್ವಾರಗಳು ಮತ್ತು ಆಟದ ಪ್ರದೇಶಗಳಲ್ಲಿ ರೇಲಿಂಗ್‌ಗಳನ್ನು ಹೊಂದಿರುವ ಇಳಿಜಾರುಗಳು, ಬ್ರೈಲ್‌ನಲ್ಲಿ (ಇಂಗ್ಲಿಷ್ ಮತ್ತು ಕನ್ನಡ) ಚಿಹ್ನೆಗಳ ಪ್ರದರ್ಶನ. |

ಯೋಜನೆಯಡಿಯಲ್ಲಿ ಸಿದ್ಧಪಡಿಸಲಾದ ಸವಿವರ ಯೋಜನಾ ವರದಿಗಳು ಅಂಗವಿಕಲರಿಗೆ ಪ್ರವೇಶದ ವೈಶಿಷ್ಟ್ಯಗಳನ್ನು ಒಳಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಅಂಗವಿಕಲರಿಗೆ ಪ್ರವೇಶದ ವೈಶಿಷ್ಟ್ಯಗಳನ್ನು ಅಳವಡಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡಲು ನಗರಾಭಿವೃದ್ಧಿ ಇಲಾಖೆಯನ್ನು ವಿನಂತಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2023). ಭವಿಷ್ಯದ ಯೋಜನೆಗಳಿಗಾಗಿ ವಿವರವಾದ ಯೋಜನಾ ವರದಿಗಳಲ್ಲಿ ಮತ್ತು ಪ್ರವೇಶದ ವೈಶಿಷ್ಟ್ಯಗಳನ್ನು ಅಳವಡಿಸುವ ಮೊದಲು ವಿಶೇಷ ಶಿಕ್ಷಕರು ಮತ್ತು ಉದ್ಯೋಗ ಚಿಕಿತ್ಸಕರೊಂದಿಗೆ ಸಮಾಲೋಚಿಸಿ ಟೆಂಡರ್ ದಾಖಲೆಗಳನ್ನು ನೀಡಲಾಗುವುದು ಎಂದೂ ಕೂಡ ತಿಳಿಸಲಾಯಿತು.

## 3.2 ಸುಗಮ ಪ್ರವಾಸೋದ್ಯಮ

ಅಂತರ್ಗತ ಪ್ರವಾಸೋದ್ಯಮವು ('ತಡೆ–ಮುಕ್ತ ಪ್ರವಾಸೋದ್ಯಮ' ಎಂದೂ ಕರೆಯುತ್ತಾರೆ) ಚಲನಶೀಲತೆ, ಶ್ರವಣ, ದೃಷ್ಟಿ, ಅರಿವಿನ ಅಥವಾ ಬುದ್ಧಿಮಾಂದ್ಯ ಮತ್ತು ಮಾನಸಿಕ ಅಸಾಮರ್ಥ್ಯಗಳು, ವಯಸ್ಸಾದ ವ್ಯಕ್ತಿಗಳು ಮತ್ತು ತಾತ್ಕಾಲಿಕ ಅಂಗವೈಕಲ್ಯ ಹೊಂದಿರುವವರು ಒಳಗೊಂಡಂತೆ ವಿಕಲಾಂಗತೆ ಇರುವ ಅಥವಾ ಇಲ್ಲದಿರುವ ಎಲ್ಲಾ ವ್ಯಕ್ತಿಗಳಿಗೆ ಪ್ರವೇಶಿಸಬಹುದಾದ ಪ್ರವಾಸೋದ್ಯಮ ಮತ್ತು ಪ್ರಯಾಣವಾಗಿದೆ. (ಟಕಯಾಮಾ ಘೋಷಣೆ, ಯುಎನ್‌ಇಎಸ್‌ಸಿಎಪಿ 2009).

2015–20 ಮತ್ತು 2020–25ರ ರಾಜ್ಯ ಪ್ರವಾಸೋದ್ಯಮ ನೀತಿಯು ಮೇಲಿನ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಲಿಲ್ಲ ಮತ್ತು ಇದು ವಿಕಲಾಂಗ ಪ್ರವಾಸಿಗರ ಪ್ರಮುಖ ಗುಣಲಕ್ಷಣಗಳ ದೃಷ್ಟಿಕೋನವನ್ನು ಹೊಂದಿರಲಿಲ್ಲ ಮತ್ತು ಚಲನಶೀಲತೆಯನ್ನು ಕಡಿಮೆ ಮಾಡಿತು ಹಾಗೂ ಪ್ರಯಾಣದ ಪ್ರಕ್ರಿಯೆಯಲ್ಲಿ ಅಂಗವಿಕಲ ವ್ಯಕ್ತಿಗಳು ಸಮಸ್ಯೆಗಳನ್ನು ಎದುರಿಸಿದರು ಹಾಗೂ 'ಭಾರತದಲ್ಲಿ ಅಂತರ್ಗತ ಪ್ರವಾಸೋದ್ಯಮದ ಸಮಸ್ಯೆಗಳು ಮತ್ತು ನಿರೀಕ್ಷೆಗಳ ಕುರಿತು ವರದಿಯಲ್ಲಿ[3]' (ಅಕ್ಟೋಬರ್ 2010) ಸೂಚಿಸಲಾದ ಪ್ರಮುಖ ಸ್ಥಳಗಳಲ್ಲಿ ಸೂಕ್ತವಾದ ಮಾಹಿತಿಯ ಕೊರತೆ ಮತ್ತು ಅಸಮರ್ಪಕ ನಾಮಫಲಕಗಳು, ವೈಯಕ್ತಿಕ ನೆರವು/ಉಪಕರಣಗಳ ಅಲಭ್ಯತೆ, ಕೈಗೆಟುಕುವ ಮತ್ತು ಪ್ರವೇಶಿಸಬಹುದಾದ ವಸತಿ ಸೌಕರ್ಯವನ್ನು ಗುರುತಿಸುವುದು, ಕಡಿಮೆ ಚಲನಶೀಲತೆ ಹೊಂದಿರುವ ಪ್ರವಾಸಿಗರಿಗೆ ಕೊಠಡಿಗಳಲ್ಲಿ ಅಗತ್ಯ ಸೌಲಭ್ಯಗಳು, ಶೌಚಾಲಯಗಳು

[3] ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್‌ಮೆಂಟ್ ನಡೆಸಿದ ಅಧ್ಯಯನ.

ಲಭ್ಯವಿಲ್ಲದಿರುವುದು ಮುಂತಾದ ಸಮಸ್ಯೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ವಿಕಲಚೇತನ ಪ್ರವಾಸಿಗರಿಗೆ ಪ್ರವೇಶ ಮಾರ್ಗಸೂಚಿಗಳನ್ನು ಸೇರಿಸಲು ರಾಜ್ಯ ಪ್ರವಾಸೋದ್ಯಮ ನೀತಿಯನ್ನು ತಿದ್ದುಪಡಿ ಮಾಡಲು ಪ್ರವಾಸೋದ್ಯಮ ಇಲಾಖೆಗೆ ಮನವಿ ಮಾಡಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿತು (ಮೇ 2023).

## 3.3 ಗ್ರಂಥಾಲಯಗಳಿಗೆ ಪ್ರವೇಶ ಸಾಧ್ಯತೆ


ಆರ್‌ಪಿಡಬ್ಲ್ಯುಡಿ ಅಧಿನಿಯಮದ ನಿಬಂಧನೆಗಳು, ಅಂತಹ ನಿಯಮಗಳ ಅಧಿಸೂಚನೆಯ ದಿನಾಂಕದಿಂದ ಐದು ವರ್ಷಗಳವರೆಗೆ ಮೀರದ ಅವಧಿಯೊಳಗೆ ಕೇಂದ್ರ ಸರ್ಕಾರವು ರೂಪಿಸಿದ ನಿಯಮಗಳಿಗೆ ಅನುಸಾರವಾಗಿ ಅಸ್ತಿತ್ವದಲ್ಲಿರುವ ಎಲ್ಲಾ ಸಾರ್ವಜನಿಕ ಕಟ್ಟಡಗಳನ್ನು ಅಂಗವಿಕಲ ವ್ಯಕ್ತಿಗಳ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸಮುಚಿತ ಸರ್ಕಾರಗಳನ್ನು ಕಡ್ಡಾಯಗೊಳಿಸುತ್ತದೆ.

ಅಂಗವಿಕಲ ವ್ಯಕ್ತಿಗಳಿಗೆ ಸಮಾನವಾದ, ಸುಲಭ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು ಸ್ಥಳಗಳ ವಿನ್ಯಾಸವನ್ನು ಸುಗಮಗೊಳಿಸಲು/ಮಾರ್ಗದರ್ಶನ ಮಾಡಲು 'ಅಂಗವಿಕಲ ವ್ಯಕ್ತಿಗಳಿಗೆ ತಡೆರಹಿತ ಪರಿಸರಕ್ಕಾಗಿ ಸುಗಮ ಮಾರ್ಗಸೂಚಿಗಳು ಮತ್ತು ಸ್ಥಳದ ಮಾನದಂಡಗಳನ್ನು' ಕೇಂದ್ರ ಸರ್ಕಾರವು ಜಾರಿಗೊಳಿಸಿತು (ಫೆಬ್ರವರಿ 2016). ಆ ಮಾರ್ಗಸೂಚಿಗಳ ಕಂಡಿಕೆ–4.2 (vi)ರ ಪ್ರಕಾರ, ಎಲ್ಲಾ ತೆರೆದ ಪುಸ್ತಕಗಳ ರಾಶಿಗೆ ಮತ್ತು ಗ್ರಂಥಾಲಯದ ಸೌಲಭ್ಯಗಳು ಮತ್ತು ಉಪಕರಣಗಳು ಪ್ರವೇಶ ಸಾಧ್ಯವಾಗಿರಬೇಕು. ಓದುವುದಕ್ಕೆ ಸಹಾಯದ ಅಗತ್ಯವಿರುವ ಶ್ರವಣ ಮತ್ತು ದೃಷ್ಟಿ ದೋಷವಿರುವ ವ್ಯಕ್ತಿಗಳಿಗೆ ವಿಶೇಷ ಕೊಠಡಿಯನ್ನು ಸಹ ಒದಗಿಸಬೇಕು.

ರಾಜ್ಯದಲ್ಲಿ 5,766 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಸೇರಿದಂತೆ 6,861 ಸಾರ್ವಜನಿಕ ಗ್ರಂಥಾಲಯಗಳಿವೆ. ಕರ್ನಾಟಕ ಗ್ರಂಥಾಲಯ ಅಧಿನಿಯಮ, 1965ರಲ್ಲಿ ಅಂಗವಿಕಲರು ಗ್ರಂಥಾಲಯಗಳನ್ನು ಪ್ರವೇಶಿಸಲು ಸಮಂಜಸವಾದ ರಚನಾತ್ಮಕ ಮಾರ್ಪಾಡುಗಳೊಂದಿಗೆ ಮರು ಹೊಂದಿಸುವುದು ಇತ್ಯಾದಿಗಳನ್ನು ಸೇರಿಸಲು ತಿದ್ದುಪಡಿ ಮಾಡಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗ್ರಂಥಾಲಯಗಳ ಇಲಾಖೆಯು ಗ್ರಂಥಾಲಯ ಕಟ್ಟಡಗಳ ಪ್ರವೇಶದ ಅಸ್ತಿತ್ವದಲ್ಲಿರುವ ಮಟ್ಟವನ್ನು ನಿರ್ಣಯಿಸಲು ಹಾಗೂ ಮತ್ತಷ್ಟು ವರ್ಧನೆಗಳಿಗಾಗಿ ಕಾರ್ಯ ಯೋಜನೆಯನ್ನು ತಯಾರಿಸಿರಲಿಲ್ಲ.

ಗ್ರಂಥಾಲಯಗಳಲ್ಲಿ ಲಭ್ಯವಿರುವ ಮೂಲಸೌಕರ್ಯ ಸೌಲಭ್ಯಗಳ ಸ್ಥಿತಿಯ ಬಗ್ಗೆ 229 ಗ್ರಂಥಾಲಯಗಳು (48 ಜಿಲ್ಲಾ ಕೇಂದ್ರ ಗ್ರಂಥಾಲಯಗಳು; 23 ನಗರ ಕೇಂದ್ರ ಗ್ರಂಥಾಲಯಗಳು ಮತ್ತು 158 ಇತರೆ ಗ್ರಂಥಾಲಯಗಳು) ಒದಗಿಸಿದ ಮಾಹಿತಿಯು ಶೇಕಡಾ 88ಕ್ಕೂ ಹೆಚ್ಚು ಗ್ರಂಥಾಲಯಗಳು ಅಂಗವಿಕಲರಿಗೆ ಪ್ರವೇಶಸಾಧ್ಯವಾಗುವ ಶೌಚಾಲಯಗಳು ಮತ್ತು ಪೀಠೋಪಕರಣಗಳನ್ನು ಹೊಂದಿರಲಿಲ್ಲ; ಶೇಕಡಾ 38ರಷ್ಟು ಗ್ರಂಥಾಲಯಗಳಿಗೆ ಸುಲಭವಾಗಿ ಪ್ರವೇಶ ಸೌಲಭ್ಯವನ್ನು ಒದಗಿಸಿರಲಿಲ್ಲ; ಶೇಕಡಾ 47ರಷ್ಟು ಗ್ರಂಥಾಲಯಗಳಲ್ಲಿ ಆಡಿಯೊ ಮತ್ತು ದೃಶ್ಯ ಸಹಾಯಕ ವಸ್ತುಗಳು/ಸಾಫ್ಟ್‌ವೇರ್‌ನಂತಹ ಅಂಗವಿಕಲ ವ್ಯಕ್ತಿಗಳಿಗಾಗಿನ ವಿಶೇಷ ಮಾಧ್ಯಮ ಸ್ವರೂಪಗಳನ್ನು ಹೊಂದಿರಲಿಲ್ಲ ಮತ್ತು ಶೇಕಡಾ 74ರಷ್ಟು ಗ್ರಂಥಾಲಯಗಳು, **ನಕ್ಷೆ–3.2 ರಲ್ಲಿ** ತೋರಿಸಿರುವಂತೆ ಮಾನಸಿಕ ವಿಕಲಾಂಗ ವ್ಯಕ್ತಿಗಳಿಗೆ ಸೌಲಭ್ಯಗಳನ್ನು ಹೊಂದಿರಲಿಲ್ಲ ಎಂಬುದನ್ನು ಸೂಚಿಸಿತು.

**ನಕ್ಷೆ– 3.2: ಮೂಲಸೌಕರ್ಯಗಳ ಸ್ಥಿತಿ**




ವಿಕಲಚೇತನರಿಗೆ ಸೌಲಭ್ಯ ಕಲ್ಪಿಸಲು ಮತ್ತು ದೃಷ್ಟಿ ವಿಕಲಚೇತನರಿಗಾಗಿ ಪ್ರತ್ಯೇಕ ಗ್ರಂಥಾಲಯ ವಿಭಾಗವನ್ನು ಸ್ಥಾಪಿಸಲು ಕಾರ್ಯ ಯೋಜನೆಯನ್ನು ಸಿದ್ಧಪಡಿಸುವಂತೆ ರಾಜ್ಯ ಆಯುಕ್ತರು ಗ್ರಂಥಾಲಯ ಇಲಾಖೆ ನಿರ್ದೇಶಕರಿಗೆ ವಿನಂತಿಸಿದ್ದಾರೆ ಎಂದು ರಾಜ್ಯ ಸರ್ಕಾರ ತಿಳಿಸಿತು.

**ಶಿಫಾರಸು–4: ಎಲ್ಲಾ ಸಾರ್ವಜನಿಕ ಕಟ್ಟಡಗಳು, ಸಾರ್ವಜನಿಕ ಸಾರಿಗೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ತಡೆರಹಿತ ಪ್ರವೇಶವನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರದ ಉನ್ನತ ಆದ್ಯತೆಯನ್ನು ನೀಡಬೇಕು ಮತ್ತು ತನ್ನ ಪ್ರಯತ್ನಗಳನ್ನು ಹೆಚ್ಚಿಸಬೇಕು**

# ಅಧ್ಯಾಯ–IV

## ಶಿಕ್ಷಣ


## ಅಧ್ಯಾಯ–IV: ಶಿಕ್ಷಣ

*ಪರೀಕ್ಷಾ–ತನಿಖೆ ನಡೆಸಿದ ವಿಶೇಷ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಲ್ಲಿ ಕೇವಲ ಶೇಕಡಾ 59ರಷ್ಟು ಶಿಕ್ಷಕರು ಮಾತ್ರ ಭಾರತೀಯ ಪ್ರಾದೇಶಿಕ ಮಂಡಳಿಯಲ್ಲಿ (ಆರ್‌ಸಿಐ) ನೋಂದಾಯಿಸಲ್ಪಟ್ಟಿದ್ದರೆ, ಕೆಲಸ ಮಾಡುವ ಶೇಕಡಾ 40ರಷ್ಟು ಶಿಕ್ಷಕರು ಮಾತ್ರ ಅಗತ್ಯ ವಿದ್ಯಾರ್ಹತೆಗಳನ್ನು ಹೊಂದಿದ್ದರು. ರಾಜ್ಯದಲ್ಲಿ ಬುದ್ಧಿಮಾಂದ್ಯರಿಗೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರಗಳನ್ನು ಇನ್ನೂ ಸ್ಥಾಪನೆಯಾಗದಿರುವುದು, ಮೈಸೂರಿನಲ್ಲಿ ನಿರ್ಮಿಸಿರುವ ಶತಮಾನೋತ್ಸವ ಕಟ್ಟಡ ಬಳಕೆಯಾಗದೆ ಉಳಿದಿರುವುದು ಮತ್ತು ಸಮಗ್ರ ಮಾಹಿತಿಯ ಅನುಪಸ್ಥಿತಿಯು ವಿಕಲಚೇತನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶವನ್ನು ಸಾಧಿಸದಿರುವುದಕ್ಕೆ ಕಾರಣವಾಯಿತು.*

ಸಮ್ಮಿಳಿತ ಶಿಕ್ಷಣವನ್ನು ಉತ್ತೇಜಿಸಲು ಮತ್ತು ಸುಗಮಗೊಳಿಸಲು ಆರ್‌ಪಿಡಬ್ಲ್ಯುಡಿ ಕಾಯಿದೆಯ ಪರಿಚ್ಛೇದ 17 (ಬಿ) ಇಂದ (ಕೆ) ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಲು ಸಮುಚಿತ ಸರ್ಕಾರ ಮತ್ತು ಸ್ಥಳೀಯ ಅಧಿಕಾರಿಗಳಿಗೆ  ಕಡ್ಡಾಯಗೊಳಿಸುತ್ತದೆ. ಇದಕ್ಕೆ ಸಾಕಷ್ಟು ಸಂಖ್ಯೆಯ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು, ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಬೆಂಬಲಿಸಲು ಸಾಕಷ್ಟು ಸಂಖ್ಯೆಯ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸುವುದು, ಸೂಕ್ತವಾದ ವರ್ಧನೆ ಮತ್ತು ಪರ್ಯಾಯ ವಿಧಾನಗಳ ಬಳಕೆಯನ್ನು ಉತ್ತೇಜಿಸುವುದು, ವಿಕಲಾಂಗ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಪಠ್ಯಕ್ರಮ ಮತ್ತು ಪರೀಕ್ಷಾ ವ್ಯವಸ್ಥೆಯಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡುವುದು, ಕಲಿಕೆಯನ್ನು ಸುಧಾರಿಸಲು ಸಂಶೋಧನೆಯನ್ನು ಉತ್ತೇಜಿಸುವುದು ಇತ್ಯಾದಿಗಳ ಅಗತ್ಯವಿದೆ.

ಮಾನಸಿಕ ವಿಕಲಾಂಗರು, ಶ್ರವಣ, ದೃಷ್ಟಿ ಮತ್ತು ವಾಕ್ ದುರ್ಬಲತೆ, ಗಂಭೀರ ಭಾವನಾತ್ಮಕ ಅಡಚಣೆಗಳು, ಮೂಳೆ ದೌರ್ಬಲ್ಯಗಳು ಮತ್ತು ಕಲಿಕೆಯಲ್ಲಿ ಅಸಮರ್ಥತೆ ಸೇರಿದಂತೆ ವ್ಯಾಪಕ ಶ್ರೇಣಿಯ ಅಂಗವೈಕಲ್ಯ ಹೊಂದಿರುವವರನ್ನು "ವಿಶೇಷ ಶಿಕ್ಷಣ" ವಿದ್ಯಾರ್ಥಿಗಳು ಎಂದು ಕರೆಯಬಹುದು. ವಿಶೇಷ ಶಿಕ್ಷಣಕ್ಕೆ "ಎಲ್ಲರಿಗೂ ಸರಿಹೊಂದುವ ಒಂದು ವಿಧಾನ" ಪದ್ಧತಿಯು ಇಲ್ಲ. ಪ್ರತಿ ವಿದ್ಯಾರ್ಥಿಯ ಅಗತ್ಯತೆಗಳನ್ನು ಪೂರೈಸಲು ಅದನ್ನು ವಿನ್ಯಾಸಗೊಳಿಸಲಾಗಿದೆ. ಇಲಾಖೆಯ ನಿಯಂತ್ರಣದಲ್ಲಿ 178 ವಿಶೇಷ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ಶಾಲೆಗಳನ್ನು ಆಡಳಿತಾತ್ಮಕವಾಗಿ ಸರ್ಕಾರಿ, ಅನುದಾನಿತ ಮತ್ತು ಮಕ್ಕಳ ಕೇಂದ್ರಿತ ಶಾಲೆಗಳು ಎಂದೂ ಮತ್ತು **ನಕ್ಷೆ–4.1**ರಲ್ಲಿ ವಿವರಿಸಿದಂತೆ ವಿವಿಧ ರೀತಿಯ ವಿಕಲಾಂಗತೆಗಳಿಗೆ ಕ್ರಿಯಾತ್ಮಕವಾಗಿಯೂ ವರ್ಗೀಕರಿಸಲಾಗಿದೆ.

**ನಕ್ಷೆ–4.1: ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಾಲೆಗಳ ವಿವರಗಳು**




ಆಧಾರ : ಇಲಾಖೆಯು ಒದಗಿಸಿದ ಮಾಹಿತಿ

2017–18ರಿಂದ 2022–23ರ ಅವಧಿಯಲ್ಲಿ ಬಿಡುಗಡೆ ಮಾಡಲಾದ ₹492.88 ಕೋಟಿ ಮೊತ್ತಕ್ಕೆ ಪ್ರತಿಯಾಗಿ ಸರ್ಕಾರಿ ಶಾಲೆಗಳು, ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಮಕ್ಕಳ ಕೇಂದ್ರಿತ ಶಾಲೆಗಳು, ಅನುದಾನಿತ ಶಾಲೆಗಳು ಮತ್ತು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೇರಿದಂತೆ ₹457.94 ಕೋಟಿಯನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬುದ್ಧಿಮಾಂದ್ಯ, ದೃಷ್ಟಿಹೀನ ಮತ್ತು ಶ್ರವಣದೋಷವುಳ್ಳ ಶಾಲೆಗಳಂತಹ ವಿವಿಧ ರೀತಿಯ ವಿಶೇಷ ಶಾಲೆಗಳ ಕಾರ್ಯನಿರ್ವಹಣೆಯಲ್ಲಿ ಕಂಡುಬಂದಿರುವ ನ್ಯೂನತೆಗಳ (ಪರೀಕ್ಷಾ–ತನಿಖೆ ನಡೆಸಿದ 90 ಶಾಲೆಗಳು) ಪ್ರಮುಖ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 4.1 ಬುದ್ಧಿಮಾಂದ್ಯ ಮಕ್ಕಳಿಗಾಗಿ ಶಾಲೆಗಳು

ಬುದ್ಧಿಮಾಂದ್ಯತೆಯು (ಹಿಂದೆ ಮಾನಸಿಕ ಖಿನ್ನತೆ ಎಂದು ಕರೆಯಲಾಗುತ್ತಿತ್ತು), ಬೌದ್ಧಿಕ ಕಾರ್ಯನಿರ್ವಹಣೆಯಲ್ಲಿ (ತಾರ್ಕಿಕತೆ, ಕಲಿಕೆ, ಸಮಸ್ಯೆ ಪರಿಹಾರ) ಮತ್ತು ಹೊಂದಾಣಿಕೆಯ ನಡವಳಿಕೆಯಲ್ಲಿ ಗಮನಾರ್ಹ ಮಿತಿಯ ಸ್ಥಿತಿಯಾಗಿದೆ. ಇದು ಪ್ರತಿದಿನದ ಸಾಮಾಜಿಕ ಮತ್ತು ಪ್ರಾಯೋಗಿಕ ಕೌಶಲ್ಯಗಳನ್ನು ಒಳಗೊಂಡಿದೆ. ಸರಾಸರಿಗಿಂತ ಕಡಿಮೆ ಗುಣಲಕ್ಷಣಗಳನ್ನು ಅಥವಾ ಮಾನಸಿಕ ಸಾಮರ್ಥ್ಯ ಮತ್ತು ದಿನನಿತ್ಯದ ಜೀವನಕ್ಕೆ ಅಗತ್ಯವಾದ ಕೌಶಲ್ಯಗಳ ಕೊರತೆ ಹೊಂದಿದೆ.

ಕರ್ನಾಟಕದಲ್ಲಿ ಬುದ್ಧಿಮಾಂದ್ಯ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ನಿರ್ದಿಷ್ಟವಾಗಿ ವಿನ್ಯಾಸಗೊಳಿಸಲಾದ 93 ಶಾಲೆಗಳಿವೆ. ಈ ಶಾಲೆಗಳು ವಿವಿಧ ಅಂಗವೈಕಲ್ಯ ಹೊಂದಿರುವ ಮಕ್ಕಳು ಮತ್ತು ಯುವಕರಿಗೆ ಶಿಕ್ಷಣ, ಚಿಕಿತ್ಸೆ ಮತ್ತು ವೃತ್ತಿಪರ ತರಬೇತಿಯನ್ನು ನೀಡುವುದರ ಜೊತೆಗೆ ವೃತ್ತಿಪರ ಚಿಕಿತ್ಸೆ, ವಾಕ್ ಚಿಕಿತ್ಸೆ ಮತ್ತು ಫಿಸಿಯೋಥೆರಪಿ ಸೇರಿದಂತೆ ವಿದ್ಯಾರ್ಥಿಗಳು ತಮ್ಮ ದೈಹಿಕ ಮತ್ತು ಬೌದ್ಧಿಕ ಸವಾಲುಗಳನ್ನು ಎದುರಿಸಲು ಸಹಾಯ ಮಾಡಲು ವಿಶೇಷ ಸೇವೆಗಳನ್ನು ನೀಡುತ್ತವೆ.

ಪರೀಕ್ಷಾ–ತನಿಖೆ ನಡೆಸಿದ 46 ಶಾಲೆಗಳಲ್ಲಿ, ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಏಕರೂಪದ ಪಠ್ಯಕ್ರಮವನ್ನು ಅನುಸರಿಸದಿರುವುದು, ಅನುದಾನಿತ ಶಾಲೆಗಳಲ್ಲಿ ಥೆರಪಿಸ್ಟ್‌ಗಳ ಕೊರತೆ ಮುಂತಾದವುಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### *4.1.1 ತೀವ್ರ ಬುದ್ಧಿಮಾಂದ್ಯತೆಯುಳ್ಳ ವಿದ್ಯಾರ್ಥಿಗಳ ಕಾರ್ಯಕ್ರಮಕ್ಕಾಗಿ ಕ್ರಿಯಾತ್ಮಕ ಮೌಲ್ಯಮಾಪನ ಪರಿಶೀಲನಾಪಟ್ಟಿಯನ್ನು ಅಳವಡಿಸಿಕೊಳ್ಳದಿರುವುದು*

ಬುದ್ಧಿಮಾಂದ್ಯತೆಯು ಸೌಮ್ಯ ಬುದ್ಧಿಮಾಂದ್ಯತೆಯಿಂದ ತೀವ್ರವಾದ ಬುದ್ಧಿಮಾಂದ್ಯತೆಯವರೆಗೆ ಇರುತ್ತದೆ (ಬುದ್ಧಿವಂತ ಪ್ರಮಾಣಕ ಮಟ್ಟವನ್ನು ಆಧರಿಸಿ). ಹಿಂದೆ ರಾಷ್ಟ್ರೀಯ ಮಾನಸಿಕ ವಿಕಲಾಂಗ ಸಂಸ್ಥೆ (ಎನ್‌ಐಎಮ್‌ಹೆಚ್) ಎಂದು ಕರೆಯಲಾಗುತ್ತಿದ್ದ ಸಿಕಂದರಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಎಂಪವರ್‌ಮೆಂಟ್ ಆಫ್ ಪರ್ಸನ್ಸ್ ವಿತ್ ಇಂಟೆಲೆಕ್ಚುಯಲ್ ಡಿಸ್‌ಎಬಿಲಿಟೀಸ್ (ಎನ್‌ಐಇಪಿಐಡಿ) ವಿವಿಧ ಗುಂಪುಗಳಿಗೆ ತೀವ್ರವಾದ ಬುದ್ಧಿಮಾಂದ್ಯತೆ ಹೊಂದಿರುವ ವಿದ್ಯಾರ್ಥಿಗಳ ಕಾರ್ಯಕ್ರಮಕ್ಕಾಗಿ (ಎಫ್‌ಎಸಿಪಿ) ಕ್ರಿಯಾತ್ಮಕ ಮೌಲ್ಯಮಾಪನ ಪರಿಶೀಲನಾ ಪಟ್ಟಿಯನ್ನು ಅಭಿವೃದ್ಧಿಪಡಿಸಿತು. ಈ ಗುಂಪುಗಳನ್ನು ಸಾಮರ್ಥ್ಯ ಮತ್ತು ಕಾಲಾನುಕ್ರಮದ ವಯಸ್ಸಿನ ಆಧಾರದ ಮೇಲೆ ಪ್ರಾಥಮಿಕ–ಪೂರ್ವ, ಪ್ರಾಥಮಿಕ, ಮಾಧ್ಯಮಿಕ, ವೃತ್ತಿಪರ–ಪೂರ್ವ ಮತ್ತು ವೃತ್ತಿಪರ ಎಂದು ವರ್ಗೀಕರಿಸಲಾಗಿದೆ. ಈ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಶಿಕ್ಷಕರು (i) ಪ್ರವೇಶ ಹಂತದಲ್ಲಿ ಮತ್ತು ನಿಯತಕಾಲಿಕವಾಗಿ ಪ್ರತಿ ತ್ರೈಮಾಸಿಕದಲ್ಲಿ ಮಾಹಿತಿಯನ್ನು ನಮೂದಿಸಬೇಕು; (ii) ಪ್ರತಿ ಮಗುವಿಗೆ ಪ್ರತಿ ಅವಧಿಗೆ ಬೋಧನಾ ಯೋಜನಾ ಚಟುವಟಿಕೆಯನ್ನು ತಯಾರಿಸಬೇಕು ಮತ್ತು (iii) ಪೋಷಕರಿಗೆ ನಿಯತಕಾಲಿಕವಾಗಿ ಪ್ರಗತಿ ವರದಿಗಳನ್ನು ಕಳುಹಿಸಬೇಕು. 2010ರಲ್ಲಿ ರಾಜ್ಯ ಸರ್ಕಾರವು ಎಲ್ಲಾ ಮಕ್ಕಳ ಕೇಂದ್ರಿತ ಶಾಲೆಗಳಲ್ಲಿ ಆರ್‌ಸಿಐ/ಎಫ್‌ಎಸಿಪಿ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಮತ್ತು ಅನುಸರಿಸಲು ಆದೇಶಗಳನ್ನು ಹೊರಡಿಸಿತು.

90 ಬುದ್ಧಿಮಾಂದ್ಯ ಮಕ್ಕಳ ಶಾಲೆಗಳಲ್ಲಿ 46 ಶಾಲೆಗಳಲ್ಲಿ (10 ಅನುದಾನಿತ ಮತ್ತು 36 ಮಕ್ಕಳ ಕೇಂದ್ರಿತ ಶಾಲೆಗಳು) ನಡೆಸಿದ ಪರೀಕ್ಷಾ-ತನಿಖೆಯು ಈ ಕೆಳಗಿನ ಅಂಶಗಳನ್ನು ತಿಳಿಯಪಡಿಸಿತು:

- ರಾಜ್ಯ ಸರ್ಕಾರವು ಮಕ್ಕಳ ಕೇಂದ್ರಿತ ಶಾಲೆಗಳಿಗೆ ಆರ್‌ಸಿಐ/ಎಫ್‌ಎಸಿಪಿ ಪಠ್ಯಕ್ರಮವನ್ನು ಅನುಸರಿಸುವಂತೆ ನಿಗದಿಪಡಿಸಿದ್ದರೂ ಸಹ, ಅನುದಾನಿತ ಶಾಲೆಗಳಿಗೆ ಇದೇ ರೀತಿಯ ಸೂಚನೆಗಳನ್ನು ನೀಡಿರಲಿಲ್ಲ. ಆದ್ದರಿಂದ ಅನುದಾನಿತ ಮತ್ತು ಮಕ್ಕಳ ಕೇಂದ್ರಿತ ಶಾಲೆಗಳು ಅನುಸರಿಸುತ್ತಿರುವ ಪಠ್ಯಕ್ರಮದಲ್ಲಿ ಏಕರೂಪತೆ ಇರಲಿಲ್ಲ. ಆದಾಗ್ಯೂ, ಐದು ಅನುದಾನಿತ ಶಾಲೆಗಳು ಎಫ್‌ಎಸಿಪಿ ಪಠ್ಯಕ್ರಮವನ್ನು ಅಳವಡಿಸಿಕೊಂಡಿದ್ದವು ಮತ್ತು 36 ಮಕ್ಕಳ ಕೇಂದ್ರಿತ ಶಾಲೆಗಳಲ್ಲಿ 24 ಶಾಲೆಗಳು ಎಫ್‌ಎಸಿಪಿ ಪಠ್ಯಕ್ರಮವನ್ನು ಅನುಸರಿಸುತ್ತಿದ್ದವು.
- ಎಫ್‌ಎಸಿಪಿ ಪಠ್ಯಕ್ರಮವನ್ನು ಅನುಸರಿಸುತ್ತಿರುವ ಶಾಲೆಗಳಲ್ಲಿ, ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಮಾಡುತ್ತಿರಲಿಲ್ಲ ಮತ್ತು ದಾಖಲಿಸುತ್ತಿರಲಿಲ್ಲ. ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಅಂಗವೈಕಲ್ಯದ ಮಟ್ಟವನ್ನು ಪ್ರವೇಶದ ಸಮಯದಲ್ಲಿ ದಾಖಲಿಸುತ್ತಿರಲಿಲ್ಲ. ಇದು ಮಕ್ಕಳಲ್ಲಿನ ಸುಧಾರಣೆಗಳನ್ನು ಮೌಲ್ಯಮಾಪನ ಮಾಡಲು ಬೋಧಕ ಸಿಬ್ಬಂದಿಗೆ ಅಡ್ಡಿಯಾಗುತ್ತದೆ. ದಾಖಲೆಗಳನ್ನು ನಿರ್ವಹಿಸಲಾಗಿದ್ದರೂ, ಇಂಕ್‌ನ ಬದಲಿಗೆ ತಿದ್ದುಪಡಿ ಮಾಡಲು ಅವಕಾಶವನ್ನು ಒದಗಿಸುವ ಪೆನ್ಸಿಲ್‌ನಲ್ಲಿ ನಮೂದುಗಳನ್ನು ಮಾಡಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಪ್ರಗತಿ ವರದಿಗಳಲ್ಲಿ ಪೋಷಕರ ಸಹಿ ಪಡೆಯದಿರುವುದನ್ನು ಸಹ ಗಮನಿಸಲಾಯಿತು.

ಮಕ್ಕಳ ಕೇಂದ್ರಿತ ಶಾಲೆಯ ಮಾರ್ಗಸೂಚಿಗಳು ಅನುದಾನಿತ ಶಾಲೆಯ ಮಾರ್ಗಸೂಚಿಯಿಂದ ಭಿನ್ನವಾಗಿವೆ ಎಂದು ಸರ್ಕಾರವು ತಿಳಿಸಿತು. ಬುದ್ಧಿಮಾಂದ್ಯ ಮಕ್ಕಳಿಗಾಗಿನ ಮಕ್ಕಳ ಕೇಂದ್ರಿತ ಶಾಲೆಗಳು ಆರ್‌ಸಿಐ ಅಥವಾ ಎನ್‌ಐಎಮ್‌ಹೆಚ್ ಅನುಮೋದಿತ ಪಠ್ಯಕ್ರಮವನ್ನು ಅನುಸರಿಸಬೇಕು ಮತ್ತು ಸಹಾಯಾನುದಾನ ಸಂಹಿತೆ ಅಡಿಯಲ್ಲಿನ ಬುದ್ಧಮಾಂದ್ಯ ಮಕ್ಕಳ ಶಾಲೆಗಳಿಗೆ ಪಠ್ಯಕ್ರಮದಲ್ಲಿ ಯಾವುದೇ ನಿರ್ಬಂಧವಿಲ್ಲ. ಎಫ್‌ಎಸಿಪಿ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳಿಗೆ ವಿಶೇಷ ವಿದ್ಯಾರ್ಥಿಗಳ ಮೌಲ್ಯಮಾಪನ ನಡೆಸುವಂತೆ ಸೂಚಿಸಲಾಗಿದೆ ಎಂದು ತಿಳಿಸಲಾಯಿತು.

ಆದರೆ, ಮಕ್ಕಳ ಕೇಂದ್ರಿತ ಶಾಲೆಯಾಗಲೀ ಅಥವಾ ಅನುದಾನಿತ ಶಾಲೆಯಾಗಲೀ, ಪಠ್ಯಕ್ರಮವು ಏಕರೂಪವಾಗಿರುತ್ತದೆಯೇ ಎಂಬ ಅಂಶವನ್ನು ಇಲಾಖೆಯು ನಿರ್ಲಕ್ಷಿಸಿತು ಮತ್ತು ಅನುದಾನಿತ ಶಾಲೆಗಳನ್ನು 1982ರಲ್ಲಿ ಸ್ಥಾಪಿಸಲಾಯಿತು ಹಾಗೂ ಆಗ ಎಫ್‌ಎಸಿಪಿ ಪಠ್ಯಕ್ರಮವನ್ನು ರಚಿಸಿರಲಿಲ್ಲವಾಗಿ ಅನುದಾನಿತ ಶಾಲೆಗಳು ವಿಭಿನ್ನ ಪಠ್ಯಕ್ರಮವನ್ನು ಅನುಸರಿಸುತ್ತಿದ್ದವು. ಆದಾಗ್ಯೂ, ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಬುದ್ಧಿಮಾಂದ್ಯ ವಿದ್ಯಾರ್ಥಿಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು ಮತ್ತು ಏಕರೂಪದ ಪಠ್ಯಕ್ರಮವನ್ನು ಅನುಸರಿಸುವುದು ಇಲಾಖೆಯ ಜವಾಬ್ದಾರಿಯಾಗಿತ್ತು. ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಎಫ್‌ಎಸಿಪಿ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಭಾರತ ಸರ್ಕಾರವು 2003ರಲ್ಲಿ ಸಲಹೆ ನೀಡಿತ್ತು.

### *4.1.2 ಖಾಲಿ ಇರುವ ಆಕ್ಯುಪೇಷನಲ್ ಥೆರಪಿಸ್ಟ್ ಮತ್ತು ಫಿಸಿಯೋಥೆರಪಿಸ್ಟ್‌ಗಳ ಹುದ್ದೆಗಳು*

ಸಹಾಯಾನುದಾನ ಸಂಹಿತೆಯ ನಿಯಮಗಳು ಸ್ವಯಂ ಆರೈಕೆ, ಶಾಲಾ ಕೆಲಸ ಮತ್ತು ಆಟ ಇತ್ಯಾದಿ ಕ್ಷೇತ್ರಗಳಲ್ಲಿ ದೈನಂದಿನ ಜೀವನಕ್ಕೆ ಕ್ರಿಯಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು, ನಿರ್ವಹಿಸಲು ಮತ್ತು ಮಕ್ಕಳಿಗೆ ಸಹಾಯ ಮಾಡಲು ಪ್ರತಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯಲ್ಲಿ ಒಬ್ಬ ಆಕ್ಯುಪೇಷನಲ್ ಥೆರಪಿಸ್ಟ್ ಮತ್ತು ಒಬ್ಬ ಫಿಸಿಯೋಥೆರಪಿಸ್ಟ್‌ನ ನೇಮಕಾತಿಯನ್ನು ನಿಗದಿಪಡಿಸುತ್ತವೆ, ಪರೀಕ್ಷಾ-ತನಿಖೆ ನಡೆಸಿದ ಹತ್ತು ಅನುದಾನಿತ ಶಾಲೆಗಳಲ್ಲಿ ಒಂದು ಶಾಲೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಶಾಲೆಗಳಲ್ಲಿ ಈ ಹುದ್ದೆಗಳು ಖಾಲಿಯಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ವಿದ್ಯಾರ್ಥಿಗಳು ತಜ್ಞ ಶಿಕ್ಷಕರ ಸೇವೆಯಿಂದ ವಂಚಿತರಾಗುವಲ್ಲಿ ಪರಿಣಮಿಸಿತು. .

ಫಿಸಿಯೋಥೆರಪಿಸ್ಟ್ ಲಭ್ಯವಿರುವ ಅಂಗವಿಕಲ ಮಕ್ಕಳ ಕೇಂದ್ರಿತ (ಸಿಪಿ) ಶಾಲೆಗಳಲ್ಲಿ ಟ್ರ್ಯಾಂಪೋಲೈನ್, ಬ್ಯಾಲೆನ್ಸ್ ಬಾಲ್, ಸಿಪಿ ಚೇರ್, ಸೈಕಲ್/ವಾಕರ್, ಫಿಸಿಯೋಥೆರಪಿ ಮೇಜುಗಳು ಮತ್ತು ಫಿಂಗರ್ ಲ್ಯಾಡರ್‌ಗಳಂತಹ ಫಿಸಿಯೋಥೆರಪಿ ಉಪಕರಣಗಳನ್ನು ಬಳಸುತ್ತಿರಲಿಲ್ಲ. ನಿಯತಕಾಲಿಕವಾಗಿ ಅನುದಾನ ಬಿಡುಗಡೆ ಮಾಡುವ ಮೊದಲು ಈ ಶಾಲೆಗಳಲ್ಲಿ ಸೌಲಭ್ಯಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ವಿಫಲವಾಗಿತ್ತು.

ಬುದ್ಧಿಮಾಂದ್ಯ ಮಕ್ಕಳ ಶಾಲೆಗಳಲ್ಲಿ ಆಕ್ಯುಪೇಷನಲ್ ಥೆರಪಿಸ್ಟ್ ಮತ್ತು ಫಿಸಿಯೋಥೆರಪಿಸ್ಟ್ ಲಭ್ಯವಿಲ್ಲದಿರುವ ಬಗ್ಗೆ ವರದಿಯನ್ನು ಸಲ್ಲಿಸಲು ಸಂಬಂಧಪಟ್ಟ ಜಿಲ್ಲೆಗಳ ಡಿಡಿಡಬ್ಲ್ಯೂಒಗಳಿಗೆ ನಿರ್ದೇಶಿಸಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಏಪ್ರಿಲ್ 2023).

### *4.1.3 ಮಹಿಳಾ ಶಿಕ್ಷಕರ ಅನುಪಸ್ಥಿತಿ*

ಬೀದರ್‌ನ ಬುದ್ಧಿಮಾಂದ್ಯ ಮಕ್ಕಳ ಮಹಾಪ್ರಜಾಪತಿ ದಿನದ ವಿಶೇಷ ಶಾಲೆಯ ದಾಖಲೆಗಳ ಪರಿಶೀಲನೆಯು ವಿದ್ಯಾರ್ಥಿಗಳಲ್ಲಿ ಮೂರನೇ ಒಂದು ಭಾಗದಷ್ಟು ವಿದ್ಯಾರ್ಥಿನಿಯರಿದ್ದರು ಮತ್ತು ಸುಮಾರು 18 ವರ್ಷ ವಯಸ್ಸಿನವರಾಗಿದ್ದರು ಎಂಬುದನ್ನು ತಿಳಿಯಪಡಿಸಿತು. ಆದರೆ, ಈ ವಿದ್ಯಾರ್ಥಿನಿಯರನ್ನು ನಿಭಾಯಿಸಲು ಮಹಿಳಾ ಶಿಕ್ಷಕರೇ ಇರಲಿಲ್ಲ. ಇದಕ್ಕೆ ಪ್ರತಿಕ್ರಿಯೆಯಾಗಿ, ಅಯಾಗಳನ್ನು ನೇಮಿಸಲಾಗಿದೆ ಮತ್ತು ಮಹಿಳಾ ಶಿಕ್ಷಕರನ್ನು ನೇಮಿಸಲು ಪ್ರಯತ್ನಿಸಲಾಗುವುದು ಎಂದು ಸಂಸ್ಥೆಯು ತಿಳಿಸಿತು. ಹೀಗೆ, ವಿದ್ಯಾರ್ಥಿನಿಯರ ಸಂಖ್ಯೆ ಸಾಕಷ್ಟಿರುವ ಬುದ್ಧಿಮಾಂದ್ಯ ಅಂಗವಿಕಲ ಶಾಲೆಗಳಲ್ಲಿ ಮಹಿಳಾ ಶಿಕ್ಷಕರ ಅನುಪಸ್ಥಿತಿಯು ವಿದ್ಯಾರ್ಥಿನಿಯರಿಗೆ ತೀವ್ರ ಅನಾನುಕೂಲತೆಯನ್ನು ಉಂಟುಮಾಡುತ್ತದೆ.

ಮಹಿಳಾ ವಿಶೇಷ ಶಿಕ್ಷಕರನ್ನು ನೇಮಿಸಿ ವರದಿ ನೀಡುವಂತೆ ಸದರಿ ಶಾಲೆಯ ಆಡಳಿತ ಮಂಡಳಿಗೆ ಸೂಚಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು.

**ಶಿಫಾರಸು–5: ರಾಜ್ಯ ಸರ್ಕಾರವು ಎಲ್ಲಾ ಮಾನಸಿಕ ಅಂಗವಿಕಲ ಶಾಲೆಗಳು ಏಕರೂಪದ ಪಠ್ಯಕ್ರಮವನ್ನು (ಎಫ್‌ಎಸಿಪಿ) ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬೇಕು, ಆದ್ಯತೆಯ ಮೇಲೆ ಔದ್ಯೋಗಿಕ/ ಫಿಸಿಯೋಥೆರಪಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು ಎಲ್ಲಾ ಶಾಲೆಗಳಲ್ಲಿ ಪ್ರವೇಶದ ಮೂಲಸೌಕರ್ಯವನ್ನು ಒದಗಿಸಬೇಕು.**

## 4.2 ದೃಷ್ಟಿಹೀನರಿಗಾಗಿ ಶಾಲೆಗಳು

ಆರ್‌ಪಿಡಬ್ಲ್ಯುಡಿ ಅಧಿನಿಯಮವು ದೃಷ್ಟಿಹೀನತೆಯನ್ನು ವ್ಯಕ್ತಿಗೆ ಸಂಪೂರ್ಣ ದೃಷ್ಟಿಯ ಕೊರತೆ ಇರುವುದು ಅಥವಾ ಕಡಿಮೆ ದೃಷ್ಟಿ ಹೊಂದಿರುವ ಸ್ಥಿತಿ ಎಂದು ವ್ಯಾಖ್ಯಾನಿಸುತ್ತದೆ. ದೃಷ್ಟಿಹೀನರ ಶಿಕ್ಷಣವು ಆ ಮಕ್ಕಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ ಮತ್ತು ಜೀವನ ಹೊಂದಾಣಿಕೆ ಮತ್ತು ಸ್ವಆರೈಕೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಅವರಿಗೆ ಸಹಾಯ ಮಾಡಲು, ಸಮಾಜದಲ್ಲಿ ಉತ್ತಮವಾಗಿ ಹೊಂದಿಕೊಳ್ಳಲು ಮತ್ತು ಸ್ವತಂತ್ರ ವ್ಯಕ್ತಿಗಳಾಗಲು ಸಹಾಯ ಮಾಡುತ್ತದೆ. ಪ್ರಾಥಮಿಕ ಹಂತದಲ್ಲಿ ದೃಷ್ಟಿಹೀನ ಮಕ್ಕಳಿಗೆ ತಜ್ಞ ಶಿಕ್ಷಕರ ನೇರ ನೆರವು ಅಗತ್ಯವಿದ್ದರೆ, ಉನ್ನತ ಹಂತದಲ್ಲಿರುವ ಮಕ್ಕಳಿಗೆ ನಿಯಮಿತ ತರಗತಿಯಲ್ಲಿ ಕಲಿಕೆಗೆ ಅಗತ್ಯವಾದ ಸಾಮಗ್ರಿಗಳನ್ನು ನೀಡಿದರೆ ನಿಯಮಿತ ತರಗತಿಯ ಶಿಕ್ಷಕರ ಮೇಲೆ ಹೆಚ್ಚು ಅವಲಂಬಿತರಾಗಿರುತ್ತಾರೆ.

ಶೈಕ್ಷಣಿಕ ವಿಷಯಗಳ ಹೊರತಾಗಿ, ಬ್ರೈಲ್ ಓದುವ ವಿಧಾನಗಳು, ಸ್ಲೇಟ್ ಮತ್ತು ಆಡಿಯೊ ಉಪಕರಣಗಳ ಬಳಕೆ, ದೃಷ್ಟಿಗೋಚರ ಗ್ರಹಿಕೆ ಚಟುವಟಿಕೆಗಳ ಅಭಿವೃದ್ಧಿ, ದೃಷ್ಟಿಕೋನ ಮತ್ತು

ಚಲನಶೀಲತೆ ಮುಂತಾದ ಪರಿಹಾರ ಕೌಶಲ್ಯಗಳಲ್ಲಿ ಅಂಧ ಮಕ್ಕಳಿಗೆ ಉತ್ತಮ ತರಬೇತಿಯ ಅಗತ್ಯವಿದೆ.

ದೃಷ್ಟಿಹೀನ ವಿದ್ಯಾರ್ಥಿಗಳಿಗೆ, 31 ಶಾಲೆಗಳಿದ್ದು, ಅವುಗಳು ಆಹಾರ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತವೆ. ರಸ್ತೆಗಳನ್ನು ದಾಟುವುದು, ಬಸ್‌ಗಳನ್ನು ಹತ್ತುವುದು ಮತ್ತು ಜನನಿಬಿಡ ಬೀದಿಗಳಲ್ಲಿ ನಡೆಯುವುದು ಮುಂತಾದ ಚಲನಶೀಲತೆಯ ತಂತ್ರಗಳ ತರಬೇತಿಯನ್ನು ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ, ಇಂಗ್ಲಿಷ್ ಸಂವಹನ, ನಾಯಕತ್ವ ಗುಣಗಳು, ಪ್ರೇರಣೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವ ಕೋರ್ಸ್‌ಗಳನ್ನು ನೀಡಲಾಗುತ್ತದೆ.

ಪರೀಕ್ಷಾ–ತನಿಖೆ ನಡೆಸಿದ 20 ಶಾಲೆಗಳಲ್ಲಿ, ಕೆಳಗೆ ಚರ್ಚಿಸಿದಂತೆ ಲೆಕ್ಕಪರಿಶೋಧನೆಯು ವಿವಿಧ ನ್ಯೂನತೆಗಳನ್ನು ಗಮನಿಸಿತು.

### *4.2.1 ಓರಿಯಂಟೇಶನ್ ಮತ್ತು ಮೊಬಿಲಿಟಿ ತರಬೇತಿ ಕೇಂದ್ರ, ಬೆಂಗಳೂರು*

ಓರಿಯಂಟೇಶನ್ ಮತ್ತು ಮೊಬಿಲಿಟಿ ಪ್ರೋಗ್ರಾಂ (ಒಎಮ್‌ಪಿ) ಎಂದರೆ ವಿಶೇಷ ಸೂಚನೆಗಳನ್ನು ಒಳಗೊಂಡಿರುವ ತರಬೇತಿ ಕಾರ್ಯಕ್ರಮ. ಇದು ಕುರುಡು ಮತ್ತು ದೃಷ್ಟಿಹೀನ ವ್ಯಕ್ತಿಗಳಿಗೆ ರಸ್ತೆಗಳನ್ನು ದಾಟಲು ಮತ್ತು ಬೆತ್ತಗಳನ್ನು ಬಳಸಿ ಸಾರ್ವಜನಿಕ ಸಾರಿಗೆಯನ್ನು ಪ್ರವೇಶಿಸಲು ಸುರಕ್ಷಿತ ತಂತ್ರಗಳನ್ನು ಕಲಿಯಲು ಅನುವು ಮಾಡಿಕೊಡುತ್ತದೆ. ರಾಷ್ಟ್ರೀಯ ಅಂಧರ ಸಂಘ (ಎನ್‌ಎಬಿ), ಕರ್ನಾಟಕ ಶಾಖೆ, ಬೆಂಗಳೂರಿನಲ್ಲಿರುವ ಓರಿಯಂಟೇಶನ್ ಮತ್ತು ಮೊಬಿಲಿಟಿ ತರಬೇತಿ ಕೇಂದ್ರದಲ್ಲಿ ತರಬೇತಿ ನೀಡಲು ಹತ್ತು ಓರಿಯಂಟೇಶನ್ ಮತ್ತು ಮೊಬಿಲಿಟಿ ಅಧಿಕಾರಿಗಳನ್ನು ನೇಮಿಸಲು ರಾಜ್ಯ ಸರ್ಕಾರವು (ಜನವರಿ 1984) ಅನುಮತಿ ನೀಡಿತ್ತು. ಪ್ರತಿಯೊಬ್ಬ ಅಧಿಕಾರಿಯು ನಾಲ್ಕು ಅಂಧರಿಗೆ ಒಂದು ಬ್ಯಾಚ್‌ನಲ್ಲಿ ಆರು ವಾರಗಳ ಕಾಲ ತರಬೇತಿ ನೀಡಬಹುದು ಮತ್ತು ಒಬ್ಬ ಅಧಿಕಾರಿಯು 28 ಅಂಧರಿಗೆ ಒಂದು ವರ್ಷದಲ್ಲಿ ಏಳು ಬ್ಯಾಚ್‌ಗಳಲ್ಲಿ ತರಬೇತಿ ನೀಡಬಹುದು.

ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯ ಪ್ರಕಾರ, ಕೇಂದ್ರವು 2016–17ರಿಂದ 2021–22ರ ಅವಧಿಯಲ್ಲಿ 37 ಕೋರ್ಸ್‌ಗಳನ್ನು ನಡೆಸಿತ್ತು ಮತ್ತು 556 ಜನರಿಗೆ ತರಬೇತಿ ನೀಡಿತ್ತು. 2019–20ರ ಅವಧಿಯಲ್ಲಿ ಪ್ರತಿ ಬ್ಯಾಚ್‌ನಲ್ಲಿ 50, 28 ಮತ್ತು 22 ಜನರಿಗೆ ತರಬೇತಿ ನೀಡಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಪ್ರತಿ ಶಿಕ್ಷಕರು 17, 9 ಮತ್ತು 7 ವ್ಯಕ್ತಿಗಳಿಗೆ ತರಬೇತಿ ನೀಡಿದಂತಾಯಿತು.

2019–20ರಿಂದ ಕೇಂದ್ರವು ತನ್ನ ಕೋರ್ಸ್‌ಗಳನ್ನು ನಡೆಸಲು ಕೇವಲ ಇಬ್ಬರು ಖಾಯಂ ಸಿಬ್ಬಂದಿ (ಒಬ್ಬರು ಜುಲೈ 2022ರಲ್ಲಿ ನಿವೃತ್ತರಾದರು ಮತ್ತು ಇನ್ನೊಬ್ಬರು ಫೆಬ್ರವರಿ 2025ರಲ್ಲಿ ನಿವೃತ್ತರಾಗುತ್ತಾರೆ) ಮತ್ತು ಓರ್ವ ತಾತ್ಕಾಲಿಕ ಬೋಧಕ ಸಿಬ್ಬಂದಿಯನ್ನು ಹೊಂದಿತ್ತು.

ಕೋರ್ಸ್‌ನ ಅವಧಿಯ ಕಡಿತ ಮತ್ತು ಪ್ರತಿ ಶಿಕ್ಷಕರಿಗೆ ವ್ಯಕ್ತಿಗಳ ಸಂಖ್ಯೆಯ ಹೆಚ್ಚಳವು ಅಂಧ ವ್ಯಕ್ತಿಗಳಿಗೆ ನೀಡುವ ತರಬೇತಿಯ ಪರಿಣಾಮಕಾರಿತ್ವವನ್ನು ಪ್ರತಿಬಿಂಬಿಸುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳದ ಹೊರತು ಸಂಸ್ಥೆಯ ಚಟುವಟಿಕೆಗಳು ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

1982 ಜಿಐಎ ಸಂಹಿತೆಯ ಪ್ರಕಾರ ಓರಿಯಂಟೇಶನ್ ಮತ್ತು ಮೊಬಿಲಿಟಿ ಬೋಧಕರನ್ನು ನೇಮಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದ ಡಿಡಿಡಬ್ಲ್ಯುಒಗೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಫೆಬ್ರವರಿ 2023).

### *4.2.2 ಮೊಬಿಲಿಟಿ ಬೋಧಕರ ಖಾಲಿ ಹುದ್ದೆಗಳು*

ಶಾಲಾಪೂರ್ವ ಮತ್ತು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ತಮ್ಮ ಶಾಲಾ ಕಟ್ಟಡ, ಆಟದ ಮೈದಾನ ಮತ್ತು ನೆರೆಹೊರೆಯ ಸುತ್ತಲೂ ಹೇಗೆ ಪ್ರಯಾಣಿಸಬೇಕು ಮತ್ತು ಸ್ಥಳಾಕೃತಿ (ಇಳಿಜಾರು, ಗುಡ್ಡಗಾಡು) ಮತ್ತು ಮೇಲ್ಮೈ (ಕಾಂಕ್ರೀಟ್, ಉಬ್ಬುತಗ್ಗು), ಸ್ಥಾನಿಕ ಪರಿಕಲ್ಪನೆಗಳು (ಮುಂದೆ, ಹಿಂದೆ) ಸೇರಿದಂತೆ ಹೆಚ್ಚು ಸಂಕೀರ್ಣವಾದ ಪರಿಸರ ಪರಿಕಲ್ಪನೆಗಳ ಬಗ್ಗೆ ಸೂಚನೆ ನೀಡಬೇಕು.

ಎಲ್ಲಾ ನಾಲ್ಕು ಸರ್ಕಾರಿ ಮತ್ತು ಏಳು ಅನುದಾನಿತ ಶಾಲೆಗಳಲ್ಲಿ ಆರು ಶಾಲೆಗಳು ಅಂಧ ಮಕ್ಕಳಿಗೆ ಕಲಿಸಲು ಮಂಜೂರಾಗಿದ್ದ ಮೊಬಿಲಿಟಿ ಬೋಧಕರ ಹುದ್ದೆಯನ್ನು ಹೊಂದಿದ್ದರೂ, ಈ ಹುದ್ದೆಗಳು ಪ್ರಾರಂಭದಿಂದಲೂ ಖಾಲಿ ಉಳಿದಿದ್ದವು.

ರಾಜ್ಯದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ, ಈ ಹುದ್ದೆಗಳನ್ನು ಇನ್ನೂ ಭರ್ತಿ ಮಾಡಬೇಕಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ಆದಾಗ್ಯೂ, ಕರ್ನಾಟಕದ ವಿಶೇಷ ಶಾಲೆಗಳ ಸೇವಾ ಶಿಕ್ಷಕರಿಗೆ ಪುನಶ್ಚೇತನ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ನವದೆಹಲಿಯ ಆರ್‌ಸಿಐಯನ್ನು ಇಲಾಖೆಯು ವಿನಂತಿಸಿತ್ತು (ಫೆಬ್ರವರಿ 2020). ಆದರೆ, ಪುನಶ್ಚೇತನ ಮತ್ತು ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆರ್‌ಸಿಐ ನವದೆಹಲಿಯೊಂದಿಗೆ ನಂತರ ಹೆಚ್ಚಿನ ಅನುಸರಣಾ ಕ್ರಮವನ್ನು ತೆಗೆದುಕೊಳ್ಳದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### *4.2.3 ಅಂಧ ವಿದ್ಯಾರ್ಥಿಗಳಿಗೆ ಸಂಗೀತ ಪರೀಕ್ಷೆ*

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಸಂಗೀತ, ಕರ್ನಾಟಕ ಮುಕ್ತ ಶಾಲೆ, ಶಿಕ್ಷಣದಲ್ಲಿ ಡಿಪ್ಲೊಮಾ ಮುಂತಾದ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿತ್ತು. ಅನುದಾನಿತ ಮತ್ತು ಮಕ್ಕಳ ಕೇಂದ್ರಿತ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳಲ್ಲಿ ಸಂಗೀತ ಶಿಕ್ಷಕರ ಹುದ್ದೆಯನ್ನು ರಾಜ್ಯ ಸರ್ಕಾರವು ಮಂಜೂರು ಮಾಡಿತ್ತು. ಒದಗಿಸಿದ ಮಾಹಿತಿಯ ಪ್ರಕಾರ, ಪರೀಕ್ಷಾ–ತನಿಖೆ ನಡೆಸಿದ 16 ಶಾಲೆಗಳಲ್ಲಿ ಸಂಗೀತ ಶಿಕ್ಷಕರ ನೇಮಕಾತಿ ಮಾಡಲಾಗಿತ್ತು ಮತ್ತು ಕಾರ್ಯನಿರ್ವಹಿಸುತ್ತಿದ್ದರು. ಉಳಿದ ಮೂರು[4] ಶಾಲೆಗಳಲ್ಲಿ (ಎರಡು ಅನುದಾನಿತ ಮತ್ತು ಒಂದು ಮಕ್ಕಳ ಕೇಂದ್ರಿತ) ಹುದ್ದೆ ಖಾಲಿ ಇತ್ತು.

ಮಂಡಳಿಯು ನಿಗದಿಪಡಿಸಿದಂತೆ ಶಾಲೆಗಳು ಪಠ್ಯಕ್ರಮವನ್ನು ಅಳವಡಿಸಿಕೊಂಡಿದ್ದರೂ, 2017–18ರಿಂದ 2021–22ರ ಅವಧಿಯಲ್ಲಿ ಪರೀಕ್ಷಾ–ತನಿಖೆ ನಡೆಸಿದ 13 ಶಾಲೆಗಳಲ್ಲಿ ಯಾವುದೇ ವಿದ್ಯಾರ್ಥಿ (ಅನುದಾನಿತ ಶಾಲೆಗಳಿಂದ ಯಾವುದೇ ವಿದ್ಯಾರ್ಥಿಗಳು ಹಾಜರಾಗಲಿಲ್ಲ) ಮಂಡಳಿಯು ನಡೆಸಿದ ಪರೀಕ್ಷೆಗಳನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಮೇಲಿನ ಅವಧಿಯಲ್ಲಿ ಇತರ ಆರು ಶಾಲೆಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಪೈಕಿ ಕೇವಲ ಶೇಕಡಾ 1ರಿಂದ 18 ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗಳನ್ನು ತೆಗೆದುಕೊಂಡಿದ್ದರಿಂದ ಅದು ನಿರಂತರವಾಗಿರಲಿಲ್ಲ. **(ಅನುಬಂಧ–4.1)**.

ಹೀಗೆ, ಅಂಧ ವಿದ್ಯಾರ್ಥಿಗಳನ್ನು ಸಂಗೀತದ ಪರೀಕ್ಷೆಗಳಿಗೆ ಹಾಜರಾಗುವಂತೆ ಉತ್ತೇಜಿಸಲು ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಇಲಾಖೆಯು ವಿಫಲವಾಗಿತ್ತು. ಇದರಿಂದ ಉದ್ಯೋಗಗಳನ್ನು ಪಡೆಯಲು ಸಹಾಯ ಮಾಡುವ ಪ್ರಮಾಣಪತ್ರಗಳನ್ನು ಪಡೆಯುವುದರಿಂದ ವಿದ್ಯಾರ್ಥಿಗಳು ವಂಚಿತರಾದರು.

[4] ಅಂಧರ ಎಮ್.ಕೃಷ್ಣ ಶಾಲೆ, ಕರ್ನಾಟಕ ಕುರುಡರ ಕಲ್ಯಾಣ ಸಂಘ, ಬೆಂಗಳೂರು, ಅಂಧರ ಆಶಾಕಿರಣ ಶಾಲೆ, ಚಿಕ್ಕಮಗಳೂರು.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಸಂಗೀತ ಪರೀಕ್ಷೆಗೆ ವಿದ್ಯಾರ್ಥಿಗಳು ಹಾಜರಾಗುವುದನ್ನು ಪ್ರೋತ್ಸಾಹಿಸಲು ದೃಷ್ಟಿ ವಿಕಲಚೇತನ ಮಕ್ಕಳಿಗಾಗಿ ವಿಶೇಷ ಶಾಲೆಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಲು ಎಲ್ಲಾ ಡಿಡಿಡಬ್ಲ್ಯುಒಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಫೆಬ್ರವರಿ 2023) .

### *4.2.4 ಶತಮಾನೋತ್ಸವ ಭವನ ನಿರ್ಮಾಣದ ಮೇಲೆ ನಿಷ್ಪ್ರಯೋಜಕ ವೆಚ್ಚ*

1901ರಲ್ಲಿ ಸ್ಥಾಪನೆಯಾದ ಮೈಸೂರಿನ ಸರ್ಕಾರಿ ಅಂಧರ ಶಾಲೆಯು 100 ವರ್ಷಗಳನ್ನು ಪೂರೈಸಿದ ಸ್ಮರಣಾರ್ಥವಾಗಿ ರಾಜ್ಯ ಸರ್ಕಾರವು ಕಿವುಡ ಮತ್ತು ಮೂಕರ ಶಾಲೆಯ ಆವರಣದಲ್ಲಿ ಶತಮಾನೋತ್ಸವ ಭವನದ ನಿರ್ಮಾಣವನ್ನು ಮಂಜೂರು ಮಾಡಿತು (ಮಾರ್ಚ್ 2003). ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ (ಈಗ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಎಂದು ಕರೆಯಲಾಗುತ್ತದೆ) ವಹಿಸಲಾಯಿತು (ಆಗಸ್ಟ್ 2005) ಮತ್ತು ಒಟ್ಟು ₹50 ಲಕ್ಷ ವೆಚ್ಚದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ (ಜನವರಿ 2012) ಇಲಾಖೆಗೆ ಹಸ್ತಾಂತರಿಸಲಾಯಿತು.

ಕಳೆದ ಒಂಬತ್ತು ವರ್ಷಗಳಿಂದ ಕಟ್ಟಡ ಉದ್ಘಾಟನೆಯಾಗಿ ಬಳಕೆಯಾಗದೆ ಉಳಿದಿದೆ. ಕಟ್ಟಡದ ಕಿಟಕಿ, ಗಾಜುಗಳು ಒಡೆದುಹೋಗಿದ್ದು ಹಲವು ಗಾಲಿಕುರ್ಚಿಗಳು, ಮೋಟಾರು ವಾಹನಗಳು, ಕೃತಕ ಕೈಕಾಲುಗಳು, ಊರುಗೋಲುಗಳು ಇತ್ಯಾದಿಗಳನ್ನು ಕಟ್ಟಡದಲ್ಲಿ ಗುಡ್ಡೆ ಹಾಕಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಂಸ್ಥೆಯು ₹19.50 ಲಕ್ಷ ವೆಚ್ಚದ ದುರಸ್ತಿಗೆ ಅನುದಾನ ಕೋರಿ ನಿರ್ದೇಶಕರಿಗೆ (ಫೆಬ್ರವರಿ 2020) ಪ್ರಸ್ತಾವನೆಗಳನ್ನು ಸಲ್ಲಿಸಿದ್ದರೂ, ದುರಸ್ತಿಗೆ ಯಾವುದೇ ಅನುದಾನದ ಅಗತ್ಯವಿಲ್ಲ ಎಂದು ಮೈಸೂರು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ತಿಳಿಸಿದ್ದರಿಂದ ನಿರ್ದೇಶಕರು ಪ್ರಸ್ತಾವನೆಯನ್ನು ಪರಿಗಣಿಸಲಿಲ್ಲ (ಮಾರ್ಚ್ 2020). ಆದರೆ, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕ್ರಮವನ್ನು ಸಮರ್ಥಿಸುವ ಯಾವುದೇ ದಾಖಲೆಯಿರಲಿಲ್ಲ. ತತ್ಪರಿಣಾಮವಾಗಿ, ಕಟ್ಟಡವು ದುಸ್ಥಿತಿಯಲ್ಲಿತ್ತು ಮತ್ತು ಕಟ್ಟಡದ ಬಳಕೆಯಾಗದಿರುವುದು ₹50 ಲಕ್ಷ ನಿಷ್ಫಲ ವೆಚ್ಚದಲ್ಲಿ ಪರಿಣಮಿಸಿತು.

ಪ್ರಸ್ತುತ ಮೈಸೂರು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ಕಟ್ಟಡವನ್ನು ಬಳಸುತ್ತಿದ್ದಾರೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಮೇ 2023).

**ಪ್ರದರ್ಶಿಕೆ–4.1: ಮೈಸೂರು ಕಿವುಡ ಮತ್ತು ಮೂಗರ ಶಾಲೆಯ ಆವರಣದಲ್ಲಿ ಶತಮಾನೋತ್ಸವ ಕಟ್ಟಡ**




**ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು**

### *4.2.5 ಶಾಲಾವಾರು ನಿರ್ದಿಷ್ಟ ಅವಲೋಕನಗಳು*

#### (i) *ತೀಕ್ಷ್ಣ ಅಂಧರ ಶಾಲೆ, ಚಿತ್ರದುರ್ಗ*

2011–12ರಲ್ಲಿ 70ರಷ್ಟಿದ್ದ ವಿದ್ಯಾರ್ಥಿಗಳ ಸಾಮರ್ಥ್ಯವು 2014–15ರಲ್ಲಿ 23ಕ್ಕೆ ಮತ್ತು 2021–22ರಲ್ಲಿ ನಾಲ್ಕಕ್ಕೆ ಇಳಿಕೆಯಾಗಿತ್ತು ಎಂದು ಚಿತ್ರದುರ್ಗದ ತೀಕ್ಷ್ಣ ಅಂಧರ ಶಾಲೆಯ ದಾಖಲೆಗಳ ಪರೀಕ್ಷಾ-ತನಿಖೆಯಿಂದ (ಏಪ್ರಿಲ್ 2011ರಲ್ಲಿ ಅನುದಾನಿತ ಸ್ಥಾನಮಾನ ನೀಡಲಾಯಿತು) ತಿಳಿದುಬಂದಿತು. ಚಿತ್ರದುರ್ಗದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು (ಸಿಇಒ) ಸೇರಿದಂತೆ ಇಲಾಖಾ ಅಧಿಕಾರಿಗಳು ವಿದ್ಯಾರ್ಥಿಗಳ ಸಂಖ್ಯೆಗಿಂತ ಶಿಕ್ಷಕರ ಸಂಖ್ಯೆ ಹೆಚ್ಚಿರುವುದನ್ನು ಗಮನಿಸಿ (ಏಪ್ರಿಲ್ 2018–ಏಪ್ರಿಲ್ 2019) ಶಿಕ್ಷಕರನ್ನು ಆದ್ಯತೆಯ ಮೇರೆಗೆ ಇತರ ಅನುದಾನಿತ ಸಂಸ್ಥೆಗಳಿಗೆ ಸ್ಥಳಾಂತರಿಸಲು/ ವರ್ಗಾವಣೆ ಮಾಡಲು ಶಿಫಾರಸು ಮಾಡಿದ್ದರೂ ಸಹ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಶಾಲೆಯ ಆಡಳಿತ ಮಂಡಳಿಯು ಈ ಶಾಲೆಗೆ ಅನುದಾನವನ್ನು ರದ್ದುಗೊಳಿಸುವಂತೆ ಕೋರಿತ್ತು (ಜನವರಿ 2020) ಮತ್ತು ಶಾಲೆಯಲ್ಲಿ ಸಾಕಷ್ಟು ವಿದ್ಯಾರ್ಥಿಗಳಿಲ್ಲದ ಕಾರಣ ಬೇರೆ ಯಾವುದಾದರೂ ಶಾಲೆಗೆ ಶಿಕ್ಷಕರನ್ನು ವರ್ಗಾಯಿಸಲು ವಿನಂತಿಸಿತ್ತು ಎಂಬುದನ್ನು ದಾಖಲೆಗಳು ಸೂಚಿಸಿದವು. ಚಿಕ್ಕಮಗಳೂರಿನ ಆಶಾಕಿರಣ ಅಂಧರ ವಸತಿ ಶಾಲೆಗೆ ಶಿಕ್ಷಕರನ್ನು ವರ್ಗಾವಣೆ ಮಾಡುವ ಇಲಾಖೆಯ ಪ್ರಸ್ತಾವನೆಗೆ ಸರ್ಕಾರದಿಂದ ಇನ್ನೂ ಅನುಮೋದನೆ ಸಿಕ್ಕಿಲ್ಲ (ಮೇ 2021). 2017–18ರಿಂದ 2021–22ರ ಅವಧಿಯಲ್ಲಿ ಸಂಸ್ಥೆಗೆ ₹1.05 ಕೋಟಿ ಅನುದಾನವನ್ನು ಇಲಾಖೆಯು ಬಿಡುಗಡೆ ಮಾಡಿರುವುದನ್ನು ಗಮನಿಸಲಾಯಿತು. ಹೀಗೆ, ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗುತ್ತಿರುವ ಪ್ರವೃತ್ತಿಯನ್ನು ಗಮನಿಸಿ ಶಿಕ್ಷಕರನ್ನು ವರ್ಗಾವಣೆ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕಿತ್ತು.

ಶಿಕ್ಷಕರನ್ನು ಇತರೆ ಅನುದಾನಿತ ಸಂಸ್ಥೆಗಳಿಗೆ ವರ್ಗಾವಣೆ ಮಾಡಲು ಅನುಮೋದನೆ ಕೋರುವ ಮನವಿಯನ್ನು ಪರಿಗಣಿಸಲಾಗುತ್ತಿದೆ ಎಂದು ಸರ್ಕಾರವು ತಿಳಿಸಿತು.

### (ii) *ಎಂ. ಕೃಷ್ಣ ಅಂಧ ಮಕ್ಕಳ ವಸತಿ ಶಾಲೆ, ಹಾಸನ*

2011–12ರಲ್ಲಿ 45 ಇದ್ದ ವಿದ್ಯಾರ್ಥಿಗಳ ಸಂಖ್ಯೆ 2022–23ರಲ್ಲಿ ಕ್ರಮೇಣ ಎಂಟಕ್ಕೆ ಇಳಿಕೆಯಾಗಿರುವುದು ಹಾಸನದ ಎಂ.ಕೃಷ್ಣ ಅಂಧ ಮಕ್ಕಳ ವಸತಿ ಶಾಲೆಯ ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿತು. ಶಿಕ್ಷಕರು ತೃಪ್ತಿಕರವಾಗಿ ಕಾರ್ಯನಿರ್ವಹಿಸದ ಕಾರಣ ವಿದ್ಯಾರ್ಥಿಗಳನ್ನು ಬೇರೆ ಸಂಸ್ಥೆಗಳಿಗೆ ವರ್ಗಾಯಿಸಲು ಶಾಲೆಯು ವಿನಂತಿಸಿತ್ತು (ಜುಲೈ 2018). ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಲೆಯ ಮನವಿಯನ್ನು ರಾಜ್ಯ ಆಯುಕ್ತರು ರವಾನಿಸಿದರೂ (ನವೆಂಬರ್ 2021) ಇಲಾಖೆಯು ಇನ್ನೂ ಕ್ರಮ ಕೈಗೊಂಡಿರಲಿಲ್ಲ. ಕಳೆದ ಐದು ವರ್ಷಗಳಲ್ಲಿ ಸಿಬ್ಬಂದಿಯ ವೇತನಕ್ಕೆ ₹1.52 ಕೋಟಿ ಬಿಡುಗಡೆ ಮಾಡಿರುವುದನ್ನು ಗಮನಿಸಲಾಯಿತು.

ವಿವರವಾದ ವರದಿ ಸಲ್ಲಿಸಲು ಹಾಸನದ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿದೆ (ಫೆಬ್ರವರಿ 2023) ಮತ್ತು ವರದಿಯನ್ನು ಸ್ವೀಕರಿಸಿದ ನಂತರ ನಿಯಮಾನುಸಾರ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸರ್ಕಾರವು ತಿಳಿಸಿತು (ಮೇ 2023).

## 4.3 ಶ್ರವಣ ದೋಷವುಳ್ಳವರಿಗಾಗಿ ಶಾಲೆಗಳು

ಶ್ರವಣ ದೋಷವು ಕೇಳಿಸಿಕೊಳ್ಳಲು ಭಾಗಶಃ ಅಥವಾ ಸಂಪೂರ್ಣ ಅಸಮರ್ಥತೆಯಾಗಿದೆ. ಇದು ಎರಡು ವರ್ಗಗಳನ್ನು ಒಳಗೊಂಡಿದೆ – ಕಿವುಡ ಮತ್ತು ಶ್ರವಣ ದೋಷ. "ಕಿವುಡ" ಎಂದರೆ ಎರಡೂ ಕಿವಿಗಳಲ್ಲಿ ಮಾತಿನ ಆವರ್ತನಗಳಲ್ಲಿ 70 dB ಶ್ರವಣ ನಷ್ಟವನ್ನು ಹೊಂದಿರುವವರು ಮತ್ತು "ಶ್ರವಣ ದೋಷ" ಎಂದರೆ ಎರಡೂ ಕಿವಿಗಳಲ್ಲಿ 60 dB ನಿಂದ 70 dB ಶ್ರವಣ ನಷ್ಟವನ್ನು ಹೊಂದಿರುವವರು.

ಪರೀಕ್ಷಾ–ತನಿಖೆ ನಡೆಸಿದ 23 ಶಾಲೆಗಳಲ್ಲಿ ಶ್ರವಣದೋಷವುಳ್ಳ ವಿದ್ಯಾರ್ಥಿಗಳ ಈ ಶಾಲೆಗಳ ಕಾರ್ಯ ನಿರ್ವಹಣೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿದ ನ್ಯೂನತೆಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.

### *4.3.1 ಗುಂಪು ಶ್ರವಣ ಸಾಧನಗಳ ಲಭ್ಯತೆ ಇಲ್ಲದಿರುವುದು*


ಶ್ರವಣ ದೋಷವುಳ್ಳ ವಿದ್ಯಾರ್ಥಿಯು ವ್ಯಾಕರಣ, ಕಾಗುಣಿತ ಮತ್ತು ಶಬ್ದಕೋಶ, ಉಪನ್ಯಾಸಗಳನ್ನು ಕೇಳುವಾಗ ಟಿಪ್ಪಣಿಗಳನ್ನು ಬರೆದುಕೊಳ್ಳುವಾಗ, ತರಗತಿಯ ಚರ್ಚೆಗಳಲ್ಲಿ ಭಾಗವಹಿಸುವಾಗ, ಶೈಕ್ಷಣಿಕ ವೀಡಿಯೊಗಳನ್ನು ವೀಕ್ಷಿಸುವಾಗ ಮತ್ತು ಮೌಖಿಕ ವರದಿಗಳನ್ನು ಪ್ರಸ್ತುತಪಡಿಸುವಾಗ ತೊಂದರೆ ಅನುಭವಿಸಬಹುದು. ಗುಂಪು ಶ್ರವಣ ಸಾಧನಗಳು ಶ್ರವಣ ದೋಷವುಳ್ಳ ವಿದ್ಯಾರ್ಥಿಗಳು ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ಒಟ್ಟಿಗೆ ಅಧ್ಯಯನ ಮಾಡಲು ಅನುಕೂಲ ಮಾಡಿಕೊಡುತ್ತದೆ. ಇದು ಒಂದು ಶಿಕ್ಷಕರ ಮೈಕ್ ಆಂಪ್ಲಿಫೈಯರ್ ಘಟಕ ಮತ್ತು 8ರಿಂದ 12 ವಿದ್ಯಾರ್ಥಿಗಳ ಹೆಡ್‌ಫೋನ್ ಜೊತೆಗಿನ ಮೈಕ್ ಆಂಪ್ಲಿಫೈಯರ್ ಘಟಕಗಳನ್ನು ಒಳಗೊಂಡಿರುತ್ತದೆ.

ಏಳು[5] ಶಾಲೆಗಳನ್ನು ಹೊರತುಪಡಿಸಿ, ಸರ್ಕಾರಿ ಶಾಲೆಗಳು ಸೇರಿದಂತೆ ಇತರ ಯಾವುದೇ ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿ ಬೋಧನಾ ಉದ್ದೇಶಗಳಿಗಾಗಿ ಗುಂಪು ಶ್ರವಣ ಸಾಧನಗಳನ್ನು

5 ಶೀಲಾ ಕೊತ್ವಾಲಾ ಶ್ರವಣ ವಿಕಲಚೇತನರ ಶಾಲೆ–ಬೆಂಗಳೂರು, ಸುನಾದ ಕಿವುಡ ಮತ್ತು ಮೂಕರ ಶಾಲೆ–ಬೆಂಗಳೂರು, ಶತಶೃಂಗ ಶ್ರವಣದೋಷವುಳ್ಳ ಮಕ್ಕಳ ವಸತಿ ಶಾಲೆ–ಬೆಂಗಳೂರು, ಪಿ.ವಿ.ದತ್ತಿ ಕಿವುಡ ಮತ್ತು ಮೂಕರ ರೋಟರಿ ಶಾಲೆ–ಹುಬ್ಬಳ್ಳಿ, ಶ್ರೀ ರೇಣುಕಾ ಎಲ್ಲಮ್ಮ ವಸತಿ ಶಾಲೆ–ರಾಣೆಬೆನ್ನೂರು ಹಾವೇರಿ ಜಿಲ್ಲೆ, ಸಾಯಿರಂಗ ಕಿವುಡ ಮತ್ತು ಮೂಕರ ಶಾಲೆ–ಮೈಸೂರು, ಪುಟ್ಟೀರಮ್ಮ ಕಿವುಡ ಮತ್ತು ಮೂಕರ ಶಾಲೆ–ಮೈಸೂರು.

ಬಳಸುತ್ತಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಸಂವಹನ ಅಡೆತಡೆಗಳು, ಮಾಹಿತಿಯ ಸೀಮಿತ ಗ್ರಹಣ ಮತ್ತು ಸಾಮಾಜಿಕ ಪ್ರತ್ಯೇಕೀಕರಣದಲ್ಲಿ ಪರಿಣಮಿಸುತ್ತದೆ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

**ಪ್ರದರ್ಶಿಕೆ–4.2 : ಶ್ರವಣದೋಷವುಳ್ಳ ಶಾಲೆಗಳಲ್ಲಿ ಗುಂಪು ಶ್ರವಣ ಸಾಧನಗಳು**

| | |
|---|---|
|   |   |
| **ಡಾ. ಪಿ.ವಿ.ದತ್ತಿ ಶ್ರವಣದೋಷವುಳ್ಳ ಮಕ್ಕಳ ರೋಟರಿ ಶಾಲೆ, ಹುಬ್ಬಳ್ಳಿ, ಧಾರವಾಡ** | **ಶ್ರೀಮತಿ. ಪುಟ್ಟೀರಮ್ಮ ಶ್ರವಣದೋಷವುಳ್ಳ ಬಾಲಕಿಯರ ಶಾಲೆ, ಮೈಸೂರು** |

ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

### *4.3.2 'ಪ್ರಾಥಮಿಕ ಶಾಲೆಗಳ ವಿಕಲಚೇತನ ವಿದ್ಯಾರ್ಥಿಗಳಿಗೆ ಕಲಿಕೆಯ ವರ್ಧನೆ' ಯೋಜನೆಯನ್ನು ಅನುಷ್ಠಾನ ಮಾಡದಿರುವುದು*

ಭಾರತ ಸರ್ಕಾರದ 'ರಾಜ್ಯ ಸಹಯೋಗದ ಉಪಕ್ರಮದ ಕಾರ್ಯಕ್ರಮ' ಅಡಿಯಲ್ಲಿ ರಾಜ್ಯ ಸರ್ಕಾರವು ಅಂದಾಜು ₹2.36 ಕೋಟಿ ವೆಚ್ಚದಲ್ಲಿ 'ಪ್ರಾಥಮಿಕ ಶಾಲೆಗಳ ವಿಕಲಚೇತನ ವಿದ್ಯಾರ್ಥಿಗಳಿಗೆ ಕಲಿಕೆಯ ವರ್ಧನೆ' ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸ್ತಾವಿಸಿತು. ಶ್ರವಣ ದೋಷವುಳ್ಳ ವಿದ್ಯಾರ್ಥಿಗಳಿಗೆ ಡಿಜಿಟಲ್ ಶಿಕ್ಷಣವನ್ನು ಒದಗಿಸುವುದು, ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಪರಿಕಲ್ಪನೆಗಳನ್ನು ಸೂಕ್ತ ದರ್ಜೆಯ ಮಟ್ಟದಲ್ಲಿ ಕಲಿಯುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅದು ಅವರ ತರಗತಿಯ ಕಲಿಕೆಯನ್ನು ಹೆಚ್ಚಿಸುವುದರ ಜೊತೆಗೆ ವಿಶೇಷ ಶಾಲೆಗಳಲ್ಲಿ ಮಲ್ಟಿಮೀಡಿಯಾ ಕೊಠಡಿ, ಟ್ಯಾಬ್ಲೆಟ್‌ಗಳು, ಉಪಗ್ರಹ ಮತ್ತು ಅಂತರ್ಜಾಲ ಸಂಪರ್ಕ ಮುಂತಾದ ಹೊಸ ತಂತ್ರಜ್ಞಾನಗಳು ಮತ್ತು ಬಹುಮಾಧ್ಯಮಗಳಿಗೆ ಪ್ರವೇಶವನ್ನು ಒದಗಿಸುವ ಗುರಿಯನ್ನು ಹೊಂದಿತ್ತು. ರಾಜ್ಯದ 46 ವಿಶೇಷ ಶಾಲೆಗಳಲ್ಲಿ ಶ್ರವಣ ದೋಷ ಹೊಂದಿರುವ 1000ಕ್ಕೂ ಹೆಚ್ಚು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನಗಳನ್ನು ಪಡೆಯಲಿದ್ದರು. ಭಾರತ ಸರ್ಕಾರ ತನ್ನ ಪಾಲಿನ ಒಂದು ಕೋಟಿ ರೂಪಾಯಿಯಲ್ಲಿ ₹80 ಲಕ್ಷವನ್ನು ಬಿಡುಗಡೆ ಮಾಡಿತ್ತು (ಮಾರ್ಚ್ 2016).

ಶಿಕ್ಷಣ ಇಲಾಖೆಯಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾದ ಇದೇ ರೀತಿಯ ಯೋಜನೆಯು ಫಲಪ್ರದ ಪ್ರಗತಿಯನ್ನು ಸಾಧಿಸದ ಕಾರಣವನ್ನು ಉಲ್ಲೇಖಿಸಿ, ಇಲಾಖೆಯು ಯೋಜನೆಯನ್ನು ಜಾರಿಗೊಳಿಸದಿರಲು ನಿರ್ಧರಿಸಿತು (ಮೇ 2020) ಮತ್ತು ಬಡ್ಡಿಯೊಂದಿಗೆ ₹89.77 ಲಕ್ಷವನ್ನು ಭಾರತ ಸರ್ಕಾರಕ್ಕೆ ಮರುಪಾವತಿಸಿತು (ಡಿಸೆಂಬರ್ 2020) ಎಂಬುದನ್ನು ದಾಖಲೆಗಳು ತಿಳಿಯಪಡಿಸಿದವು. ಇಲಾಖೆಯು ತನ್ನ ಈ ನಿರ್ಧಾರಕ್ಕೆ ಬರಲು ಸ್ವತಂತ್ರ ಪ್ರಾಯೋಗಿಕ ಅಧ್ಯಯನವನ್ನು ನಡೆಸದಿರುವುದನ್ನು ಗಮನಿಸಲಾಯಿತು. ಇದರಿಂದಾಗಿ ಅಂಗವಿಕಲರ ಶಿಕ್ಷಣದ ಪ್ರಯೋಜನಕ್ಕಾಗಿ ಭಾರತ ಸರ್ಕಾರದಿಂದ ನೆರವನ್ನು ಪಡೆಯುವ ಅವಕಾಶವನ್ನು ಕಳೆದುಕೊಂಡಿತು. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

### *4.3.3 ಸಂಸ್ಥೆವಾರು ನಿರ್ದಿಷ್ಟ ಸಂಶೋಧನೆ*

#### *(i) ಕಿವುಡ ಮತ್ತು ಮೂಕರ ಸರ್ಕಾರಿ ಶಾಲೆ, ಬೆಂಗಳೂರು (ಹಂಸಧ್ವನಿ)*

ಮೆ.ಎನ್ಎಎಸ್ಇಒಹೆಚ್ ಸಂಸ್ಥೆ ಬೆಂಗಳೂರು (ಹಂಸಧ್ವನಿ) (1988ರಲ್ಲಿ ಅನುದಾನಿತ ಸ್ಥಾನಮಾನವನ್ನು ನೀಡಲಾಯಿತು) ನಡೆಸುತ್ತಿರುವ ಕಿವುಡ ಮತ್ತು ಮೂಕರ ಶಾಲೆಯ ದಾಖಲೆಗಳ ಪರೀಕ್ಷಾ-ತನಿಖೆಯು ವಿದ್ಯಾರ್ಥಿಗಳ ಸಾಮರ್ಥ್ಯವು 2015-16ರಲ್ಲಿನ 72ರಿಂದ 2021-22ರಲ್ಲಿ 12ಕ್ಕೆ ಇಳಿದಿರುವುದನ್ನು ತಿಳಿಯಪಡಿಸಿತು. ಶಾಲೆಯಲ್ಲಿ ಓದುತ್ತಿರುವ 72 ವಿದ್ಯಾರ್ಥಿಗಳ ಹಿತಾಸಕ್ತಿ ಕಾಪಾಡಲು ಮತ್ತು ನಗರದ ಪ್ರಧಾನ ಪ್ರದೇಶದಲ್ಲಿ ಇರುವ ಭೂಮಿಯನ್ನು (2 ಎಕರೆ 13 ಗುಂಟಾ) ರಕ್ಷಿಸಲು ಇಲಾಖೆಯು ಶಿಫಾರಸು ಮಾಡಿದ ನಂತರ ರಾಜ್ಯ ಸರ್ಕಾರವು ಶಾಲೆಯನ್ನು ವಸತಿ ಶಾಲೆಯನ್ನಾಗಿ ಪರಿವರ್ತಿಸಲು ಅನುಮತಿ ನೀಡಿತು (ಜುಲೈ 2016) ಮತ್ತು ವಸತಿನಿಲಯದ ನಿರ್ಮಾಣಕ್ಕೆ ₹64.35 ಲಕ್ಷ ಮಂಜೂರು ಮಾಡಿತು. ವಸತಿನಿಲಯ ಕಟ್ಟಡವನ್ನು ನಿರ್ಮಿಸಿ ಇಲಾಖೆಗೆ ಹಸ್ತಾಂತರಿಸಿದ್ದರೂ (ಫೆಬ್ರವರಿ 2019), ಅದನ್ನು ಬಳಕೆ ಮಾಡುತ್ತಿರಲಿಲ್ಲ ಮತ್ತು ಶಾಲೆಯನ್ನು ಇನ್ನೂ ವಸತಿಶಾಲೆಯಾಗಿ ಪರಿವರ್ತಿಸಿರಲಿಲ್ಲ.

**ಪ್ರದರ್ಶಿಕೆ-4.3: ಸರ್ಕಾರಿ ಕಿವುಡ ಮತ್ತು ಮೂಕರ ಶಾಲೆಯ ವಸತಿನಿಲಯ ಕಟ್ಟಡ, ಬೆಂಗಳೂರು (ಹಂಸಧ್ವನಿ)**






ಆಧಾರ: ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

2015-16ರಿಂದ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಶಿಕ್ಷಕರಿಲ್ಲದೆ ಪ್ರೌಢಶಾಲಾ ತರಗತಿಗಳನ್ನು ನಡೆಸುತ್ತಿರುವುದನ್ನು ಗಮನಿಸಲಾಯಿತು. ಯಾವುದೇ ಒಪ್ಪಂದವಿಲ್ಲದೆ ಮತ್ತು ಇಲಾಖೆಯ ಒಪ್ಪಿಗೆಯಿಲ್ಲದೆ ಶಿಕ್ಷಕರು ಶಾಲೆಯ ಮೈದಾನದ ಒಂದು ಭಾಗವನ್ನು ಹತ್ತಿರದ ಖಾಸಗಿ ಶಾಲೆಗೆ (ಪ್ರೆಸ್ಟೆನ್ ಪಬ್ಲಿಕ್ ಸ್ಕೂಲ್) ಮಾಸಿಕ ₹5,000 ಬಾಡಿಗೆಗೆ ಕೊಟ್ಟಿದ್ದರು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

#### *(ii) ಕಿವುಡರ ಸರ್ಕಾರಿ ವಸತಿ ಶಾಲೆ, ಮೈಸೂರು*

2011-12ರಿಂದ 2018-19ರ ಅವಧಿಯಲ್ಲಿ ಕಿವುಡರ ಸರ್ಕಾರಿ ವಸತಿ ಶಾಲೆಯಲ್ಲಿ ಓದುತ್ತಿದ್ದ 41 ವಿದ್ಯಾರ್ಥಿಗಳು/ನಿವಾಸಿಗಳು ಶಾಲೆಯಿಂದ ಓಡಿಹೋಗಿದ್ದರು ಎಂದು ವರದಿಯಾಗಿತ್ತು ಮತ್ತು ನಂತರ ಕೇವಲ ಆರು ವಿದ್ಯಾರ್ಥಿಗಳನ್ನು ಮಾತ್ರ ಪತ್ತೆ ಮಾಡಲಾಗಿತ್ತು. ಇತರ 35 ವಿದ್ಯಾರ್ಥಿಗಳ ಪತ್ತೆಗೆ ಸಂಸ್ಥೆಯಾಗಲೀ ಅಥವಾ ಇಲಾಖೆಯಾಗಲೀ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಮಾರ್ಚ್ 2023). ಇದು ಭದ್ರತಾ ಸಮಸ್ಯೆಗಳನ್ನು ತೋರಿಸಿತಲ್ಲದೇ ಸಿಡಬ್ಲ್ಯುಎಸ್ಎನ್‌ಗಳ ಬಗ್ಗೆ ಸೂಕ್ಷ್ಮತೆಯ ಕೊರತೆಯನ್ನೂ ಸಹ ಸೂಚಿಸುತ್ತದೆ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

### *(iii) ಗಿಲ್ಡ್ ಆಫ್ ಸರ್ವೀಸ್, ವಾಕ್ ಮತ್ತು ಶ್ರವಣ ಸಂಸ್ಥೆ, ಮಂಗಳೂರು*

ಮಂಗಳೂರಿನಲ್ಲಿ ಸ್ಥಾಪಿತವಾದ ಗಿಲ್ಡ್ ಆಫ್ ಸರ್ವೀಸ್, ವಾಕ್ ಮತ್ತು ಶ್ರವಣ ಸಂಸ್ಥೆ (1974) ವಾಕ್ ಮತ್ತು ಶ್ರವಣ ದೋಷಗಳೊಂದಿಗಿನ ಮಕ್ಕಳು ಮತ್ತು ವಯಸ್ಕರಿಗೆ (20 ತಿಂಗಳಿಂದ 80 ವರ್ಷ ವಯಸ್ಸಿನವರು) ತರಬೇತಿ ಮತ್ತು ಸೇವೆಗಳನ್ನು ಒದಗಿಸುತ್ತದೆ. ರಾಜ್ಯ ಸರ್ಕಾರವು ಅನುದಾನಿತ ಸ್ಥಾನಮಾನವನ್ನು ನೀಡಿತ್ತು (1982) ಮತ್ತು ಸ್ಪೀಚ್ ಥೆರಪಿಸ್ಟ್‌ಗಳ ಎರಡು ಹುದ್ದೆಗಳನ್ನು ಮತ್ತು ಒಂದು ಹಿರಿಯ ದರ್ಜೆ ಸಹಾಯಕ (ಎಸ್‌ಡಿಎ) ಹುದ್ದೆಯನ್ನು ಮಂಜೂರು ಮಾಡಿತ್ತು. ಸ್ಪೀಚ್ ಥೆರಪಿಸ್ಟ್‌ಗಳ ನಿವೃತ್ತಿಯ ನಂತರ (2003 ಮತ್ತು 2011) ಯಾವುದೇ ನೇಮಕಾತಿಗಳನ್ನು ಮಾಡಲಾಗಿಲ್ಲ. ಪ್ರಸ್ತುತ, ಸಂಸ್ಥೆಯು ಹಿರಿಯ ದರ್ಜೆ ಸಹಾಯಕರ ಜೊತೆಗೆ ಗೌರವಧನದ ಆಧಾರದ ಮೇಲೆ ಓರ್ವ ಸ್ಪೀಚ್ ಥೆರಪಿಸ್ಟ್ ಮತ್ತು ಓರ್ವ ಇಯರ್ ಮೋಲ್ಡ್ ಟೆಕ್ನಿಷಿಯನ್‌ರೊಂದಿಗೆ ಕಾರ್ಯ ನಿರ್ವಹಿಸುತ್ತಿದೆ.


2011ರಲ್ಲಿ ನಿವೃತ್ತರಾದ ಸ್ಪೀಚ್ ಥೆರಪಿಸ್ಟ್‌ರವರ ಸೇವೆಗಳೊಂದಿಗೆ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗೌರವಧನವನ್ನು ಮರುಪಾವತಿಸಲು ವಿನಂತಿಗಳನ್ನು ಮಾಡಲಾಗಿದ್ದರೂ, ವಾಕ್ ಚಿಕಿತ್ಸಾ ಸೆಷನ್‌ಗಳು 2015–16ರಲ್ಲಿನ 1,380ರಿಂದ 2021–22ರಲ್ಲಿ 2,036ಕ್ಕೆ ಹೆಚ್ಚಾದಾಗಲೂ ಇಲಾಖೆಯು ಇನ್ನೂ ಅನುದಾನವನ್ನು ಬಿಡುಗಡೆ ಮಾಡಿರಲಿಲ್ಲ. ಹೀಗೆ, ಖಾಯಂ ತಾಂತ್ರಿಕ ಸಿಬ್ಬಂದಿಯನ್ನು ಭರ್ತಿ ಮಾಡದಿರುವುದು ಸಂಸ್ಥೆಯನ್ನು ಮುಚ್ಚುವುದಕ್ಕೆ ಕಾರಣವಾಗಬಹುದು. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## 4.4 ಭಾರತೀಯ ಪುನರ್ವಸತಿ ಮಂಡಳಿಯೊಂದಿಗೆ ಶಿಕ್ಷಕರ ನೋಂದಣಿ

1986ರಲ್ಲಿ ನೋಂದಾಯಿತ ಸೊಸೈಟಿಯಾಗಿ ಸ್ಥಾಪನೆಯಾಗಿದ್ದ ಭಾರತೀಯ ಪುನರ್ವಸತಿ ಮಂಡಳಿಯು (ಜೂನ್ 1993) ಆರ್‌ಸಿಐ ಅಧಿನಿಯಮವನ್ನು ಜಾರಿಗೊಳಿಸುವ (ಸೆಪ್ಟೆಂಬರ್ 1992) ಮೂಲಕ ಶಾಸನಬದ್ಧ ಸಂಸ್ಥೆಯಾಯಿತು. ಅಂಗವಿಕಲರಿಗೆ ನೀಡಲಾಗುವ ಸೇವೆಗಳನ್ನು ನಿಯಂತ್ರಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು, ಪಠ್ಯಕ್ರಮಗಳನ್ನು ಪ್ರಮಾಣೀಕರಿಸುವುದು ಮತ್ತು ಪುನರ್ವಸತಿ ಮತ್ತು ವಿಶೇಷ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಅರ್ಹ ವೃತ್ತಿಪರರು ಮತ್ತು ಸಿಬ್ಬಂದಿಗಳ ಕೇಂದ್ರೀಯ ಪುನರ್ವಸತಿ ನೋಂದಣಿಯನ್ನು ನಿರ್ವಹಿಸುವುದು ಆರ್‌ಸಿಐಗೆ ನೀಡಿದ ಅಧ್ಯಾದೇಶವಾಗಿತ್ತು. ಈ ಕ್ಷೇತ್ರಗಳಲ್ಲಿನ ವೃತ್ತಿಪರರು ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ನಿರಂತರ ಆಧಾರದ ಮೇಲೆ ಇಂದೀಕರಿಸುತ್ತಾರೆ ಮತ್ತು ನವೀಕರಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಹೆಚ್ಚುವರಿ ಜವಾಬ್ದಾರಿಯನ್ನು ಅದು ಹೊಂದಿತ್ತು. ಆರ್‌ಸಿಐನಲ್ಲಿ ನೋಂದಾಯಿಸಲ್ಪಟ್ಟ ವ್ಯಕ್ತಿಗಳು ಭಾರತದ ಯಾವುದೇ ಭಾಗದಲ್ಲಿ ಪುನರ್ವಸತಿ ವೃತ್ತಿಪರರಾಗಿ/ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸಲು ಅರ್ಹರಾಗಿರುತ್ತಾರೆ. ನೋಂದಣಿಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನವೀಕರಿಸಬೇಕು.

ಪರೀಕ್ಷಾ–ತನಿಖೆ ನಡೆಸಿದ 90 ಶಾಲೆಗಳಲ್ಲಿ ಒಟ್ಟು 778 ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು, ಅವರಲ್ಲಿ 531 ಶಿಕ್ಷಕರು (ಶೇಕಡಾ 68) ಆರ್‌ಸಿಐನಲ್ಲಿ ನೋಂದಾಯಿತರಾಗಿದ್ದರು. ಇದಲ್ಲದೆ, 531 ನೋಂದಾಯಿತ ಶಿಕ್ಷಕರಲ್ಲಿ 315 ಶಿಕ್ಷಕರು (ಶೇಕಡಾ 59) ತಮ್ಮ ನೋಂದಣಿಯನ್ನು ನವೀಕರಿಸಿದ್ದರು. ಹೀಗೆ, **ನಕ್ಷೆ–4.2ರಲ್ಲಿ** ತೋರಿಸಿರುವಂತೆ, ಪರೀಕ್ಷಾ–ತನಿಖೆ ನಡೆಸಿದ ಶಾಲೆಗಳಲ್ಲಿನ 778ರಲ್ಲಿ 315 ಶಿಕ್ಷಕರು (ಶೇಕಡಾ 40) ಮಾತ್ರ ಅಂಗವಿಕಲ ವ್ಯಕ್ತಿಗಳಿಗೆ ಸೇವೆಗಳನ್ನು ನೀಡಲು ಸಾಕಷ್ಟು ಅರ್ಹತೆ ಪಡೆದಿದ್ದರು.

**ನಕ್ಷೆ–4.2: ಆರ್‌ಸಿಐನೊಂದಿಗೆ ಶಿಕ್ಷಕರ ನೋಂದಣಿ ಮತ್ತು ನವೀಕರಣ**




ಆರ್‌ಸಿಐನಲ್ಲಿ ನೋಂದಾಯಿಸದ ಶಿಕ್ಷಕರು ಎಲ್ಲಾ ವರ್ಗದ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಇಲಾಖೆಗೆ ತಿಳಿದಿದ್ದರೂ ಸಹ ಎಲ್ಲಾ ಶಿಕ್ಷಕರು ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಸಮಯಕ್ಕೆ ತಕ್ಕಂತೆ ನವೀಕರಿಸಲು ಮತ್ತು ಇಂದೀಕರಿಸಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಅನುದಾನಿತ (ಜಿಐಎ) ಮತ್ತು ಮಕ್ಕಳ ಕೇಂದ್ರಿತ (ಸಿಸಿ) ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡುವಾಗ ಇಲಾಖೆಯು ಈ ಅಂಶದ ಮೇಲೆ ಒತ್ತಾಯಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆರು[6] ಶಾಲೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಶಿಕ್ಷಕರು ಆರ್‌ಸಿಐನಲ್ಲಿ ನೋಂದಾಯಿಸಿರಲಿಲ್ಲ ಆದರೆ 2021–22ರ ಅವಧಿಗೆ ಮಾತ್ರ ₹1.99 ಕೋಟಿ ಅನುದಾನವನ್ನು ಪಡೆದಿರುವುದನ್ನು ಗಮನಿಸಲಾಯಿತು. ಅನುದಾನಿತ ಶಾಲೆಗಳಲ್ಲಿ 18 ಶಿಕ್ಷಕರು, ಸರ್ಕಾರಿ ಶಾಲೆಗಳಲ್ಲಿ ಏಳು ಶಿಕ್ಷಕರು ಮತ್ತು ಮಕ್ಕಳ ಕೇಂದ್ರಿತ ಶಾಲೆಗಳಲ್ಲಿ 34 ಶಿಕ್ಷಕರು ವಿಶೇಷ ಡಿಎಡ್/ಬಿಎಡ್ ವಿದ್ಯಾರ್ಹತೆಯನ್ನು ಪಡೆದಿರಲಿಲ್ಲ.

ಹೀಗೆ, ಶೇಕಡಾ 60ರಷ್ಟು ಶಿಕ್ಷಕರು ಆರ್‌ಸಿಐ ಅಧಿನಿಯಮದ ಶಾಸನಬದ್ಧ ನಿಬಂಧನೆಗಳನ್ನು ಉಲ್ಲಂಘಿಸಿ ಅಂಗವಿಕಲ ವಿದ್ಯಾರ್ಥಿಗಳಿಗೆ ಸೇವೆಗಳನ್ನು ಒದಗಿಸುತ್ತಿದ್ದರು ಮತ್ತು ಈ ಅಂಶವನ್ನು ಮೇಲ್ವಿಚಾರಣೆ ಮಾಡುವಲ್ಲಿ ಇಲಾಖೆಯು ವಿಫಲವಾಗಿತ್ತು. ಇದರಿಂದ ವಿದ್ಯಾರ್ಥಿಗಳು ಗುಣಮಟ್ಟದ ಬೋಧನೆಯಿಂದ ವಂಚಿತರಾದಂತಾಯಿತು.

ವಿಶೇಷ ಮಕ್ಕಳ ಹಿತದೃಷ್ಟಿಯಿಂದ ಶಾಲೆಗಳಿಗೆ ಅನುದಾನ ಮಂಜೂರು ಮಾಡಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ವಿಶೇಷ ಡಿಎಡ್/ಬಿಎಡ್ ವಿದ್ಯಾರ್ಹತೆಗಳನ್ನು ಪಡೆಯದ ಮಕ್ಕಳ ಕೇಂದ್ರಿತ ಶಾಲೆಗಳ ಶಿಕ್ಷಕರಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿಲ್ಲ ಎಂದೂ ಸಹ ತಿಳಿಸಲಾಯಿತು. ಆದರೂ, ಉತ್ತರವು ಆರ್‌ಸಿಐ ನೋಂದಣಿಯ ಮತ್ತು ನವೀಕರಣದ ಬಗ್ಗೆ ನಿರ್ದಿಷ್ಟವಾಗಿಲ್ಲ.

[6] ಅಜಯ್ ಕಿವುಡ ಮತ್ತು ಮೂಕರ ಶಾಲೆ–ಬೆಳಗಾವಿ, ಆಶಾಕಿರಣ ಅಂಧರ ಶಾಲೆ–ಬೀದರ್, ಅವಕಾಶ ಎಂಆರ್ ಶಾಲೆ–ಹಾಸನ, ಜ್ಞಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿ ಗಳವರ ಎಚ್ಐ ಶಾಲೆ–ಶಿಗ್ಗಾವಿ ಹಾವೇರಿ ಜಿಲ್ಲೆ, ಬುದ್ಧಿಮಾಂದ್ಯ ಮಕ್ಕಳಿಗಾಗಿ ಶ್ರೀ ಜ್ಞಾನ ಕಿರಣ ವಸತಿ ಶಾಲೆ–ಚಿಕ್ಕಕುರಾವತಿ–ರಾಣೆಬೆನ್ನೂರು, ಹಾವೇರಿ ಜಿಲ್ಲೆ. ಬುದ್ಧಿಮಾಂದ್ಯ ಮಕ್ಕಳಿಗಾಗಿ ವಿದ್ಯಾಚೇತನ ಶಾಲೆ–ಬ್ಯಾಡಗಿ ಹಾವೇರಿ ಜಿಲ್ಲೆ.

***<u>ನಿದರ್ಶನ</u>***

***ಬುದ್ಧಿಮಾಂದ್ಯ ಮಕ್ಕಳ ಡಾ.ಸ್ಟೆನರ್ಸ್ ಕ್ಯುರೇಟಿವ್ ಶಿಕ್ಷಣ ಸಂಸ್ಥೆ, ಧಾರವಾಡ***

*ಬುದ್ಧಿಮಾಂದ್ಯರಿಗಾಗಿನ ಈ ಶಾಲೆಯು 2022–23ರಲ್ಲಿ 51 ವಿದ್ಯಾರ್ಥಿಗಳನ್ನು ಹೊಂದಿತ್ತು ಮತ್ತು ಯಾವುದೇ ಅರ್ಹ ಶಿಕ್ಷಕರನ್ನು ಹೊಂದಿರಲಿಲ್ಲ. ನಿಗದಿತ ಬೋಧನಾ ಸಿಬ್ಬಂದಿಯ ನಿವೃತ್ತಿ/ಮರಣದ ನಂತರ (ಅಕ್ಟೋಬರ್ 2003ರಿಂದ ಮೇ 2011), ಅರ್ಹ ಬೋಧನಾ ಸಿಬ್ಬಂದಿಯನ್ನು ನೇಮಿಸಲು ಆಡಳಿತ ಮಂಡಳಿಯು ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಬದಲಿಗೆ, ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ಸಂಗೀತ ಶಿಕ್ಷಕರು ತರಗತಿಗಳನ್ನು ನಿರ್ವಹಿಸುತ್ತಿದ್ದರು, ಅವರು ಆರ್‌ಸಿಐ ನೋಂದಣಿ ಸೇರಿದಂತೆ ಬೋಧನೆಗೆ ಯಾವುದೇ ಅಗತ್ಯ ಅರ್ಹತೆಗಳನ್ನು ಹೊಂದಿರಲಿಲ್ಲ.*

*ಕಿವುಡ ವಿದ್ಯಾರ್ಥಿಗಳ ಸರ್ಕಾರಿ ಶಾಲೆ (ಮೈಸೂರು): ಆರ್‌ಸಿಐ ನೋಂದಣಿ ಸೇರಿದಂತೆ ಬೋಧನೆಗೆ ಯಾವುದೇ ಅಗತ್ಯ ವಿದ್ಯಾರ್ಹತೆ ಇಲ್ಲದೆ 2000ನೇ ಇಸವಿಯಿಂದ ಮೂವರು ಶಿಕ್ಷಕರು ಬೋಧನೆ ಮಾಡುತ್ತಿದ್ದರು.*

## 4.5 ಶಾಲೆಗಳಲ್ಲಿ ಸುಗಮ ಮೂಲಸೌಕರ್ಯ

ಆರ್‌ಪಿಡಬ್ಲ್ಯುಡಿ ಅಧಿನಿಯಮವು ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಮಾನದಂಡದ ಅಂಗವೈಕಲ್ಯ ಹೊಂದಿರುವ ಪ್ರತಿ ಮಗುವಿಗೆ ಸೂಕ್ತವಾದ ಪರಿಸರದಲ್ಲಿ ಉಚಿತ ಶಿಕ್ಷಣದ ಪ್ರವೇಶವನ್ನು ಕಡ್ಡಾಯಗೊಳಿಸುತ್ತದೆ ಮತ್ತು ಶಾಲೆಯ ಮೂಲ ಸೌಕರ್ಯ ಮತ್ತು ಶೈಕ್ಷಣಿಕ ಕಾರ್ಯ ಕ್ಷಮತೆಯ ನಡುವೆ ನೇರ ಸಂಬಂಧವಿರುತ್ತದೆ.

### *4.5.1 ಸಾಮಾನ್ಯ ಶಾಲೆಗಳಲ್ಲಿ ಸುಗಮ ಮೂಲಸೌಕರ್ಯ*


ರಾಜ್ಯದ 71,830 ಶಾಲೆಗಳಲ್ಲಿ ಪ್ರವೇಶ ಮೂಲಸೌಕರ್ಯದ ಸ್ಥಿತಿಗೆ ಸಂಬಂಧಿಸಿದಂತೆ ಸರ್ವಶಿಕ್ಷಣ ಅಭಿಯಾನದ ಯೋಜನಾ ನಿರ್ದೇಶಕರು ಒದಗಿಸಿದ ಮಾಹಿತಿಯ ವಿಶ್ಲೇಷಣೆಯು 52,321 ಶಾಲೆಗಳಲ್ಲಿ (ಶೇಕಡಾ 73) ಅಂಗವಿಕಲ ಸ್ನೇಹಿ ಶೌಚಾಲಯಗಳ ಅನುಪಸ್ಥಿತಿ ಇರುವುದನ್ನು ತೋರಿಸಿತು. 51,464 ಶಾಲೆಗಳಲ್ಲಿ (ಶೇಕಡಾ 72) ರಾಂಪ್‌ಗಳನ್ನು ಒದಗಿಸಿದ್ದರೆ, 42,987 ಶಾಲೆಗಳಲ್ಲಿ (ಶೇಕಡಾ 60) ರೇಲಿಂಗ್‌ಗಳನ್ನು ಅಳವಡಿಸಲಾಗಿತ್ತು ಎಂಬುದನ್ನು ತೋರಿಸಿತು. ಜಿಲ್ಲಾವಾರು ವಿಶ್ಲೇಷಣೆಯು ದಕ್ಷಿಣ ಕನ್ನಡದಲ್ಲಿ ಬಹುತೇಕ ಶಾಲೆಗಳಿಗೆ ರಾಂಪ್ ಮತ್ತು ರೇಲಿಂಗ್‌ಗಳು ಮತ್ತು ಅಂಗವಿಕಲ ಸ್ನೇಹಿ ಶೌಚಾಲಯಗಳನ್ನು ಹೊಂದಿದ್ದವು ಹಾಗೂ ಕೊಡಗು, ಮಂಡ್ಯ ಮತ್ತು ಉತ್ತರ ಕನ್ನಡದ ಹೆಚ್ಚಿನ ಶಾಲೆಗಳು ರಾಂಪ್ ಮತ್ತು ರೇಲಿಂಗ್‌ಗಳನ್ನು ಹೊಂದಿದ್ದವು ಎಂಬುದನ್ನು ತೋರಿಸಿತು. ಬಹುತೇಕ ಶಾಲೆಗಳು ಅಂಗವಿಕಲ ಸ್ನೇಹಿಯಾಗಿಲ್ಲದ ಕಾರಣ ಬೆಂಗಳೂರು ನಗರ (ರಾಂಪ್‌ಗಳು/ರೇಲಿಂಗ್‌ಗಳು), ಕೋಲಾರ (ರಾಂಪ್‌ಗಳು/ರೇಲಿಂಗ್‌ಗಳು) ಮತ್ತು ಬೆಳಗಾವಿ, ಹಾಸನ ಮತ್ತು ಕಲಬುರಗಿ (ಶೌಚಾಲಯಗಳು) ಜಿಲ್ಲೆಗಳ ಕಾರ್ಯ ಕ್ಷಮತೆ ಕಳಪೆಯಾಗಿತ್ತು. ಪ್ರವೇಶ ಮೂಲಸೌಕರ್ಯಗಳ ಜಿಲ್ಲಾವಾರು ಲಭ್ಯತೆಯನ್ನು **ಅನುಬಂಧ–4.2**ರಲ್ಲಿ ನೀಡಲಾಗಿದೆ.

### *4.5.2 ವಿಶೇಷ ಶಾಲೆಗಳಲ್ಲಿ ಸುಗಮ ಮೂಲಸೌಕರ್ಯ*

ವಿಶೇಷ ಶಾಲೆಗಳಿಗೆ ಪ್ರವೇಶವನ್ನು ಖಚಿತಪಡಿಸಿಕೊಳ್ಳಲು, ಕೊರತೆಗಳನ್ನು ಗುರುತಿಸಲು ಮತ್ತು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ವಿಶೇಷ ಶಾಲೆಗಳ ಸುಗಮಸಾಧ್ಯತೆಯ ಲೆಕ್ಕಪರಿಶೋಧನೆಯನ್ನು ನಡೆಸಲು ಉನ್ನತ ಮಟ್ಟದಲ್ಲಿ ಯಾವುದೇ ಕಾರ್ಯ ಯೋಜನೆಯನ್ನು ರೂಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ರಾಜ್ಯದ 178 ವಿಶೇಷ ಶಾಲೆಗಳಲ್ಲಿ 90 ಶಾಲೆಗಳಲ್ಲಿ ಸುಗಮ ಸ್ಥಿತಿಗೆ ಸಂಬಂಧಿಸಿದಂತೆ ವಿಶೇಷ ಶಾಲೆಗಳ ಜಂಟಿ ಭೌತಿಕ ತಪಾಸಣೆಯ ಸಂದರ್ಭದಲ್ಲಿ ಪಡೆದ ಮಾಹಿತಿಯ ವಿಶ್ಲೇಷಣೆಯು 69 ಶಾಲೆಗಳಲ್ಲಿ (ಶೇಕಡಾ 77) ಅಂಗವಿಕಲ ಸ್ನೇಹಿ ಶೌಚಾಲಯಗಳ ಅನುಪಸ್ಥಿತಿಯನ್ನು ತೋರಿಸಿತು. 46 ಶಾಲೆಗಳಲ್ಲಿ (ಶೇಕಡಾ 51) ರ‍್ಯಾಂಪ್‌ಗಳನ್ನು ಒದಗಿಸಿದ್ದರೆ, 42 ಶಾಲೆಗಳಲ್ಲಿ (ಶೇಕಡಾ 47) ರೇಲಿಂಗ್‌ಗಳನ್ನು ಅಳವಡಿಸಲಾಗಿತ್ತು (**ಪ್ರದರ್ಶಿಕೆ–4.4**).

**ಪ್ರದರ್ಶಿಕೆ–4.4: ಹ್ಯಾಂಡ್‌ರೇಲ್‌ಗಳೊಂದಿಗೆ ರ‍್ಯಾಂಪ್‌ಗಳು ಮತ್ತು ಅಂಗವಿಕಲ ಸ್ನೇಹಿ ಶೌಚಾಲಯಗಳು**

| | | |
|---|---|---|
|  |   |   |
| ಹ್ಯಾಂಡ್‌ರೇಲ್‌ಗಳೊಂದಿಗೆ ರ‍್ಯಾಂಪ್– ವಿಶ್ವಾಸ್ ಬುದ್ಧಿಮಾಂದ್ಯ ಮಕ್ಕಳ ಶಾಲೆ ಬೀದರ್ | ಹ್ಯಾಂಡ್‌ರೇಲ್‌ಗಳೊಂದಿಗೆ –ಆಶಾ ಕಿರಣ್ ದೃಷ್ಟಿ ವಿಕಲಚೇತನ ಮಕ್ಕಳ ಶಾಲೆ, ಚಿಕ್ಕಮಗಳೂರು | ಅಂಗವಿಕಲ ಸ್ನೇಹಿ ಶೌಚಾಲಯ, ಶ್ರದ್ಧಾಂಜಲಿ ಸಂಯೋಜಿತ ಶಾಲೆ, ಬೆಂಗಳೂರು |

ಆಧಾರ: ಜಂಟಿ ಭೌತಿಕ ಪರಿಶೀಲನೆಯಲ್ಲಿ ತೆಗೆದ ಛಾಯಾಚಿತ್ರಗಳು

ಆಯ್ದ ಜಿಲ್ಲೆಗಳಲ್ಲಿನ ವಿಶೇಷ ಶಾಲೆಗಳ ಜಂಟಿ ಭೌತಿಕ ಪರಿಶೀಲನೆಯು ಒದಗಿಸಿದ ಸೌಕರ್ಯಗಳಲ್ಲಿ ಕೊರತೆಯನ್ನು ತೋರಿಸಿತು ಮತ್ತು **ಅನುಬಂಧ–4.3**ರಲ್ಲಿ ವಿವರಿಸಿದಂತೆ ಅನೇಕ ಶಾಲೆಗಳು ಶೋಚನೀಯ ಸ್ಥಿತಿಯಲ್ಲಿದ್ದವು. ಛಾಯಾಚಿತ್ರಗಳೊಂದಿಗೆ ಕೆಲವು ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ.

***ನಿದರ್ಶನ***

***ಎಸ್‌ಜೆಎಮ್ ದೈಹಿಕ ವಿಕಲಚೇತನರ ವಸತಿ ಶಾಲೆ, ಹಾವೇರಿ***

*ಇಡೀ ಕ್ಯಾಂಪಸ್‌ನಲ್ಲಿ ಶಾಲೆಗೆ ರ‍್ಯಾಂಪ್ ಸೌಲಭ್ಯ ಮತ್ತು ರೇಲಿಂಗ್ ಇರಲಿಲ್ಲ. ತರಗತಿಗಳ ಪ್ರವೇಶದ್ವಾರದಲ್ಲಿ ಕಡಿದಾದ ಮೆಟ್ಟಿಲುಗಳಿದ್ದವು. ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳಿರಲಿಲ್ಲ ಮತ್ತು ತರಗತಿಯಿಂದ ದೂರವಿರುವ ಎರಡು ಶೌಚಾಲಯಗಳು ಮಾತ್ರ ಲಭ್ಯವಿದ್ದವು. ತರಗತಿಯ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಫ್ಯಾನ್ ಮತ್ತು ಸೂಕ್ತವಾದ ಪೀಠೋಪಕರಣಗಳಿರಲಿಲ್ಲ. ವಸತಿ ಉದ್ದೇಶಕ್ಕಾಗಿ (ಹಾಸ್ಟೆಲ್‌ಗಳು) ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಕೊಠಡಿಗಳು ಇರಲಿಲ್ಲ. ಆವರಣದಲ್ಲಿರುವ ಆಶ್ರಮದ ಕಛೇರಿ ಬಳಕೆಗೆ ಮೀಸಲಿದ್ದ ಕೊಠಡಿಗಳನ್ನು ಹಾಸ್ಟೆಲ್ ಕೊಠಡಿಗಳಾಗಿ ಬಳಸಿಕೊಳ್ಳಲಾಗುತ್ತಿತ್ತು. ಮಂಚ, ದಿಂಬು, ಹಾಸಿಗೆ, ಸೊಳ್ಳೆ ಪರದೆಯಂತಹ ಸೌಲಭ್ಯಗಳನ್ನು ಒದಗಿಸಿರಲಿಲ್ಲ.*

**ಪ್ರದರ್ಶಿಕೆ–4.5: ಶಾಲೆಗಳಲ್ಲಿ ಸೌಕರ್ಯಗಳ ಕೊರತೆ**





ಆಧಾರ: ಜಂಟಿ ಭೌತಿಕ ಪರಿಶೀಲನೆ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

***ನಿದರ್ಶನ***

***ಮಹಾಪ್ರಜಾಪತಿ ಎಮ್ಆರ್ ವಿಶೇಷ ವಸತಿ ಶಾಲೆ, ಬೀದರ್***

***ನಿವಾಸಿಗಳ ಸಂಖ್ಯೆ: 56 ಬಾಲಕರು ಮತ್ತು 30 ಬಾಲಕಿಯರು***

*ತರಗತಿಗಳಿಗೆ ಲಗತ್ತಿಸಲಾದ ವಸತಿ ಗೃಹದಲ್ಲಿ ಶಾಲೆಯು ಕಾರ್ಯ ನಿರ್ವಹಿಸುತ್ತಿತ್ತು (ಲೋಹದ ಹಾಳೆಗಳಿಂದ ಮಾಡಿದ ಶೆಡ್). ಲೋಹದ ಹಾಳೆಯ ವಿಭಜಕಗಳಿಂದ ಶೆಡ್‌ಅನ್ನು ವಿಭಜಿಸುವ ಮೂಲಕ ತರಗತಿ ಕೊಠಡಿಗಳನ್ನು ಮಾಡಲಾಗಿತ್ತು. ಮೇಲ್ಛಾವಣಿ ಮತ್ತು ಗೋಡೆಗಳ ನಡುವೆ ವಿಶಾಲವಾದ ಅಂತರವಿರುವುದರಿಂದ, ಭಾರೀ ಮಳೆಯ ಸಮಯದಲ್ಲಿ ಯಾವುದೇ ರಕ್ಷಣೆ ಇರಲಿಲ್ಲ. ಭಾರೀ ಮಳೆಗಾಲ ಮತ್ತು ಬೇಸಿಗೆ ಕಾಲದಲ್ಲಿ ಬೋಧನಾ ಚಟುವಟಿಕೆಗಳನ್ನು ನಡೆಸಲು ಆಗುತ್ತಿರಲಿಲ್ಲ. ಶೌಚಾಲಯದ ಸ್ಥಿತಿ ತುಂಬಾ ಕಳಪೆಯಾಗಿತ್ತು ಮತ್ತು ಶೌಚಾಲಯದ ಬಾಗಿಲುಗಳು ಸಹ ಸರಿಯಾಗಿ ಮುಚ್ಚಿಕೊಳ್ಳುತ್ತಿರಲಿಲ್ಲ.*




*ವಸತಿ ಶಾಲಾ ಕಟ್ಟಡ*



*ಶಾಲಾ ಕೊಠಡಿ*



*ಶೌಚಾಲಯಗಳು*

ಆಧಾರ: ಜಂಟಿ ಭೌತಿಕ ಪರಿಶೀಲನೆ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

ಲೆಕ್ಕಪರಿಶೋಧನೆಯು ತೋರಿಸಿರುವ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು ಎಂದು ನಿರ್ಗಮನ ಸಮ್ಮೇಳನದಲ್ಲಿ ತಿಳಿಸಲಾಯಿತು. ಲೆಕ್ಕಪರಿಶೋಧನೆಯ ನಂತರ ತೆಗೆದುಕೊಂಡ ಕ್ರಮದ ಒಂದು ನಿದರ್ಶನವನ್ನು ಕೆಳಗೆ ನೀಡಲಾಗಿದೆ.

**ನಿದರ್ಶನ**

*ಡಿಸೆಂಬರ್ 2020ರಲ್ಲಿ ಮಕ್ಕಳ ಕೇಂದ್ರಿತ ಶಾಲೆಯ (ಬುದ್ಧಿಮಾಂದ್ಯ ಮಕ್ಕಳ ಜ್ಯೋತಿ ರೆಸಿಡೆನ್ಶಿಯಲ್ ಸ್ಕೂಲ್, ಹಾವೇರಿ) ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ, ಲೆಕ್ಕಪರಿಶೋಧನೆಯು ಅಸಮರ್ಪಕ ಮೂಲ ಸೌಕರ್ಯಗಳನ್ನು ಗಮನಿಸಿತು (ಶಾಲೆಯು ಕೈಗಾರಿಕಾ ಪ್ರದೇಶದಲ್ಲಿ ಸ್ಥಿತವಾಗಿತ್ತು. ಅದರಲ್ಲಿ ಒಂದು ದೊಡ್ಡ ಪ್ರಾಂಗಣವನ್ನು ತರಗತಿಗಳಾಗಿ ಪರಿವರ್ತಿಸಲಾಗಿತ್ತು ಮತ್ತು ಬಾಲಕರು ಮತ್ತು ಬಾಲಕಿಯರಿಗೆ ತಲಾ ಒಂದು ಹಾಸ್ಟೆಲ್ ಕೊಠಡಿಯನ್ನು ಒಳಗೊಂಡಿತ್ತು. ಈ ಹಾಸ್ಟೆಲ್ ಕೈಗಾರಿಕಾ ಪ್ರದೇಶದಲ್ಲಿನ ಕಾರ್ಖಾನೆಗಳಿಗೆ ತಮ್ಮ ಸಾಮಗ್ರಿಗಳನ್ನು ಸಂಗ್ರಹಿಸಲು ಉಗ್ರಾಣ/ಗೋದಾಮು ಆಗಿ ಕಾರ್ಯನಿರ್ವಹಿಸುತ್ತಿತ್ತು) ಶಾಲಾ ಆಡಳಿತ ಮಂಡಳಿಯು ಶಾಲೆಯು ಮೂಲ ಸೌಕರ್ಯಗಳನ್ನು ಸುಧಾರಿಸಲು ಕ್ರಮ ಕೈಗೊಂಡಿತು ಮತ್ತು ಕೆಳಗೆ ತೋರಿಸಿದಂತೆ ಪ್ರಸ್ತುತ ಶಾಲಾ ಕಟ್ಟಡವನ್ನು ಸಂಪೂರ್ಣವಾಗಿ ನವೀಕರಿಸಲಾಗಿದೆ (ಜೂನ್ 2023).*

**ಬುದ್ಧಿಮಾಂದ್ಯ ಮಕ್ಕಳ ಜ್ಯೋತಿ ರೆಸಿಡೆನ್ಶಿಯಲ್ ಸ್ಕೂಲ್, ಹಾವೇರಿ (ಡಿಸೆಂಬರ್ 2020)**








ಆಧಾರ: ಜಂಟಿ ಭೌತಿಕ ಪರಿಶೀಲನೆ ಸಮಯದಲ್ಲಿ ತೆಗೆದ ಛಾಯಾಚಿತ್ರಗಳು

## 4.6 ಅಂಗವಿಕಲ ಮಕ್ಕಳ ಕೇಂದ್ರಿತ (ಸಿಸಿ) ಶಾಲೆಗಳಿಗೆ ಹೋಲಿಸಿದರೆ ಅನುದಾನಿತ ಶಾಲೆಗಳ ಕಳಪೆ ಕಾರ್ಯನಿರ್ವಹಣೆ

ಸರ್ಕಾರಿ ಶಾಲೆಗಳಲ್ಲದೆ, ಸರ್ಕಾರವು ಅನುದಾನಿತ (ಜಿಐಎ) ಶಾಲೆಗಳಿಗೆ ಮತ್ತು ಮಕ್ಕಳ ಕೇಂದ್ರಿತ ಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಅನುದಾನಿತ ಶಾಲೆಗಳು ಮತ್ತು ಮಕ್ಕಳ ಕೇಂದ್ರಿತ ಶಾಲೆಗಳ ನಡುವಿನ ಪ್ರಮುಖ ವ್ಯತ್ಯಾಸವೆಂದರೆ ಅನುದಾನಿತ ಶಾಲೆಗಳಲ್ಲಿ ಸಿಬ್ಬಂದಿಯು ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸದೇ ಸರ್ಕಾರಿ ವೇತನ ಶ್ರೇಣಿಗಳನ್ನು ಪಡೆಯುತ್ತಾರೆ ಆದರೆ ಮಕ್ಕಳ ಕೇಂದ್ರಿತ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ವಸತಿ ಶಾಲೆಯಾಗಿದ್ದರೆ ತಲಾ ₹6,200/6,800ರಂತೆ ಮತ್ತು ವಸತಿಯೇತರ ಶಾಲೆಯಾಗಿದ್ದರೆ ₹5,200/6,000ರಂತೆ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಶಿಕ್ಷಕರು ತಿಂಗಳಿಗೆ ₹13,500–₹21,000ವರೆಗಿನ ಗೌರವ ಸಂಭಾವನೆಯನ್ನು ಪಡೆಯುತ್ತಾರೆ. (ಗೌರವ ಸಂಭಾವನೆಯನ್ನು ಸೆಪ್ಟೆಂಬರ್ 2022ರಿಂದ ಪರಿಷ್ಕರಿಸಲಾಗಿದೆ).

**ನಕ್ಷೆ–4.3**ರಲ್ಲಿ ವಿವರಿಸಿದಂತೆ ಮಕ್ಕಳ ಕೇಂದ್ರಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಹೋಲಿಸಿದರೆ ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದ ಪ್ರವೃತ್ತಿ ಕಡಿಮೆಯಾಗುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಹಾಗೂ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಅನುದಾನ ನೀಡಲಾಗುತ್ತಿರುವ ಮಕ್ಕಳ ಕೇಂದ್ರಿತ ಶಾಲೆಗಳಿಗೆ ಹೋಲಿಸಿದರೆ ಅನುದಾನಿತ ಶಾಲೆಗಳಲ್ಲಿ ಅಧ್ಯಾಪಕರ ಕೊರತೆ ಮತ್ತು ಮೂಲ ಸೌಕರ್ಯಗಳ ಕೊರತೆಯು ವಿದ್ಯಾರ್ಥಿಗಳ ಪ್ರವೇಶದ ಪ್ರವೃತ್ತಿ ಕಡಿಮೆಯಾಗಲು ಪ್ರಮುಖ ಕಾರಣವಾಗಿರಬಹುದು.

**ನಕ್ಷೆ–4.3: ಅನುದಾನಿತ ಶಾಲೆಗಳು ಮತ್ತು ಮಕ್ಕಳ ಕೇಂದ್ರಿತ ಶಾಲೆಗಳು**




ಅನುದಾನಿತ ಶಾಲೆಗಳು ಮತ್ತು ಮಕ್ಕಳ ಕೇಂದ್ರಿತ ಶಾಲೆಗಳ ಮಾನದಂಡಗಳು ಭಿನ್ನ–ಭಿನ್ನವಾಗಿವೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ಆದರೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದರ ಬಗ್ಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಲಿಲ್ಲ.

## 4.7 ದೃಷ್ಟಿ ಮತ್ತು ಶ್ರವಣದೋಷವುಳ್ಳವರಿಗೆ ಉನ್ನತ ಮಾಧ್ಯಮಿಕ ಶಿಕ್ಷಣ ಶಾಲೆಗಳ ಅನುಪಸ್ಥಿತಿ

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ವಿಶೇಷ ಶಾಲೆಗಳು ದೃಷ್ಟಿ ಮತ್ತು ಶ್ರವಣದೋಷವುಳ್ಳವರಿಗೆ ಹತ್ತನೇ ತರಗತಿಯವರೆಗೆ ಶಿಕ್ಷಣವನ್ನು ನೀಡುತ್ತವೆ. ತರುವಾಯ ಈ ವಿದ್ಯಾರ್ಥಿಗಳು ಸಾಮಾನ್ಯ ಶಾಲೆಗಳಲ್ಲಿ (ಈ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸಲು ಯಾವುದೇ ವಿಶೇಷ ಶಿಕ್ಷಕರು ಇರುವುದಿಲ್ಲ) ಶಿಕ್ಷಣ ಪಡೆಯಬೇಕಾಗುತ್ತದೆ ಅಥವಾ ನಿಲ್ಲಿಸಿ ಒಂದು/ಎರಡು ವರ್ಷಗಳ ಅವಧಿಯ ವೃತ್ತಿಪರ ಕೋರ್ಸ್‌ಗಳನ್ನು ಮಾಡಬೇಕಾದ ಅವಶ್ಯಕತೆ ಬರುತ್ತದೆ. 12ನೇ ತರಗತಿಯವರೆಗೆ ಉನ್ನತ ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸಲು ಇಲಾಖೆಯು ಕ್ರಮ ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ ರಾಜ್ಯದಲ್ಲಿ ಓದುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳು ಶಾಲಾ ಶಿಕ್ಷಣ ಮುಗಿದ ನಂತರ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದರು. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## 4.8 ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ

ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 32ರ ಪ್ರಕಾರ, ಎಲ್ಲಾ ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುವ ಇತರ ಉನ್ನತ ಶಿಕ್ಷಣ ಸಂಸ್ಥೆಗಳು ಮಾನದಂಡದ ಅಂಗವಿಕಲ ವ್ಯಕ್ತಿಗಳಿಗೆ ಶೇಕಡಾ ಐದಕ್ಕಿಂತ ಕಡಿಮೆಯಿರದಂತೆ ಸೀಟುಗಳನ್ನು ಮೀಸಲಿಡಬೇಕು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಮಾನದಂಡದ ವಿಕಲಾಂಗ ವ್ಯಕ್ತಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಐದು ವರ್ಷಗಳ ಸಡಿಲಿಕೆಯನ್ನು ನೀಡಬೇಕು

ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಲಭ್ಯವಿರುವ ಒಟ್ಟು ಸೀಟುಗಳ ದತ್ತಾಂಶವನ್ನು ಇಲಾಖೆ ನಿರ್ವಹಿಸಿರಲಿಲ್ಲ ಮತ್ತು ಯಾವುದಾದರೂ ಇದ್ದಲ್ಲಿ ಅಧಿನಿಯಮದ ನಿಬಂಧನೆಗಳಿಗೆ ಅನುಸಾರವಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಅಧಿನಿಯಮದ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಲು ಈ

ಕಾಲೇಜುಗಳಲ್ಲಿ ಯಾವುದೇ ಕಾರ್ಯವಿಧಾನವಿರಲಿಲ್ಲ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## 4.9 ಶಿಕ್ಷಣ ಸೂಚಕಗಳ ಅನುಪಸ್ಥಿತಿ

ಜನನ ನೋಂದಣಿಯಿಂದ ಹಿಡಿದು ಅವನು ಅಥವಾ ಅವಳು ವೃತ್ತಿಪರ ಅರ್ಹತೆಯನ್ನು ಪಡೆಯುವವರೆಗೆ ರಾಜ್ಯದಾದ್ಯಂತ ಪ್ರತಿ ಮಗುವನ್ನು ಪತ್ತೆಹಚ್ಚಲು ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ಸಿಸ್ಟಮ್‌ಅನ್ನು (ಎಸ್‌ಎಟಿಎಸ್) ಶಿಕ್ಷಣ ಇಲಾಖೆಯು ಪರಿಚಯಿಸಿತು. "ಶಾಲೆಯಲ್ಲಿರುವ ಪ್ರತಿ ಮಗು ಚೆನ್ನಾಗಿ ಕಲಿಯುವುದು" ಎಂಬ ನೀತಿಯ ಗುರಿಯ ಪ್ರಕಾರ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಶಾಲೆಗೆ ಹೋಗುವ ವಯಸ್ಸಿನ ಎಲ್ಲಾ ಮಕ್ಕಳ ದಾಖಲಾತಿಯನ್ನು ಪತ್ತೆಹಚ್ಚುವ ಅವಶ್ಯಕತೆಯಿದೆ.

ವಿಶೇಷ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಮಗ್ರ ದತ್ತಸಂಚಯವನ್ನು ಹೊಂದಲು ಇಲಾಖೆಯು ಎಸ್‌ಎಟಿಎಸ್‌ಅನ್ನು ಅಳವಡಿಸಿಕೊಂಡಿರಲೂ ಇಲ್ಲ ಅಥವಾ ಅಂತಹ ಯಾವುದೇ ರೀತಿಯ ಕಾರ್ಯವಿಧಾನವನ್ನು ಹೊರತಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿಶೇಷ ಶಾಲೆಗಳಿಗೆ ಸಂಬಂಧಿಸಿದಂತೆ ವಿವಿಧ ಶಿಕ್ಷಣ ಸೂಚಕಗಳ[7] ಕುರಿತು ಯಾವುದೇ ದತ್ತಾಂಶ ಇರಲಿಲ್ಲ. ಇದು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಸರ್ಕಾರದ ಆಯವ್ಯಯದ (ಆಸ್ತಿ ನಿರ್ವಹಣೆ) ಸಾಮಾಜಿಕ ವೆಚ್ಚದ ಲಾಭವನ್ನು ಪತ್ತೆ ಹಚ್ಚದಿರುವುದಲ್ಲಿ ಪರಿಣಮಿಸಿತು. ಈ ಸೂಚಕಗಳ ಅನುಪಸ್ಥಿತಿಯು ಶಾಲೆಯಿಂದ ಹೊರಗುಳಿಯುವ ನಿರ್ದಿಷ್ಟ ಕಾರಣಗಳನ್ನು ವಿಶ್ಲೇಷಿಸುವ ಹಾಗೂ ಹೊರಗುಳಿಯುವ ದರವನ್ನು ಕಡಿಮೆ ಮಾಡಲು ಸೂಕ್ತವಾದ ಮಧ್ಯಸ್ಥಿಕೆ ತಂತ್ರವನ್ನು ವಿನ್ಯಾಸಗೊಳಿಸುವ ಅವಕಾಶದಿಂದ ವಂಚಿತವಾಗಿಸುತ್ತದೆ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

**ಶಿಫಾರಸು-6: ಅಂಗವಿಕಲರ ಒಟ್ಟಾರೆ ಸುಧಾರಣೆಗಾಗಿ ಎಲ್ಲಾ ಸಂಸ್ಥೆಗಳಲ್ಲಿ ಶ್ರವಣ ಸಾಧನಗಳು, ಆಡಿಯೋ ಪುಸ್ತಕಗಳು ಮತ್ತು ಸಲಕರಣೆಗಳ ಲಭ್ಯತೆಯನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳುವ ಅಗತ್ಯತೆಯಿದೆ.**

[7] ಒಟ್ಟು ದಾಖಲಾತಿ ಅನುಪಾತ, ನಿವ್ವಳ ದಾಖಲಾತಿ ಅನುಪಾತ, ಧಾರಣ, ಪರಿವರ್ತನೆ ದರ, ಸರಾಸರಿ ವಾರ್ಷಿಕ ಡ್ರಾಪ್ ಔಟ್, ಬಡ್ತಿ ದರ, ಲಿಂಗ ಸಮಾನತೆ ಸೂಚ್ಯಂಕ, ಮಂಜೂರಾದ ಹುದ್ದೆಗಳಿಗೆ ವಿದ್ಯಾರ್ಥಿ-ಶಿಕ್ಷಕರ ಅನುಪಾತ ಮತ್ತು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳಿಗೆ ವಿದ್ಯಾರ್ಥಿ-ಶಿಕ್ಷಕರ ಅನುಪಾತ.

# ಅಧ್ಯಾಯ–V
# ಕೌಶಲ್ಯಾಭಿವೃದ್ಧಿ, ಉದ್ಯೋಗ ಮತ್ತು ಸಾಮಾಜಿಕ ಭದ್ರತೆ

# ಅಧ್ಯಾಯ–V: ಕೌಶಲ್ಯಾಭಿವೃದ್ಧಿ, ಉದ್ಯೋಗ ಮತ್ತು ಸಾಮಾಜಿಕ ಭದ್ರತೆ

*ಅಂಗವಿಕಲ ವ್ಯಕ್ತಿಗಳಿಗೆ ಸುರಕ್ಷಿತ ಜೀವನೋಪಾಯಕ್ಕೆ ಅನುವು ಮಾಡಿಕೊಡುವ ಕೌಶಲ್ಯಗಳನ್ನು ನೀಡಲು ಅಗತ್ಯವಿರುವ ತಾಂತ್ರಿಕ ತರಬೇತಿ ಸಂಸ್ಥೆಗಳನ್ನು ಸರ್ಕಾರ ಇನ್ನೂ ಸ್ಥಾಪಿಸಿರಲಿಲ್ಲ. ಅನಾಥ ಮಕ್ಕಳು ಮತ್ತು ನಿರ್ಗತಿಕ ಅಂಗವಿಕಲರಿಗಾಗಿ ಸಮುದಾಯ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿರಲಿಲ್ಲ ಮತ್ತು ಅಂಗವಿಕಲರ ಕಲ್ಯಾಣಕ್ಕಾಗಿ ವಿನ್ಯಾಸಗೊಳಿಸಲಾದ ಅನೇಕ ಕೇಂದ್ರ ವಲಯದ ಯೋಜನೆಗಳನ್ನು ಕಾರ್ಯಗತ ಗೊಳಿಸಿರಲಿಲ್ಲ. ಪರಿಷ್ಕೃತ ಅಧಿನಿಯಮ ಮತ್ತು ನಿಯಮಗಳ ನಿಬಂಧನೆಗಳ ಬಗ್ಗೆ ಅರಿವು ಮತ್ತು ಪ್ರಚಾರವು ಅಸಮರ್ಪಕವಾಗಿರುವುದು ಅವುಗಳ ಅನುಷ್ಠಾನವಾಗದಿರುವಲ್ಲಿ ಪರಿಣಮಿಸಿತು. ತತ್ಪರಿಣಾಮವಾಗಿ, ಅನೇಕ ಅಂಗವಿಕಲ ವ್ಯಕ್ತಿಗಳು ತಮ್ಮ ಹಕ್ಕುಗಳಿಗಾಗಿ ಕಾನೂನು ಮೊರೆ ಹೋಗಬೇಕಾಯಿತು. ಪರೀಕ್ಷಾ-ತನಿಖೆ ನಡೆಸಿದ ಅನುಷ್ಠಾನಗೊಳಿಸಿದ ಕೆಲವು ಯೋಜನೆಗಳಲ್ಲಿ ನ್ಯೂನತೆಗಳಿದ್ದವು.*

ಎಲ್ಲಾ ವಯಸ್ಸಿನ ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ಅರಿತುಕೊಳ್ಳುವಲ್ಲಿ ಸಾಮಾಜಿಕ ರಕ್ಷಣೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಉತ್ತಮ ಜೀವನಮಟ್ಟವನ್ನು ಒದಗಿಸುವುದು, ಸಾಕಷ್ಟು ಆದಾಯ ಭದ್ರತೆ ನೀಡುವುದು ಅವರಿಗೆ ಬಡತನ ಮತ್ತು ದುರ್ಬಲತೆಯ ಮಟ್ಟವನ್ನು ಕಡಿಮೆ ಮಾಡುತ್ತವೆ. ಅಂಗವಿಕಲ ವ್ಯಕ್ತಿಗಳಿಗೆ ಜೀವನೋಪಾಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕೌಶಲ್ಯದ ಅಗತ್ಯವಿದೆ. ಈ ಕೌಶಲ್ಯಗಳನ್ನು ಶಿಕ್ಷಣದ ಮೂಲಕ ಪಡೆದುಕೊಳ್ಳುವ ಮೂಲ ಕೌಶಲ್ಯಗಳು, ನಿರ್ದಿಷ್ಟ ಚಟುವಟಿಕೆ ಅಥವಾ ಕಾರ್ಯವನ್ನು ಕೈಗೊಳ್ಳಲು ವೃತ್ತಿಪರ ಕೌಶಲ್ಯಗಳು ಮತ್ತು ಸ್ವಯಂ ಉದ್ಯೋಗದಲ್ಲಿ ಯಶಸ್ವಿಯಾಗಲು ವ್ಯಾಪಾರ ಕೌಶಲ್ಯಗಳು ಎಂದು ವರ್ಗೀಕರಿಸಬಹುದು.

## 5.1 ಅಂಗವಿಕಲ ವ್ಯಕ್ತಿಗಳ ಕೌಶಲ್ಯಾಭಿವೃದ್ಧಿ

ಅಂಗವಿಕಲರಿಗೆ ವೃತ್ತಿಪರ ತರಬೇತಿ ನೀಡಲು ಮತ್ತು ಅವರ ಉದ್ಯೋಗ ಕೌಶಲ್ಯವನ್ನು ಸುಧಾರಿಸಲು ಮೈಸೂರಿನ ರಾಷ್ಟ್ರೀಯ ಅಂಧರ ಸಂಘದ ವಸತಿರಹಿತ ಕೈಗಾರಿಕಾ ತರಬೇತಿ ಸಂಸ್ಥೆ, ಬೆಂಗಳೂರಿನ ನ್ಯಾಷನಲ್ ಅಸೋಸಿಯೇಶನ್ ಫಾರ್ ಬ್ಲೈಂಡ್ ಸಂಸ್ಥೆಯ ತಾಂತ್ರಿಕ ತರಬೇತಿ ಸಂಸ್ಥೆ ಹಾಗೂ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸ್ಎಬಿಲಿಟೀಸ್ (ಎಪಿಡಿ) ಮುಂತಾದ ಸಂಸ್ಥೆಗಳಿಗೆ ವೃತ್ತಿಪರ ತರಬೇತಿ ನೀಡಲು ಸರ್ಕಾರ ಅನುದಾನವನ್ನು ನೀಡುತ್ತಿದೆ. ಈ ಸಂಸ್ಥೆಗಳು ರಾಜ್ಯ ಆಯವ್ಯಯದ ಶೇಕಡಾ 100ರಷ್ಟು ಹಣಕಾಸಿನ ನೆರವಿನೊಂದಿಗೆ ಕಾರ್ಯ ನಿರ್ವಹಿಸುತ್ತಿವೆ (ಜಿಐಎ ಕೋಡ್ 1982ರ ಅಡಿಯಲ್ಲಿ). ತಾಂತ್ರಿಕ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲಿನ ಲೆಕ್ಕಪರಿಶೋಧನಾ ಅವಲೋಕನಗಳನ್ನು ಈ ಅಧ್ಯಾಯದಲ್ಲಿ ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *5.1.1 ಮೈಸೂರಿನ ರಾಷ್ಟ್ರೀಯ ಅಂಧರ ಸಂಘದ ವಸತಿರಹಿತ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಮಾರ್ಗಸೂಚಿಗಳನ್ನು ಅನುಸರಿಸದಿರುವುದು*

ದೈಹಿಕ ಅಂಗವಿಕಲರು ಮತ್ತು ಬುದ್ಧಿಮಾಂದ್ಯ ಮಕ್ಕಳಿಗಾಗಿ ಸಹಾಯನುದಾನ ಯೋಜನೆಯಡಿಯಲ್ಲಿ ಮೈಸೂರಿನಲ್ಲಿ ರಾಷ್ಟ್ರೀಯ ಅಂಧರ ಸಂಘ (ಎನ್ಎಬಿ) ಅಂಧರಿಗಾಗಿ ವಸತಿರಹಿತ ಕೈಗಾರಿಕಾ ತರಬೇತಿ ಸಂಸ್ಥೆಯನ್ನು (ಐಟಿಐ) ಪ್ರಾರಂಭಿಸಲು ರಾಜ್ಯ ಸರ್ಕಾರವು ಅನುಮತಿ ನೀಡಿತು (ಡಿಸೆಂಬರ್ 1985). ಆರಂಭದಲ್ಲಿ ಅಂಧ ವಿದ್ಯಾರ್ಥಿಗಳಿಗಾಗಿ ಸ್ಥಾಪಿಸಲಾದ ಸಂಸ್ಥೆಯು ಈಗ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೂ ಸಹ ತರಬೇತಿ ನೀಡುತ್ತಿದೆ.

ದೃಷ್ಟಿ ಮತ್ತು ಶ್ರವಣದೋಷವುಳ್ಳವರಿಗೆ ಕಲಿಸಲು ಅಗತ್ಯವಿರುವ ಬ್ರೈಲ್ ಕೌಶಲ್ಯ ಅಥವಾ ಸಂಕೇತ ಭಾಷೆಗಳ ವಿದ್ಯಾರ್ಹತೆಯನ್ನು ಬೋಧನಾ ಅಧ್ಯಾಪಕರು ಹೊಂದಿರಲಿಲ್ಲ ಎಂಬುದನ್ನು ದಾಖಲೆಗಳು ಸೂಚಿಸಿದವು. ಶಿಕ್ಷಕರು ಅನುಭವದ ಮೂಲಕ ತರಬೇತಿಯನ್ನು ನೀಡುತ್ತಿದ್ದಾರೆ ಎಂದು ಸಂಸ್ಥೆಯು ತಿಳಿಸಿತು (ಜನವರಿ 2021). 1995ರಿಂದ ನಿರ್ದೇಶಕರ ಹುದ್ದೆ ಖಾಲಿ ಇದ್ದು, ಸಂಸ್ಥೆಯನ್ನು ವ್ಯವಸ್ಥಾಪಕರು ನಿರ್ವಹಿಸುತ್ತಿರುವುದನ್ನು ಗಮನಿಸಲಾಯಿತು.ಸಂಸ್ಥೆಯ ವಿಷಾದನೀಯ ಸ್ಥಿತಿಯು ಮಕ್ಕಳ ಹಿತಾಸಕ್ತಿಗೆ ಹಾನಿಕಾರಕವಾಗಿದೆ.

### *5.1.2 ನ್ಯಾಷನಲ್ ಅಸೋಸಿಯೇಷನ್ ಫಾರ್ ಬ್ಲೈಂಡ್, ಬೆಂಗಳೂರು ನಡೆಸುತ್ತಿರುವ ತಾಂತ್ರಿಕ ತರಬೇತಿ ಸಂಸ್ಥೆಯ ಕೆಲಸ*

1982ರಲ್ಲಿ ನ್ಯಾಶನಲ್ ಅಸೋಸಿಯೇಶನ್ ಫಾರ್ ಬ್ಲೈಂಡ್ ಸ್ಥಾಪಿಸಿದ ತಾಂತ್ರಿಕ ತರಬೇತಿ ಸಂಸ್ಥೆಯು ಐಟಿಐ ಸಂಬಂಧಿತ ಕೋರ್ಸ್‌ಗಳನ್ನು ನಡೆಸಲು 1987 ರಲ್ಲಿ ಸ್ಟೇಟ್ ಕೌನ್ಸಿಲ್ ಆಫ್ ವೊಕೇಶನಲ್ ಟ್ರೈನಿಂಗ್‌ನಿಂದ ಅಂಗಸಂಸ್ಥೆಯನ್ನು ನೀಡಿತು. ಎಲ್ಲಾ ಜಿಐಎ ಬೋಧಕ ಸಿಬ್ಬಂದಿ 2015–16 ರ ವೇಳೆಗೆ ನಿವೃತ್ತರಾದ ಕಾರಣ ಸಂಸ್ಥೆಯು ಐಟಿಐ ಕೋರ್ಸ್‌ಗಳನ್ನು ನಡೆಸಿಲ್ಲ. ಸಂಸ್ಥೆಯು ಒದಗಿಸಿದ ಮಾಹಿತಿಯ ಪ್ರಕಾರ, ಇದು ಹೊರಗುತ್ತಿಗೆ ಸಿಬ್ಬಂದಿ ಮತ್ತು ಅಟೆಂಡರ್ ಮೂಲಕ 2017–18 ಮತ್ತು 2018–19 ರ ಅವಧಿಯಲ್ಲಿ ಆರು ತಿಂಗಳ ಅವಧಿಯ (ಫೌಂಡೇಶನ್ ಕೋರ್ಸ್) ತಲಾ ಒಂದು ಕೋರ್ಸ್ ಅನ್ನು ನಡೆಸಿದೆ. 2019–20 ರಲ್ಲಿ, ಎರಡು ತಿಂಗಳ ಅವಧಿಯ (ಗಾರ್ಮೆಂಟ್ ಕೋರ್ಸ್) ಐದು ಕೋರ್ಸ್‌ಗಳನ್ನು ನಡೆಸಲಾಯಿತು .

ಈ ಕೋರ್ಸ್‌ಗಳನ್ನು ನಡೆಸಲು ಅಗತ್ಯ ಅನುಮತಿಯನ್ನು ಸರ್ಕಾರದಿಂದ ಪಡೆದಿಲ್ಲ ಎಂದು ಆಡಿಟ್ ಗಮನಿಸಿದೆ. ಸಂಸ್ಥೆಯು 2016–17 ರಿಂದ 2021–22 ರ ಅವಧಿಯಲ್ಲಿ ₹ 25.11 ಲಕ್ಷ ಅನುದಾನವನ್ನು ಪಡೆದಿದ್ದು, ಇದರಿಂದಾಗಿ ಹೆಚ್ಚಿನ ಫಲಪ್ರದವಾಗದಿರುವುದು ಗಮನಕ್ಕೆ ಬಂದಿದೆ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

### *5.1.3 ತರಬೇತಿ ಕೇಂದ್ರಗಳ ಸ್ಥಾಪನೆಯಾಗದಿರುವುದು*

ರಾಜ್ಯ ಸರ್ಕಾರವು (ಸೆಪ್ಟೆಂಬರ್ 2001) 2002–03 ವರ್ಷದಲ್ಲಿ ಎರಡು ವಿಶೇಷ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ತನ್ನ ಅನುಮೋದನೆಯನ್ನು ನೀಡಿದೆ, ಅಂದರೆ ಸಮುದಾಯ ಆಧಾರಿತ ಪುನರ್ವಸತಿ (ಸಿಬಿಆರ್) ಕಾರ್ಮಿಕರ ತರಬೇತಿ ಕೇಂದ್ರವು ಜಿಓಐ ಮತ್ತು ವೃತ್ತಿಪರ ವಿಶೇಷ ಶಿಕ್ಷಕರ ತರಬೇತಿ ಕೇಂದ್ರದಿಂದ ಹಣಕಾಸಿನ ನೆರವಿನೊಂದಿಗೆ ಎನ್‌ಐಇಪಿಐಡಿ, ಸಿಕಂದರಾಬಾದ್‌ನ ನೆರವಿನೊಂದಿಗೆ ಎಮ್‌ಆರ್ ಮಕ್ಕಳಿಗೆ ತರಬೇತಿ. ಸಂಬಂಧಿತ ಜ್ಞಾನ, ಕೌಶಲ್ಯ ಮತ್ತು ವರ್ತನೆಗಳನ್ನು ಸಕ್ರಿಯವಾಗಿ ಉತ್ತೇಜಿಸುವ ಮತ್ತು ಸ್ವಾಧೀನಪಡಿಸಿಕೊಳ್ಳುವ ಮೂಲಕ ಅಂಗವಿಕಲರಿಗೆ ಕೆಲಸದ ಅವಕಾಶಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುವುದು ಸಿಬಿಆರ್ ನ ಪಾತ್ರವಾಗಿದೆ.

ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು 18 ವರ್ಷಗಳಾದರೂ ಈ ಸಂಸ್ಥೆಗಳನ್ನು ಸ್ಥಾಪಿಸಲು ಇಲಾಖೆ ಕ್ರಮಕೈಗೊಂಡಿಲ್ಲ ಎಂದು ಲೆಕ್ಕ ಪರಿಶೋಧನೆ ಗಮನಿಸಿದೆ. ಇದರ ಪರಿಣಾಮವಾಗಿ, ಅಂಗವಿಕಲರಿಗೆ ವೃತ್ತಿಪರ ಶಿಕ್ಷಣದ ಉಪಕ್ರಮಗಳನ್ನು ಖಾತ್ರಿಪಡಿಸುವ ಅನುಕೂಲಕರ ಪರಿಸ್ಥಿತಿಗಳನ್ನು ಸೃಷ್ಟಿಸಲು ವಿಫಲವಾಗಿದೆ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## 5.2 ಅಂಗವಿಕಲರಿಗೆ ಉದ್ಯೋಗ

ಭಾರತ ಸರ್ಕಾರವು ಗುರುತಿಸಲ್ಪಟ್ಟ ಹುದ್ದೆಗಳನ್ನು ಕಾಯ್ದಿರಿಸಿದೆ ಮತ್ತು ಉದ್ಯೋಗ ಆಕಾಂಕ್ಷಿಗಳಿಗೆ ನೇಮಕಾತಿಗಳಿಗಾಗಿ ತಮ್ಮನ್ನು ನೋಂದಾಯಿಸಿಕೊಳ್ಳಲು ವೇದಿಕೆಯನ್ನು ಒದಗಿಸಲು ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳನ್ನು ಸಹ ಸ್ಥಾಪಿಸಿದೆ. ಜೊತೆಗೆ, ಆರ್‌ಪಿಡಬ್ಲ್ಯುಡಿ ಕಾಯಿದೆಯು ಅಂಗವಿಕಲರಿಗೆ ಅವಕಾಶಗಳನ್ನು ನೀಡುವ ಖಾಸಗಿ ವಲಯದ ಉದ್ಯೋಗದಾತರಿಗೆ ಪ್ರೋತ್ಸಾಹವನ್ನು ಒದಗಿಸುತ್ತದೆ. ಅಲ್ಲದೆ ಭಾರತ ಸರ್ಕಾರವು ಅಂಗವಿಕಲರಿಗೆ ಅವರ ಕೌಶಲ್ಯ ಉನ್ನತೀಕರಣಕ್ಕಾಗಿ ಹಣಕಾಸಿನ ನೆರವು ನೀಡುತ್ತದೆ ಮತ್ತು ಸ್ವಯಂ-ಉದ್ಯೋಗ ಅವಕಾಶಗಳಿಗಾಗಿ ರಿಯಾಯಿತಿ ದರದಲ್ಲಿ ಸಾಲವನ್ನು ಕೂಡ ಒದಗಿಸುತ್ತದೆ.

2017-18 ರಿಂದ 2022-23ರ ಅವಧಿಯಲ್ಲಿ ವಿಕಲಚೇತನರ ಕಾರ್ಯಕ್ರಮದ ಪ್ಲೇಸ್‌ಮೆಂಟ್ ಸೆಲ್‌ಗಾಗಿ ಬಿಡುಗಡೆ ಮಾಡಲಾದ ₹2.64 ಕೋಟಿ ಮೊತ್ತಕ್ಕೆ ಹೋಲಿಸಿದರೆ ₹0.32 ಕೋಟಿ ಖರ್ಚು ಮಾಡಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ, ಇದು ಇಲಾಖೆಯು ಅಂಗವಿಕಲರಿಗೆ ಉದ್ಯೋಗ ಕಾರ್ಯಕ್ರಮಗಳಿಗೆ ಕನಿಷ್ಠ ಆದ್ಯತೆ ನೀಡಿದೆ ಎಂದು ಸೂಚಿಸುತ್ತದೆ.

ಸರ್ಕಾರಿ ಉದ್ಯೋಗಗಳಲ್ಲಿ ಅಂಗವಿಕಲರಿಗೆ ಉದ್ಯೋಗಗಳನ್ನು ಒದಗಿಸುವಲ್ಲಿ ಆಡಿಟ್ ಅವಲೋಕನಗಳು, ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳ ಕೆಲಸ ಮತ್ತು ಕಾಯಿದೆಯ ನಿಬಂಧನೆಗಳ ಅನುಸರಣೆಯನ್ನು ಕೆಳಗೆ ಚರ್ಚಿಸಲಾಗಿದೆ.

### *5.2.1 ಮೀಸಲಾತಿಯ ಅಧಿಸೂಚನೆ ಮತ್ತು ಹುದ್ದೆಗಳ ಗುರುತಿಸುವಿಕೆಯಲ್ಲಿ ವಿಳಂಬ*

ಆರ್‌ಪಿಡಬ್ಲ್ಯುಡಿ ಕಾಯಿದೆಯ ಪರಿಚ್ಛೇದ 34ರ ಪ್ರಕಾರ ಪ್ರತಿಯೊಂದು ಸಮುಚಿತ ಸರ್ಕಾರವು, ಸರ್ಕಾರಿ ಸಂಸ್ಥೆಯಲ್ಲಿ ಹುದ್ದೆಗಳ ಪ್ರತಿಯೊಂದು ಗುಂಪಿನಲ್ಲಿನ ಕೇಡರ್ ಸಂಖ್ಯಾಬಲದಲ್ಲಿ ಇರುವ ಖಾಲಿಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ನಾಲ್ಕಕ್ಕಿಂತ ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಾನದಂಡಿತ ಅಂಗವಿಕಲ ವ್ಯಕ್ತಿಗಳಿಂದ ಭರ್ತಿ ಮಾಡಬೇಕು. ಇದಲ್ಲದೆ, ಪರಿಚ್ಛೇದ 33ರ ಪ್ರಕಾರ, ಪರಿಚ್ಛೇದ 34ರ ನಿಬಂಧನೆಗಳಿಗೆ ಅನುಗುಣವಾಗಿ ಮೀಸಲಿಟ್ಟಿರುವ ಖಾಲಿ ಹುದ್ದೆಗಳಿಗೆ ಮಾನದಂಡಿತ ಅಂಗವಿಕಲ ವ್ಯಕ್ತಿಗಳ ಆಯಾಯಾ ಪ್ರವರ್ಗದವರು ಸಂಸ್ಥೆಗಳಲ್ಲಿ ಧಾರಣ ಮಾಡಬಹುದಾದ ಹುದ್ದೆಗಳನ್ನು ಗುರುತಿಸತಕ್ಕದ್ದು ಮತ್ತು ಅಂತಹ ಹುದ್ದೆಗಳನ್ನು ಗುರುತಿಸುವುದಕ್ಕಾಗಿ ಮಾನದಂಡಕ್ಕನುಗುಣವಾಗಿರುವ ಅಂಗವಿಕಲತೆಯುಳ್ಳ ವ್ಯಕ್ತಿಗಳ ಪ್ರತಿನಿಧಿ ಸಹಿತ ಒಂದು ತಜ್ಞ ಸಮಿತಿಯನ್ನು ರಚಿಸಬೇಕುನ ಹಾಗೂ ಗುರುತಿಸಿದ ಹುದ್ದೆಗಳ ಬಗ್ಗೆ ಮೂರು ವರ್ಷಗಳನ್ನು ಮೀರದ ಮಧ್ಯಂತರ ಅವಧಿಯಲ್ಲಿ ನಿಯಮ ಪುನರಾವಲೋಕನ ಮಾಡಬೇಕು.

ರಾಜ್ಯ ಸರ್ಕಾರವು ಮಾನದಂಡಿತ ಅಂಗವಿಕಲ ವ್ಯಕ್ತಿಗಳಿಂದ ಭರ್ತಿ ಮಾಡಲು ಉದ್ದೇಶಿಸಲಾದ ಹುದ್ದೆಗಳ ಪ್ರತಿಯೊಂದು ಗುಂಪಿನಲ್ಲಿರುವ ಪ್ರವರ್ಗದಲ್ಲಿ ಒಟ್ಟು ಖಾಲಿ ಹುದ್ದೆಗಳ (ಗುಂಪು ಎ ಮತ್ತು ಬಿ) ಶೇಕಡಾ ನಾಲ್ಕಕ್ಕಿಂತ ಕಡಿಮೆಯಿಲ್ಲದ ಮತ್ತು ಒಟ್ಟು ಖಾಲಿ ಹುದ್ದೆಗಳ (ಗುಂಪು ಸಿ ಮತ್ತು ಡಿ) ಶೇಕಡಾ ಐದಕ್ಕಿಂತ ಕಡಿಮೆಯಿಲ್ಲದ ಕಡ್ಡಾಯ ನೇಮಕಾತಿಯ ವಿಶೇಷ ಮೀಸಲಾತಿ ನೀತಿಯನ್ನು ಆರ್‌ಪಿಡಬ್ಲ್ಯುಡಿ ಅಧಿನಿಯಮದ ಅನುಷ್ಠಾನದ ನಾಲ್ಕು ವರ್ಷಗಳ ನಂತರ ಸೆಪ್ಟೆಂಬರ್ 2020ರಲ್ಲಿ ಜಾರಿಮಾಡಿತು. ಮಾನದಂಡಿತ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳು ನಿರ್ವಹಿಸಬೇಕಾದ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳನ್ನು ಗುರುತಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿದ್ದರೂ (ನವೆಂಬರ್ 2017), ಸಮಿತಿಯು ತನ್ನ ವರದಿಯನ್ನು ಇನ್ನೂ ಸಲ್ಲಿಸಲಿಲ್ಲ (ಡಿಸೆಂಬರ್ 2022).

ಅಂಗವಿಕಲರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಲು ಸಮಿತಿಯನ್ನು ರಚಿಸಲಾಗಿದೆ ಮತ್ತು ರಾಜ್ಯದ ಪ್ರತಿಯೊಂದು ಇಲಾಖೆಯು ಅಂಗವಿಕಲ ವ್ಯಕ್ತಿಗಳಿಗೆ ನಿರ್ದಿಷ್ಟ ಹುದ್ದೆಗಳನ್ನು ಗುರುತಿಸಲು ಮತ್ತು ಅಧಿಸೂಚನೆಯನ್ನು ಹೊರಡಿಸಲು ಈ ಸಮಿತಿಗೆ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರ ತಿಳಿಸಿತು. ಕೋರಿಕೆಯ ಆಧಾರದ ಮೇಲೆ, ಸಮಿತಿಯು ರೋಸ್ಟರ್ ವ್ಯವಸ್ಥೆಯ ಪ್ರಕಾರ ಹುದ್ದೆಯನ್ನು ಭರ್ತಿ ಮಾಡಲು ಗುರುತಿಸಿ ಸಂಬಂಧಿಸಿದ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸುತ್ತದೆ.

ವರದಿ ಸಲ್ಲಿಕೆಯಲ್ಲಿನ ವಿಳಂಬವು ವಿವಿಧ ಇಲಾಖೆಗಳಲ್ಲಿನ ಹುದ್ದೆಗಳನ್ನು ಗುರುತಿಸದಿರುವಲ್ಲಿ ಪರಿಣಮಿಸಿತು ಅರ್ಹ ಅಭ್ಯರ್ಥಿಗಳಿಗೆ ಸೂಕ್ತ ಅವಕಾಶವನ್ನು ನಿರಾಕರಿಸಿದಂತಾಯಿತು.

### *5.2.2 ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಅನುಷ್ಠಾನಗೊಳಿಸದಿರುವುದು*

ಗೌರವಾನ್ವಿತ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ (2008ರ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 521ರಲ್ಲಿ) (ಜೂನ್ 2016) ಒಂದು ಬಾರಿ ಹುದ್ದೆಯನ್ನು ಗುರುತಿಸಿದ ನಂತರ, ಹುದ್ದೆಯನ್ನು ಭರ್ತಿ ಮಾಡಲು ರಾಜ್ಯವು ಅಳವಡಿಸಿಕೊಂಡ ನೇಮಕಾತಿ ವಿಧಾನವನ್ನು ಪರಿಗಣಿಸದೆ ಅದನ್ನು ಅಂಗವಿಕಲ ವ್ಯಕ್ತಿಗಳಿಗೆ ಮೀಸಲಿಡಬೇಕು ಎಂದು ಒತ್ತಿ ಹೇಳಿದೆ (ಜೂನ್ 2016). ಈ ತೀರ್ಪಿನ ಪರಿಣಾಮವಾಗಿ ಆಂಧ್ರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ಮಾಡಿದಂತೆ ಪರಿಷ್ಕೃತ ಆದೇಶಗಳನ್ನು ಹೊರಡಿಸಲು ರಾಜ್ಯ ಆಯುಕ್ತರು (ಫೆಬ್ರವರಿ 2020) ವಿನಂತಿಸಿದರು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇನ್ನೂ ಕ್ರಮ ಕೈಗೊಳ್ಳಬೇಕಿದೆ. ತತ್ಪರಿಣಾಮವಾಗಿ ರಾಜ್ಯದಲ್ಲಿ ಬಡ್ತಿಯಲ್ಲಿ ಮೀಸಲಾತಿ ಜಾರಿಯಾಗಿಲ್ಲ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

### *5.2.3 ವಿಶೇಷ ಉದ್ಯೋಗ ವಿನಿಮಯ ಕೇಂದ್ರ*

ಆರ್‌ಪಿಡಬ್ಲ್ಯುಡಿ ಅಧಿನಿಯಮ, 2016ರ ಪರಿಚ್ಛೇದ 36ರ ಪ್ರಕಾರ, ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿಗದಿಪಡಿಸಿದಂತ ದಿನಾಂಕದಿಂದ ಪ್ರತಿಯೊಂದು ಸಂಸ್ಥೆಯ ಉದ್ಯೋಗದಾತನು ಮಾನದಂಡಿತ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗಾಗಿ ಗೊತ್ತುಪಡಿಸಿದ ಖಾಲಿ ಸ್ಥಾನಗಳನ್ನು ಅಥವಾ ಖಾಲಿ ಆಗಲಿರುವ ಸ್ಥಾನಗಳನ್ನು ಆ ಸಂಸ್ಥೆಯಲ್ಲಿ ಖಾಲಿ ಇರುವ ಸ್ಥಾನಗಳು ಕೇಂದ್ರ ಸರ್ಕಾರವು ನಿಯಮಿಸಿದಂಥ ಮಾಹಿತಿಯನ್ನು ಅಥವಾ ವಿವರಪಟ್ಟಿಕೆಯನ್ನು ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂತಹ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ (ಎಸ್‌ಇಇ) ತಿಳಿಸುವಂತೆ ಅಗತ್ಯಪಡಿಸತಕ್ಕದ್ದು ಹಾಗೂ ಆ ಸಂಸ್ಥೆಯು ಆ ತರುವಾಯ ಅಂತಹ ಕೋರಿಕೆಯನ್ನು ಪಾಲಿಸತಕ್ಕದ್ದು.

ಬಹಳ ಕಡಿಮೆ ಸಂಖ್ಯೆಯ ಅಂಗವಿಕಲರು ಎಸ್‌ಇಇಗಳ ಮೂಲಕ ಉದ್ಯೋಗ ಪಡೆಯುತ್ತಿದ್ದರಿಂದ ರಾಜ್ಯ ಸರ್ಕಾರವು ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿರುವ ಎಸ್‌ಇಇಗಳನ್ನು ಮುಚ್ಚಲು ನಿರ್ಧರಿಸಿತು (ಫೆಬ್ರವರಿ 2004). ಪ್ರಸ್ತುತ ಬೆಂಗಳೂರಿನಲ್ಲಿ ಕೇವಲ ಒಂದು ಎಸ್‌ಇಇ ಮಾತ್ರ ಕಾರ್ಯನಿರ್ವಹಿಸುತ್ತಿದೆ. 2016–17ರಿಂದ 2021–22ರ ಅವಧಿಯಲ್ಲಿ ಎಸ್‌ಇಇ ಮೂಲಕ ನೋಂದಾಯಿತ ಅಂಗವಿಕಲ ವ್ಯಕ್ತಿಗಳಲ್ಲಿ ಕೇವಲ 98 (ಸರ್ಕಾರಿ/ಕೇಂದ್ರ ಪಿಎಸ್‌ಯುಗಳಲ್ಲಿ 32 ಮತ್ತು ಖಾಸಗಿ ವಲಯದಲ್ಲಿ 66) ವ್ಯಕ್ತಿಗಳು ಉದ್ಯೋಗವನ್ನು ಪಡೆದಿದ್ದರು, ಏಕೆಂದರೆ ಕೆಲವು ಸಂಸ್ಥೆಗಳು ಎಸ್‌ಇಇಗೆ ನಿಗದಿತ ವಿವರಪಟ್ಟಿಕೆಯನ್ನು ಒದಗಿಸುವುದನ್ನು ರದ್ದು ಮಾಡಿದ್ದವು. ಸಹಾಯಕ ನಿರ್ದೇಶಕರು, ಎಸ್‌ಇಇ ಒದಗಿಸಿದ ಮಾಹಿತಿಯ ಪ್ರಕಾರ, ಮಾರ್ಚ್ 2022ರಲ್ಲಿದ್ದಂತೆ ಒಟ್ಟು 1,026 ಅಂಗವಿಕಲರು ನೋಂದಾಯಿಸಿ ಕೊಂಡಿದ್ದರು. ಬೆಂಗಳೂರು ಎಸ್‌ಇಇಯನ್ನು ಹೊರತುಪಡಿಸಿ ಇತರ ಎಸ್‌ಇಇಗಳ ಅನುಪಸ್ಥಿತಿಯಲ್ಲಿ, ಉದ್ಯೋಗ ಆಕಾಂಕ್ಷಿಗಳಿಗೆ ನೇಮಕಾತಿಗಾಗಿ ತಮ್ಮನ್ನು ನೋಂದಾಯಿಸಿಕೊಳ್ಳಲು ಯಾವುದೇ ವೇದಿಕೆ ಇರಲಿಲ್ಲ.

ಉದ್ಯೋಗಾಕಾಂಕ್ಷಿಗಳ ನೋಂದಣಿಗಾಗಿ ಇಲಾಖೆಯು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ (ಎಸ್‌ಡಿಇಎಲ್) ವೆಬ್ ಪೋರ್ಟಲ್ ಆದ ಕೌಶಲ್ಕರ್.ಕಾಮ್ ಕುರಿತು ಜಾಗೃತಿ ಮೂಡಿಸುವಂತಹ ಪರ್ಯಾಯ ವ್ಯವಸ್ಥೆಗಳನ್ನು ಮಾಡಿರಲಿಲ್ಲ. ಇದು ಯುವಕರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವುದರ ಜೊತೆಗೆ ಉದ್ಯೋಗ ಗಳಿಸಲು ಅಗತ್ಯವಾದ ಕೌಶಲ್ಯ ಮತ್ತು ಪರಿಣತಿಯನ್ನು ಪಡೆಯಲು ಅವಕಾಶ ಒದಗಿಸುತ್ತದೆ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

### *5.2.4 ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ ಒದಗಿಸುವುದಕ್ಕಾಗಿ ಖಾಸಗಿ ವಲಯದ ಉದ್ಯೋಗದಾತರಿಗೆ ಪ್ರೋತ್ಸಾಹ*

ಆರ್‌ಪಿಡಬ್ಲ್ಯುಡಿ ಕಾಯಿದೆಯ ಪರಿಚ್ಛೇದ 35ರ ಪ್ರಕಾರ, ಖಾಸಗಿ ವಲಯದ ಉದ್ಯೋಗದಾತರಿಗೆ ತಮ್ಮ ಉದ್ಯೋಗಿಗಳಲ್ಲಿ ಕನಿಷ್ಠ ಶೇಕಡಾ ಐದರಷ್ಟು ಮಾನದಂಡಕ್ಕೆ ಅನುಗುಣವಾಗಿರುವ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿರುವುದನ್ನು ಖಚಿತಪಡಿಸಿಕೊಳ್ಳಲು ಪ್ರೋತ್ಸಾಹಕಗಳನ್ನು ಒದಗಿಸಬೇಕು. ಅದರಂತೆ, 1 ಏಪ್ರಿಲ್ 2016ರಿಂದ 'ಖಾಸಗಿ ವಲಯದಲ್ಲಿ ಅಂಗವಿಕಲರಿಗೆ ಉದ್ಯೋಗವನ್ನು ಒದಗಿಸುವ ಪ್ರೋತ್ಸಾಹ ಯೋಜನೆಯನ್ನು' ಭಾರತ ಸರ್ಕಾರವು ಪರಿಚಯಿಸಿತು (ಫೆಬ್ರವರಿ 2017), ಇದರಲ್ಲಿ ಭವಿಷ್ಯ ನಿಧಿ ಮತ್ತು ವಿಮೆಗೆ ಉದ್ಯೋಗದಾತರ ವಂತಿಗೆಯನ್ನು, ಗ್ರಾಚ್ಯುಟಿ ಪಾವತಿ ಇತ್ಯಾದಿಗಳನ್ನು ಸರ್ಕಾರವು ಒದಗಿಸುತ್ತದೆ.

ಖಾಸಗಿ ವಲಯದಲ್ಲಿ ಅಂಗವಿಕಲರ ಉದ್ಯೋಗದ ಕುರಿತು ಇಲಾಖೆಯು ಯಾವುದೇ ದತ್ತಾಂಶವನ್ನು ಹೊಂದಿರಲಿಲ್ಲ ಅಥವಾ ಅಂಗವಿಕಲರ ಉದ್ಯೋಗದ ಪ್ರಮಾಣವನ್ನು ನಿರ್ಣಯಿಸಲು ಯಾವುದೇ ಸಮೀಕ್ಷೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆರ್‌ಪಿಡಬ್ಲ್ಯುಡಿ ಅಧಿನಿಯಮದ ನಿಬಂಧನೆಗಳು ಮತ್ತು ಅವರಿಗೆ ಒದಗಿಸಬೇಕಾದ ಪ್ರೋತ್ಸಾಹಗಳ ಬಗ್ಗೆ ಬಹುರಾಷ್ಟ್ರೀಯ ಮತ್ತು ದೇಶೀಯ ಖಾಸಗಿ ಉದ್ಯೋಗದಾತರನ್ನು ಸಂವೇದನಾಶೀಲಗೊಳಿಸಲು ಎಫ್‌ಐಸಿಸಿಐ/ಚೇಂಬರ್ ಆಫ್ ಕಾಮರ್ಸ್/ಅಸೋಚಾಮ್ ಸಹಯೋಗದೊಂದಿಗೆ ಕಾರ್ಯಾಗಾರಗಳು ಅಥವಾ ಸೆಮಿನಾರ್‌ಗಳನ್ನು ಏರ್ಪಡಿಸುವ ಮೂಲಕ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡಲು ವಿಫಲವಾಗಿತ್ತು.

ರಾಜ್ಯ ಆಯುಕ್ತರ ಕಛೇರಿಯು (ಫೆಬ್ರವರಿ 2023) ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಮತ್ತು ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್&ಇಂಡಸ್ಟ್ರಿ (ಎಫ್‌ಐಸಿಸಿಐ) ಚೇಂಬರ್ ಆಫ್ ಕಾಮರ್ಸ್ ಮತ್ತು ಬೆಂಗಳೂರಿನ ಅಸೋಚಾಮ್, ಇವುಗಳನ್ನು ಆರ್‌ಪಿಡಬ್ಲ್ಯುಡಿ ಅಧಿನಿಯಮ, 2016ರ ಪರಿಚ್ಛೇದ 35ರ ನಿಬಂಧನೆಗಳ ಬಗ್ಗೆ ಜಾಗೃತಿ ಮೂಡಿಸಲು ಕಾರ್ಪೋರೇಟ್ ವಲಯಗಳೊಂದಿಗೆ ಕಾರ್ಯಾಗಾರವನ್ನು ಸುಗಮಗೊಳಿಸಲು ವಿನಂತಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ಖಾಸಗಿ ವಲಯಗಳು ತಮ್ಮ ಸಂಸ್ಥೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಕನಿಷ್ಠ ಶೇಕಡಾ ಐದರಷ್ಟು ಉದ್ಯೋಗಾವಕಾಶಗಳನ್ನು ಒದಗಿಸಲು ವಿನಂತಿಸಲಾಗುವುದು ಮತ್ತು ಅಂಗವಿಕಲರಿಗೆ ಉದ್ಯೋಗದ ಅವಕಾಶ ಒದಗಿಸುವ ಖಾಸಗಿ ವಲಯಗಳಿಗೆ ಪ್ರೋತ್ಸಾಹವನ್ನು ನೀಡಲಾಗುವುದು ಎಂದೂ ಸಹ ತಿಳಿಸಲಾಯಿತು.

### *5.2.5 ರಾಷ್ಟ್ರೀಯ ಅಂಗವಿಕಲ ಹಣಕಾಸು ಮತ್ತು ಅಭಿವೃದ್ಧಿ ನಿಗಮದೊಂದಿಗೆ ಒಪ್ಪಂದವನ್ನು ಕಾರ್ಯಗತ ಗೊಳಿಸದಿರುವುದು*

ಭಾರತ ಸರ್ಕಾರ ಸ್ಥಾಪಿಸಿದ (ಜನವರಿ 1997) ರಾಷ್ಟ್ರೀಯ ಅಂಗವಿಕಲ ಹಣಕಾಸು ಮತ್ತು ಅಭಿವೃದ್ಧಿ ನಿಗಮವು (ಎನ್‌ಹೆಚ್‌ಎಫ್‌ಡಿಸಿ), ಅಂಗವಿಕಲ ವ್ಯಕ್ತಿಗಳ ಕೌಶಲ್ಯ ಉನ್ನತೀಕರಣವನ್ನು ಒಳಗೊಂಡು ಅವರ ಸಬಲೀಕರಣಕ್ಕಾಗಿ ಹಣಕಾಸು ಒದಗಿಸುತ್ತದೆ ಮತ್ತು ರಾಜ್ಯ ಸರ್ಕಾರದಿಂದ

ನಾಮನಿರ್ದೇಶನಗೊಂಡ ರಾಜ್ಯ ಚಾನೆಲೈಸಿಂಗ್ ಏಜೆನ್ಸಿಗಳು (ಎಸ್‌ಸಿಎ), ಸಾರ್ವಜನಿಕ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳ ಮೂಲಕ ಸರ್ಕಾರದ ಖಾತರಿಯೊಂದಿಗೆ ಉದ್ದೇಶಿತ ಗುಂಪುಗಳಿಗೆ ಸಾಲಗಳನ್ನು ಒದಗಿಸುತ್ತದೆ. ರಾಜ್ಯದಲ್ಲಿ 3,117 ಫಲಾನುಭವಿಗಳು 2002–03ರಿಂದ 2013–14ರ ಅವಧಿಯಲ್ಲಿ ಒಟ್ಟು ₹10.15 ಕೋಟಿ ಸಾಲ ಪಡೆದಿದ್ದರು.

ರಾಜ್ಯ ಸರ್ಕಾರವು ಎನ್‌ಹೆಚ್‌ಎಫ್‌ಡಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಡಿಇಡಿಎಪಿಎಸ್‌ಸಿಗೆ ವರ್ಗಾಯಿಸಿತು (ಅಕ್ಟೋಬರ್ 2014). ತತ್ಪರಿಣಾಮವಾಗಿ ಇಲಾಖೆಯು ಎನ್‌ಹೆಚ್‌ಎಫ್‌ಡಿಸಿಯೊಂದಿಗೆ ಸಾಮಾನ್ಯ ಸಾಲ ಒಪ್ಪಂದವನ್ನು ಕಾರ್ಯಗತಗೊಳಿಸಲು ಮತ್ತು ರಾಜ್ಯ ಬ್ಲಾಕ್ ಸರ್ಕಾರದ ಖಾತರಿಯನ್ನು ಒದಗಿಸುವ ಅಗತ್ಯವಿದ್ದಿತು. ಇಲಾಖೆಯು ಒಪ್ಪಂದವನ್ನು ಕಾರ್ಯಗತಗೊಳಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಅದಕ್ಕಾಗಿ ಯಾವುದೇ ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ. ಜನವರಿ 2020ರಲ್ಲಿ ಎನ್‌ಎಚ್‌ಎಫ್‌ಡಿಸಿ ತನ್ನನ್ನು ರಾಜ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದಾಗಲೂ ಸಹ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ತತ್ಪರಿಣಾಮವಾಗಿ ಜನೌಷಧಿ ಕೇಂದ್ರಗಳು, ಎನ್‌ಹೆಚ್‌ಎಫ್‌ಡಿಸಿ ಸ್ವಾವಲಂಬನ ಕೇಂದ್ರ, ದಿವ್ಯಾಂಗಜನ ಸ್ವಾವಲಂಬನ ಯೋಜನೆ ಇತ್ಯಾದಿಗಳಿಗೆ ಸಕ್ರಿಯ ರಾಜ್ಯ ಚಾನೆಲೈಸಿಂಗ್ ಏಜೆನ್ಸಿಗಳ ಅನುಪಸ್ಥಿತಿಯಲ್ಲಿ ಎನ್‌ಹೆಚ್‌ಎಫ್‌ಡಿಸಿಯ ರಿಯಾಯಿತಿ ಕ್ರೆಡಿಟ್ ಲಿಂಕೇಜ್‌ಗಳಿಂದ ರಾಜ್ಯದ ಅಂಗವಿಕಲ ಜನಸಂಖ್ಯೆಯು ಪ್ರಯೋಜನ ಪಡೆಯಲು ಸಾಧ್ಯವಾಗಲಿಲ್ಲ. ಯೋಜನೆಗಳ ಉದ್ದೇಶಗಳನ್ನು **ಅನುಬಂಧ–5.1ರಲ್ಲಿ** ನೀಡಲಾಗಿದೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಮತ್ತು ಇತರ ರಾಷ್ಟ್ರೀಕೃತ ಬ್ಯಾಂಕ್‌ಗಳು ಯೋಜನೆಯ ಅನುಷ್ಠಾನಕ್ಕಾಗಿ ಎಸ್‌ಸಿಎ ಆಗಲು ಒಪ್ಪಲಿಲ್ಲ/ಆಸಕ್ತಿಯನ್ನು ತೋರಿಸಲಿಲ್ಲ ಎಂದು ರಾಜ್ಯ ಸರ್ಕಾರವು ತಿಳಿಸಿತು. ಆದ್ದರಿಂದ, ಎಲ್ಲಾ ಎನ್‌ಹೆಚ್‌ಎಫ್‌ಡಿಸಿ ಯೋಜನೆಗಳನ್ನು 2014–15ರಿಂದ ಜಾರಿಗೊಳಿಸಲಿಲ್ಲ. ರಾಜ್ಯ ಸರ್ಕಾರವು ವಿಶೇಷವಾಗಿ ಎನ್‌ಎಚ್‌ಎಫ್‌ಡಿಸಿಯ ಮೌಲ್ಯಮಾಪನದ ಬೆಳಕಿನಲ್ಲಿ ಇತರ ಮಾರ್ಗಗಳನ್ನು ಅನ್ವೇಷಿಸಿದ್ದರೆ ಈ ಯೋಜನೆಯು ಅಂಗವಿಕಲ ವ್ಯಕ್ತಿಗಳ ಸಬಲೀಕರಣಕ್ಕೆ ಸಹಾಯ ಮಾಡುವ ಸಾಧನವಾಗುತ್ತಿತ್ತು.

## 5.3 ಅಂಗವಿಕಲ ವ್ಯಕ್ತಿಗಳಿಗೆ ಸಾಮಾಜಿಕ ಭದ್ರತೆ

### *5.3.1 ಸಮುದಾಯ ಕೇಂದ್ರಗಳ ಸ್ಥಾಪನೆ*

ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 24ರ ಪ್ರಕಾರ ಸಮುಚಿತ ಸರ್ಕಾರವು ತನ್ನ ಆರ್ಥಿಕ ಸಾಮರ್ಥ್ಯದ ಮತ್ತು ಆರ್ಥಿಕ ಅಭಿವೃದ್ಧಿ ಮಿತಿಯೊಳಗೆ ಅಂಗವಿಲ ವ್ಯಕ್ತಿಗಳು ಸ್ವತಂತ್ರವಾಗಿ ಅಥವಾ ಸಮುದಾಯದಲ್ಲಿ ಒಂದಾಗಿ ಜೀವಿಸಲು ಸಾಧವಾಗುವಂತೆ ಅವರ ಜೀವನದ ಗುಣಮಟ್ಟವನ್ನು ಹೆಚ್ಚಿಸಿ ಅವರ ಹಕ್ಕನ್ನು ಸಂರಕ್ಷಿಸುವುದಕ್ಕೆ ಮತ್ತು ಉತ್ತೇಜಿಸುವುದಕ್ಕೆ ಅವಶ್ಯಕವಾಗ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಬೇಕು. ಅಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅಡಿಯಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ನೀಡುವ ನೆರವಿನ ಪ್ರಮಾಣವು ಇತರ ವ್ಯಕ್ತಿಗಳಿಗೆ ಅನ್ವಯಿಸುವ ಅದೇ ರೀತಿಯ ಯೋಜನೆಗಳಿಗಿಂತಲೂ ಕನಿಷ್ಠ ಶೇಕಡಾ 25ದರಷ್ಟು ಅಧಿಕವಾಗಿರಬೇಕು.

ರೂಪಿಸಲಾದ ಯೋಜನೆಗಳು ಸುರಕ್ಷತೆ, ನೈರ್ಮಲ್ಯ, ಆರೋಗ್ಯಪಾಲನೆ ಮತ್ತು ಆಪ್ತ ಸಮಾಲೋಚನೆಯ ವಿಷಯದಲ್ಲಿ ಉತ್ತಮ ಜೀವನ ಪರಿಸ್ಥಿತಿಗಳನ್ನು ಹೊಂದಿರುವ ಸಮುದಾಯ ಕೇಂದ್ರಗಳನ್ನು ಸ್ಥಾಪಿಸಬೇಕು, ಅನಾಥ ಅಥವಾ ಪರಿತ್ಯಕ್ತ ಅಥವಾ ಮನೆ ಅಥವಾ ಜೀವನೋಪಾಯ ಇಲ್ಲದಿರುವ ಅಂಗವಿಕಲ ಮಕ್ಕಳು ಸೇರಿದಂತೆ ಅನಾಥ ಅಂಗವಿಕಲ ವ್ಯಕ್ತಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಬೇಕು, ನೈಸರ್ಗಿಕ ಅಥವಾ ಮಾನವನಿರ್ಮಿತ ವಿಪತ್ತುಗಳ ಸಂದರ್ಭದಲ್ಲಿ ಮತ್ತು ಗಲಭೆಯುಂಟಾದ ಪ್ರದೇಶದಲ್ಲಿ ನೆರವನ್ನು ಒದಗಿಸಬೇಕು.

ಬೆಂಗಳೂರು ಮತ್ತು ಬೆಳಗಾವಿಯಲ್ಲಿನ ಬುದ್ಧಿಮಾಂದ್ಯ ವಿಕಲಚೇತನ ಶಾಲೆಗಳು ಮತ್ತು ಮಾನಸ ಕೇಂದ್ರಗಳನ್ನು ಹೊರತುಪಡಿಸಿ, ಇಲಾಖೆಯು ಸಂಸ್ಥೆಗಳನ್ನು ಗುರುತಿಸಲು ಕ್ರಮಗಳನ್ನು ಪ್ರಾರಂಭಿಸಿರಲಿಲ್ಲ ಅಥವಾ ಅಂತಹ ಸಮುದಾಯ ಕೇಂದ್ರಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು ಯೋಜನೆಗಳನ್ನು ರೂಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಒಂದೇ ಸೂರಿನಡಿಯಲ್ಲಿ ಅಗತ್ಯವಿರುವ ಪುನರ್ವಸತಿ ಮತ್ತು ತರಬೇತಿ ಸೌಲಭ್ಯವನ್ನು ಒದಗಿಸಲು ಬುದ್ಧಿಮಾಂದ್ಯರಿಗೆ ಆಶ್ರಯ ಕಾರ್ಯಾಗಾರವನ್ನು ಸ್ಥಾಪಿಸುವುದನ್ನು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ ಮತ್ತು ಸರ್ಕಾರದ ಮಟ್ಟದಲ್ಲಿ ಅನುಮೋದಿಸಿದ ನಂತರ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಸರ್ಕಾರ ತಿಳಿಸಿತು.

### *5.3.2 ಯೋಜನೆಗಳನ್ನು ಅನುಷ್ಠಾನಗೊಳಿಸದಿರುವುದು ಮತ್ತು ಅನುಷ್ಠಾನದಲ್ಲಿನ ಕೊರತೆಗಳು*

ಅಂಗವಿಕಲ ವ್ಯಕ್ತಿಗಳನ್ನು ಅವರ ಅಸಾಮರ್ಥ್ಯಕ್ಕಿಂತ ಹೆಚ್ಚಾಗಿ ಅವರ ಸಾಮರ್ಥ್ಯಗಳ ಮೇಲೆ ಕೇಂದ್ರೀಕರಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು ಇಲಾಖೆಯ ಮುಖ್ಯ ಉದ್ದೇಶವಾಗಿತ್ತು. ಇದಕ್ಕೆ ಅಂಗವಿಕಲ ವ್ಯಕ್ತಿಗಳ ಒಟ್ಟಾರೆ ಕಲ್ಯಾಣ ಮತ್ತು ಅಭಿವೃದ್ಧಿಯ ಬಹು ಆಯಾಮದ ವಿಧಾನದ ಅಗತ್ಯವಿದ್ದಿತು. ಅದರಂತೆ ಅಂಗವಿಕಲ ವ್ಯಕ್ತಿಗಳ ಅನುಕೂಲಕ್ಕಾಗಿ ಸರ್ಕಾರವು ನಿರಾಮಯ ಆರೋಗ್ಯ ವಿಮಾ ಯೋಜನೆ, ಆಧಾರ ಯೋಜನೆ ಮುಂತಾದ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಈ ಕೆಳಗೆ ಚರ್ಚಿಸಿದಂತೆ, ಅನುಷ್ಠಾನದಲ್ಲಿನ ನ್ಯೂನತೆಗಳನ್ನು ಹಾಗೂ ತತ್ಪರಿಣಾಮವಾಗಿ ಯೋಜನೆಗಳ ಪ್ರಯೋಜನಗಳು ಅಂಗವಿಕಲರಿಗೆ ತಲುಪದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

#### 5.3.2.1 ನಿರಾಮಯ ಆರೋಗ್ಯ ವಿಮಾ ಯೋಜನೆ

ರಾಷ್ಟ್ರೀಯ ಟ್ರಸ್ಟ್ ಅಧಿನಿಯಮದಡಿಯಲ್ಲಿ ಅಂಗವಿಕಲರಿಗೆ ಕೈಗೆಟುಕುವ ಆರೋಗ್ಯ ವಿಮೆಯನ್ನು ಒದಗಿಸುವ ಉದ್ದೇಶದಿಂದ ಆಟಿಸಂ, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯ ಮತ್ತು ಬಹು ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳ ಕಲ್ಯಾಣಕ್ಕಾಗಿ ರಾಷ್ಟ್ರೀಯ ಟ್ರಸ್ಟ್ ಆರೋಗ್ಯ ವಿಮಾ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಡಿಯಲ್ಲಿ ನೋಂದಾಯಿತ ಎಲ್ಲಾ ಫಲಾನುಭವಿಗಳಿಗೆ ಔಷಧಿಗಳು, ರೋಗಶಾಸ್ತ್ರ, ರೋಗನಿರ್ಣಯ ಪರೀಕ್ಷೆಗಳು, ಶಸ್ತ್ರಚಿಕಿತ್ಸಕವಲ್ಲದ ಆಸ್ಪತ್ರೆ ಸೇರ್ಪಡೆ, ಅಸ್ತಿತ್ವದಲ್ಲಿರುವ ಅಂಗವೈಕಲ್ಯಗಳನ್ನು ಸರಿಪಡಿಸುವ ಶಸ್ತ್ರಚಿಕಿತ್ಸೆಗಳು, ಇತ್ಯಾದಿ ಸೇರಿದಂತೆ ಒಪಿಡಿ ಚಿಕಿತ್ಸೆಗಾಗಿ ಮರುಪಾವತಿ ಆಧಾರದ ಮೇಲೆ ಒಂದು ಲಕ್ಷ ರೂಪಾಯಿಗಳವರೆಗೆ ಆರೋಗ್ಯ ವಿಮೆಯನ್ನು ಒದಗಿಸಲಾಗುತ್ತದೆ. ನಿಗದಿತ ಶುಲ್ಕವನ್ನು ಪಾವತಿಸುವ ಮೂಲಕ ಪ್ರತಿ ವರ್ಷ ಪಾಲಿಸಿಯನ್ನು ಫಲಾನುಭವಿ ಅಥವಾ ಸರ್ಕಾರೇತರ ಸಂಸ್ಥೆಗಳು ಆನ್‌ಲೈನ್‌ನಲ್ಲಿ ನವೀಕರಿಸಬೇಕು.

ರಾಜ್ಯ ಸರ್ಕಾರವು ಆಗಸ್ಟ್ 2014ರಿಂದ ಈ ಯೋಜನೆಯನ್ನು ಜಾರಿಗೊಳಿಸಿತು ಮತ್ತು ಮೊದಲ ಬಾರಿಗೆ ಪ್ರತಿ ಫಲಾನುಭವಿಗೆ ₹250 ಪಾವತಿಸುತ್ತದೆ ಹಾಗೂ ಯೋಜನೆಯ ಪ್ರಯೋಜನಗಳನ್ನು ಪಡೆಯಲು ಫಲಾನುಭವಿಯು ಅದನ್ನು ನವೀಕರಿಸಬೇಕಾಗಿತ್ತು. ಪರೀಕ್ಷಾ-ತನಿಖೆ ನಡೆಸಿದ 11

ಜಿಲ್ಲೆಗಳು ಒದಗಿಸಿದ ಮಾಹಿತಿಯ ಪ್ರಕಾರ, 2016–17ರಿಂದ 2021–22ರ ಅವಧಿಯಲ್ಲಿ 2,379 ವ್ಯಕ್ತಿಗಳ ನೋಂದಣಿಗಾಗಿ ₹5.95 ಲಕ್ಷ ವೆಚ್ಚ ಮಾಡಲಾಗಿತ್ತು.

ಬಾಗಲಕೋಟೆ ಜಿಲ್ಲೆಯಲ್ಲಿ ಕೇವಲ 201 ಫಲಾನುಭವಿಗಳು ಮಾತ್ರ ತಮ್ಮ ಪಾಲಿಸಿಗಳನ್ನು ನವೀಕರಿಸಿದ್ದರು (ಒಂದು ಬಾರಿ ಮಾತ್ರ) ಮತ್ತು ಫಲಾನುಭವಿಗಳು ತಮ್ಮ ಪಾಲಿಸಿಗಳನ್ನು ನವೀಕರಿಸುವುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆ ಗಮನಿಸಿತು. ನವೀಕರಣ ಶುಲ್ಕವು ಪ್ರತಿ ಫಲಾನುಭವಿಗೆ ವರ್ಷಕ್ಕೆ ಕೇವಲ ₹50 ಮಾತ್ರ ಆಗಿರುವುದರಿಂದ, ಎಲ್ಲಾ ಅಂಗವಿಕಲ ವ್ಯಕ್ತಿಗಳು ಆರೋಗ್ಯ ವಿಮಾ ಯೋಜನೆಯ ಪ್ರಯೋಜನಗಳನ್ನು ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ನವೀಕರಣ ಶುಲ್ಕವನ್ನು ಇಲಾಖೆಯೇ ಪಾವತಿಸಲು ಯೋಜನೆಯ ಮಾರ್ಗಸೂಚಿಗಳನ್ನು ಮರುಪರಿಶೀಲಿಸಬೇಕು.

ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಬೆಳಗಾವಿಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ಇಲಾಖೆಯು ನೇಮಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ಯೋಜನೆಯಡಿ ನೋಂದಣಿಯಾಗಿರುವ ಎಲ್ಲಾ ಫಲಾನುಭವಿಗಳಿಗೆ ಪಾಲಿಸಿಯನ್ನು ನವೀಕರಿಸಲು ಸಂಬಂಧಿಸಿದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಮತ್ತು ನೋಡಲ್ ಏಜೆನ್ಸಿಗೆ ಸೂಚಿಸಲಾಯಿತು.

### 5.3.2.2 ಬುದ್ಧಿಮಾಂದ್ಯ ಮಕ್ಕಳ ಪಾಲಕರಿಗೆ/ರಕ್ಷಕರಿಗೆ ವಿಮಾ ಯೋಜನೆ

ಈ ಯೋಜನೆಯಡಿಯಲ್ಲಿ, ವಿಕಲಚೇತನರ ಕಲ್ಯಾಣ ನಿರ್ದೇಶನಾಲಯವು ₹12,000 ಅಥವಾ ಅದಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಬುದ್ಧಿಮಾಂದ್ಯ ವ್ಯಕ್ತಿಗಳ ಪೋಷಕರು/ ರಕ್ಷಕರಿಗೆ ವಿಶೇಷವಾಗಿ ವಿನ್ಯಾಸಗೊಳಿಸಿದ ಗುಂಪು ವಿಮಾ ಪಾಲಿಸಿಯಡಿಯಲ್ಲಿ ಭಾರತ ಜೀವವಿಮಾ ನಿಗಮಕ್ಕೆ ವಾರ್ಷಿಕ ಪ್ರೀಮಿಯಂಅನ್ನು ಪಾವತಿಸುತ್ತದೆ. ಬುದ್ಧಿಮಾಂದ್ಯ ವ್ಯಕ್ತಿಯ ಪೋಷಕರು/ರಕ್ಷಕರ ಮರಣದ ನಂತರ, ನಾಮಕರಣಿತ ಅಂಗವಿಕಲ ವ್ಯಕ್ತಿಯ ನಿರ್ವಹಣೆಗಾಗಿ ಒಂದು ಬಾರಿಯ ಮೊತ್ತವನ್ನಾಗಿ ₹20,000 ಪಡೆಯುತ್ತಾರೆ.

ಪರೀಕ್ಷಾ–ತನಿಖೆ ನಡೆಸಿದ ಆರು[8] ಜಿಲ್ಲೆಗಳು ಒದಗಿಸಿದ ಮಾಹಿತಿಯ ಪ್ರಕಾರ, 787 ವ್ಯಕ್ತಿಗಳನ್ನು ಈ ಯೋಜನೆಯಡಿ ನೋಂದಾಯಿಸಲಾಗಿತ್ತು. ಆದರೆ, ನೋಂದಣಿಯ ವಿವರಗಳು ದಾಖಲೆಯಲ್ಲಿ ಲಭ್ಯವಿರಲಿಲ್ಲ. ಡಿಡಿಡಬ್ಲ್ಯುಓಗಳು ಪ್ರತಿ ವರ್ಷ ಅದೇ ಪಟ್ಟಿಯನ್ನು ನಿರ್ದೇಶನಾಲಯಕ್ಕೆ ರವಾನಿಸುತ್ತಿದ್ದರು ಮತ್ತು ಅದರಲ್ಲಿ ಯಾವುದೇ ಹೊಸ ಸೇರ್ಪಡೆಗಳಿರಲಿಲ್ಲ. ಹೊಸ ಫಲಾನುಭವಿಗಳನ್ನು ಗುರುತಿಸಲು ಯೋಜನೆಯನ್ನು ಪ್ರಚಾರ ಮಾಡಲು ಇಲಾಖೆಯು ಕ್ರಮ ಕೈಗೊಂಡಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ಜಿಲ್ಲಾ ಮಟ್ಟದ ಫಲಾನುಭವಿಗಳಲ್ಲಿ ಯೋಜನೆಯ ಉಪಯುಕ್ತತೆಯ ಬಗ್ಗೆ ಅರಿವು ಮೂಡಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು.

[8] ಬೆಂಗಳೂರು, ಬೀದರ್, ದಕ್ಷಿಣ ಕನ್ನಡ, ರಾಯಚೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಯಾವುದೇ ನೋಂದಣಿ ಇರಲಿಲ್ಲ.

#### 5.3.2.3 ಆಧಾರ – ಸ್ವಯಂ ಉದ್ಯೋಗ ಯೋಜನೆ

ಈ ಯೋಜನೆಯಡಿಯಲ್ಲಿ, ಅರ್ಹ ವ್ಯಕ್ತಿಗಳಿಗೆ ಸಣ್ಣ ವ್ಯಾಪಾರವನ್ನು ಪ್ರಾರಂಭಿಸಲು ₹15,000 ಮೌಲ್ಯದ ಕಿಯೋಸ್ಕ್ ಜೊತೆಗೆ ₹20,000 ಆರ್ಥಿಕ ನೆರವನ್ನು ಬಡ್ಡಿ ರಹಿತ ದುಡಿಯುವ ಬಂಡವಾಳವಾಗಿ ನೀಡಲಾಗುತ್ತದೆ. ಪರೀಕ್ಷಾ-ತನಿಖೆ ನಡೆಸಿದ ಜಿಲ್ಲೆಗಳಿಂದ ಒದಗಿಸಲಾದ ಮಾಹಿತಿಯ ಪ್ರಕಾರ, 2014–15 ರಿಂದ 2017–18ರ ಅವಧಿಯಲ್ಲಿ 1,113 ಫಲಾನುಭವಿಗಳಿಗೆ ₹2.23 ಕೋಟಿ ಮೊತ್ತವನ್ನು ದುಡಿಯುವ ಬಂಡವಾಳವಾಗಿ ವಿತರಿಸಲಾಯಿತು. ಮೈಸೂರು ಜಿಲ್ಲೆಯಲ್ಲಿ ₹32,000 ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ₹5,000 ವಸೂಲಿ ಮಾಡಲಾಗಿದ್ದು ಉಳಿದ ಜಿಲ್ಲೆಗಳಲ್ಲಿ ಯಾವುದೇ ವಸೂಲಿ ಇಲ್ಲದಿರುವುದು ಕಂಡುಬಂದಿತು. 1995–96ರಿಂದ 2013–14ರವರೆಗೆ ಫಲಾನುಭವಿಗಳು ಮರುಪಾವತಿ ಮಾಡದ ₹11.08 ಕೋಟಿ ಸಾಲವನ್ನು ರಾಜ್ಯ ಸರ್ಕಾರ ತರುವಾಯ (ಜೂನ್ 2016) ಮನ್ನಾ ಮಾಡಿತು.

ರಾಜ್ಯ ಸರ್ಕಾರವು ಮೇಲಿನ ಯೋಜನೆಯನ್ನು ಪರಿಷ್ಕರಿಸಿತು (ಆಗಸ್ಟ್ 2018), ಅದರಲ್ಲಿ ಫಲಾನುಭವಿಗೆ ಪ್ರತಿ ಯೂನಿಟ್‌ಗೆ ಗರಿಷ್ಠ ಒಂದು ಲಕ್ಷ ರೂಪಾಯಿಗಳ ನೆರವನ್ನು ನೀಡಲಾಗುತ್ತದೆ (₹50,000 ಬ್ಯಾಂಕ್ ಸಾಲವಾಗಿ ಮತ್ತು ₹50,000 ಬ್ಯಾಕ್-ಎಂಡ್ ಸಹಾಯಧನವಾಗಿ). 2018–19ರಲ್ಲಿ ₹3.36 ಕೋಟಿ ಆಯವ್ಯಯ ಹಂಚಿಕೆ ಮಾಡಿದ್ದರೂ ಯೋಜನೆಯನ್ನು ಅನುಷ್ಠಾನಗೊಳಿಸಲಿಲ್ಲ, 2019–20ನೇ ಅವಧಿಯಲ್ಲಿ ₹3.90 ಕೋಟಿ ಬಿಡುಗಡೆ ಮಾಡಿದ್ದರೂ ₹1.43 ಕೋಟಿಯನ್ನು ಮಾತ್ರ ವೆಚ್ಚ ಮಾಡಲಾಗಿತ್ತು. ಬಾಕಿ ಮೊತ್ತ ₹2.47 ಕೋಟಿ ಲೋಪವಾಗಿತ್ತು. ಅನುದಾನ ಬಳಕೆಯಾಗದಿರುವುದಕ್ಕೆ ಇಲಾಖೆಯು ಕಾರಣಗಳನ್ನು ನೀಡಲಿಲ್ಲ. ಈ ಯೋಜನೆಯು ಅಂಗವಿಕಲ ವ್ಯಕ್ತಿಗಳಿಗೆ ಗರಿಷ್ಠ ಪ್ರಮಾಣದಲ್ಲಿ ಸ್ವಯಂ ಉದ್ಯೋಗವನ್ನು ಒದಗಿಸುವ ತನ್ನ ಅಪೇಕ್ಷಿತ ಉದ್ದೇಶವನ್ನು ಸಾಧಿಸಲಿಲ್ಲ ಎಂಬುದು ಸ್ಪಷ್ಟವಾಗಿದೆ.

2019–20ರಿಂದ 2021–22ರ ಅವಧಿಯಲ್ಲಿ ಹತ್ತು ಜಿಲ್ಲೆಗಳ 287 ಪ್ರಕರಣಗಳ ಪರೀಕ್ಷಾ-ತನಿಖೆಯಲ್ಲಿ ಬ್ಯಾಂಕ್‌ಗಳಿಂದ ಸಾಲವನ್ನು ಮಂಜೂರು ಮಾಡಿ ವಿತರಿಸುವ ಮೊದಲೇ ₹1.33 ಕೋಟಿ ಬ್ಯಾಕ್-ಎಂಡ್ ಸಹಾಯಧನ ಬಿಡುಗಡೆಯಾಗಿರುವ ನಿದರ್ಶನಗಳನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಬ್ಯಾಕ್-ಎಂಡ್ ಸಹಾಯಧನವನ್ನು ಜಮೆ ಮಾಡುವ ಮೊದಲು ಬ್ಯಾಂಕ್ ಸಾಲಗಳ ಮಂಜೂರಾತಿಯನ್ನು ಖಚಿತಪಡಿಸಿಕೊಳ್ಳಲು ಇಲಾಖೆ ವಿಫಲವಾಗಿರುವುದು ಸ್ಪಷ್ಟವಾಗುತ್ತದೆ. ಅನುದಾನ ಲೋಪವಾಗುವುದನ್ನು ತಪ್ಪಿಸಲು ಹಣವನ್ನು ಸೆಳೆಯಲಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಬ್ಯಾಕ್-ಎಂಡ್ ಸಹಾಯಧನವನ್ನು ಜಮೆ ಮಾಡುವ ಮೊದಲು ಬ್ಯಾಂಕ್ ಸಾಲಗಳ ಮಂಜೂರಾತಿಯನ್ನು ಖಚಿತಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು.

#### 5.3.2.4 ಮೋಟಾರು ವಾಹನಗಳ ವಿತರಣೆ

ಅಂಗವಿಕಲ ವ್ಯಕ್ತಿಗಳು ತಮ್ಮ ಕರ್ತವ್ಯ ಅಥವಾ ಕಲಿಕೆಯ ಸ್ಥಳಗಳಿಗೆ ಪ್ರಯಾಣಿಸಲು ಅನುಕೂಲವಾಗಲು, ಷರತ್ತುಗಳಿಗೆ ಒಳಪಟ್ಟು, ಅವರಿಗೆ ಮೋಟಾರು ವಾಹನಗಳ ವಿತರಣೆಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿತ್ತು (ಜುಲೈ 2014). 2016–17ರಿಂದ 2021–22ರ ಅವಧಿಯಲ್ಲಿ ಪರೀಕ್ಷಾ-ತನಿಕೆ ನಡೆಸಿದ ಜಿಲ್ಲೆಗಳಲ್ಲಿ ಒಟ್ಟು 3,980 ವಾಹನಗಳನ್ನು ಅಂಗವಿಕಲರಿಗೆ ವಿತರಿಸಲಾಯಿತು.

**ನಿದರ್ಶನ**

***ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸದ ಕಾರಣ ಮೂರು ವರ್ಷ ಕಳೆದರೂ 82 ಮೋಟಾರೀಕೃತ ಮೂರು ಚಕ್ರದ 90 ಸಿಸಿ ಟಿವಿಎಸ್ ಬಿಎಸ್-6 ವಾಹನಗಳನ್ನು ವಿತರಿಸದಿರುವುದು***

*2019-20 ಮತ್ತು 2020-21ನೇ ಹಣಕಾಸು ವರ್ಷದಲ್ಲಿ ಹಾಸನ ಜಿಲ್ಲೆಯ ವಿಕಲಚೇತನರಿಗೆ ವಿತರಿಸಲು ಮೋಟಾರೀಕೃತ ಮೂರು ಚಕ್ರದ 90 ಸಿಸಿ ಟಿವಿಎಸ್ ಬಿಎಸ್-6 ವಾಹನಗಳನ್ನು (82) ಪ್ರತಿ ವಾಹನಕ್ಕೆ ₹73,000 ರಂತೆ ₹59.86 ಲಕ್ಷಕ್ಕೆ ಖರೀದಿಸಿ ಏಜೆನ್ಸಿಗೆ ಹಣವನ್ನು ಪಾವತಿ ಮಾಡಲಾಯಿತು. 2019-20 ಮತ್ತು 2020-21ರ ಅವಧಿಗೆ ಫಲಾನುಭವಿಗಳ ಪಟ್ಟಿಯನ್ನು ಇನ್ನೂ (ಅಕ್ಟೋಬರ್ 2022) ಸಿದ್ಧಪಡಿಸಬೇಕಾಗಿರುವುದರಿಂದ, ಏಜೆನ್ಸಿಯು ವಾಹನಗಳನ್ನು ಸರಬರಾಜು ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ ಫಲಾನುಭವಿಗಳ ಪಟ್ಟಿಯನ್ನು ಸ್ವೀಕರಿಸಿದ ನಂತರ ವಾಹನಗಳ ಪೂರೈಕೆಗೆ 2019-20ರ ಅವಧಿಗೆ ಸಂಸ್ಥೆಯೊಂದಿಗೆ ಪರಸ್ಪರ ತಿಳುವಳಿಕೆ ಪತ್ರವನ್ನು ಸಹಿ ಮಾಡಲಾಯಿತು. ಆದರೆ, 2020-21ರ ಅವಧಿಗೆ ಏಜೆನ್ಸಿಯೊಂದಿಗೆ ಯಾವುದೇ ಒಪ್ಪಂದವನ್ನು ಮಾಡಿಕೊಂಡಿರಲಿಲ್ಲ. 2021-22ರ ಅವಧಿಗೂ ಸಹ ಮೋಟಾರೀಕೃತ ತ್ರಿಚಕ್ರ ವಾಹನಗಳ ಖರೀದಿ ಮತ್ತು ವಿತರಣೆಗೆ ₹8.55 ಲಕ್ಷ ಬಿಡುಗಡೆ ಮಾಡಲಾಗಿದ್ದು, ಜಿಲ್ಲಾ ಪಂಚಾಯತಿಯು ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಿಲ್ಲ ಎಂಬ ಕಾರಣಕ್ಕೆ ಮಂಜೂರು ಮಾಡಿದ ಉದ್ದೇಶಕ್ಕೆ ಬಳಸದೆ ಬ್ಯಾಂಕ್ ಖಾತೆಯಲ್ಲಿ ಹಣವನ್ನು ಉಳಿಸಿಕೊಳ್ಳಲಾಗಿತ್ತು.*

*2019-20ರ ಅವಧಿಯ ಫಲಾನುಭವಿಗಳ ಪಟ್ಟಿಯನ್ನು ಇನ್ನೂ ಅನುಮೋದಿಸಬೇಕಿದೆ ಮತ್ತು 2020-21ರ ಅವಧಿಗೆ 39 ಫಲಾನುಭವಿಗಳಿಗೆ ವಾಹನಗಳನ್ನು ವಿತರಿಸಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು.*

## 5.4 ಮಧ್ಯಸ್ಥಗಾರರಲ್ಲಿ ಅರಿವಿನ ಕೊರತೆಯಿಂದಾಗಿ ಸಮಸ್ಯೆಗಳು

ಉದ್ಯೋಗದ ವಿಷಯಗಳಲ್ಲಿ ಆರ್‌ಪಿಡಬ್ಲ್ಯುಡಿ ಅಧಿನಿಯಮಕ್ಕೆ ಸಂಬಂಧಿಸಿದ ಮಧ್ಯಸ್ಥಗಾರರಲ್ಲಿ ಅರಿವಿನ ಕೊರತೆಯಿಂದಾಗಿ ಅಂಗವಿಕಲ ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಪಡೆಯಲು ಕಾನೂನು ಮಧ್ಯಸ್ಥಿಕೆಗಳ ಮೊರೆ ಹೋಗಬೇಕಾಯಿತು. ಅಂತಹ ಕೆಲವು ಪ್ರಕರಣಗಳನ್ನು ಕೆಳಗೆ ಚರ್ಚಿಸಲಾಗಿದೆ:

### *5.4.1 ಲೋಪಗಳಿಂದಾಗಿ ಉದ್ಯೋಗ ನಿರಾಕರಣೆ*

ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಪರಿಚ್ಛೇದ 33 ಮತ್ತು ಪರಿಚ್ಛೇದ 20ರ ಹಾಗೂ ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 2-ಝಡ್‌ಸಿ ಅನುಸೂಚಿಯ ಪ್ರಕಾರ ಲೊಕೋಮೋಟರ್ ಅಸಾಮರ್ಥ್ಯ ಅಥವಾ ಸೆರೆಬ್ರಲ್ ಪಾಲ್ಸಿ ಹೊಂದಿರುವ ವ್ಯಕ್ತಿಗಳು ದೈಹಿಕ ಅಂಗವಿಕಲರ ದೇಯಾಂಶದಡಿಯಲ್ಲಿ ಪರೀಕ್ಷೆಗಳನ್ನು ಬರೆಯಲು ಅರ್ಹರಾಗಿರುತ್ತಾರೆ. ಕೆಳಗೆ ವಿವರಿಸಿದಂತೆ ಅವಕಾಶ ನಿರಾಕರಿಸಿದ ನಿದರ್ಶನವೊಂದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಜಲಸಂಪನ್ಮೂಲ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ ನೇಮಕಾತಿಗಾಗಿ ನಿರೀಕ್ಷಿತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿತು (22 ಜೂನ್ 2017). ಆದರೆ, ಅಧಿಸೂಚನೆಯು ಸ್ಕೋಲಿಯೋಸಿಸ್‌ನಂತಹ[9] ಕೆಲವು ಅಂಗವೈಕಲ್ಯತೆಗಳನ್ನು ಸೇರಿಸಿರಲಿಲ್ಲ. ಮೇಲಿನ ಅಧಿಸೂಚನೆಯಲ್ಲಿ ಅಂಗವೈಕಲ್ಯದ ಆಧಾರದ

[9] ಸ್ಕೋಲಿಯೋಸಿಸ್ ಬೆನ್ನುಮೂಳೆಯ ವಕ್ರತೆಯಾಗಿದ್ದು, ಇದು ಹದಿಹರೆಯದವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ ಮತ್ತು ಸೆರೆಬ್ರಲ್ ಪಾಲ್ಸಿ ಮತ್ತು ಸ್ನಾಯುಕ್ಷಯದಂತಹ ಪರಿಸ್ಥಿತಿಗಳಿರುವ ಜನರಲ್ಲಿ ಕಾಣಿಸಿಕೊಳ್ಳುತ್ತದೆ.

ಮೇಲೆ ತಾರತಮ್ಯವನ್ನು ಉಲ್ಲೇಖಿಸಿ ನಿರೀಕ್ಷಿತ ಅಭ್ಯರ್ಥಿಯೊಬ್ಬರು ನ್ಯಾಯವನ್ನು ಕೋರಿ ರಾಜ್ಯ ಆಯುಕ್ತರನ್ನು ಸಂಪರ್ಕಿಸಿದರು (14 ಜುಲೈ 2017).

ರಾಜ್ಯ ಆಯುಕ್ತರು ನೀಡಿದ ಸಮನ್ಸ್‌ಗೆ ಪ್ರತಿಕ್ರಿಯೆಯಾಗಿ ಜಲಸಂಪನ್ಮೂಲ ಇಲಾಖೆಯು (ಡಿಸೆಂಬರ್ 2017) ಡಿಡಬ್ಲ್ಯುಸಿಡಿ/ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ಉದ್ಯೋಗ ಗುರುತಿನ ಸಮಿತಿಯನ್ನು ಸಮಾಲೋಚಿಸಿ ಅದರಂತೆ ವಿಕಲಚೇತನ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು ನಿರ್ಧರಿಸಲಾಯಿತು ಎಂದು ತಿಳಿಸಿದರು. ಡಿಡಬ್ಲ್ಯುಸಿಡಿ ತನ್ನ ಪತ್ರದಲ್ಲಿ (26 ಜುಲೈ 2016) ಲೊಕೋಮೋಟರ್ ಅಸಾಮರ್ಥ್ಯ ಅಥವಾ ಸೆರೆಬ್ರಲ್ ಪಾಲ್ಸಿ ಬದಲಿಗೆ ಸೆರೆಬ್ರಲ್ ಪಾಲ್ಸಿಯ ಲೊಕೋಮೋಟರ್ ಅಸಾಮರ್ಥ್ಯ ಎಂದು ಉಲ್ಲೇಖಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸಂಪೂರ್ಣ ನೇಮಕಾತಿ ಪ್ರಕ್ರಿಯೆಯಲ್ಲಿ ಈ ಲೋಪವು ಗಮನಕ್ಕೆ ಬರಲಿಲ್ಲ. ಅರ್ಹತೆಗೆ ಒಳಪಟ್ಟು ಅಭ್ಯರ್ಥಿಯನ್ನು ನೇಮಿಸಿಕೊಳ್ಳುವಂತೆ ರಾಜ್ಯ ಆಯುಕ್ತರು ಆದೇಶ ನೀಡಿದ್ದರೂ (ಜೂನ್ 2018) ಅದನ್ನು ಅನುಷ್ಠಾನಗೊಳಿಸಿರಲಿಲ್ಲ.

ಹೀಗೆ, ಕಾನೂನಿನ ಅಸ್ತಿತ್ವದ ಹೊರತಾಗಿಯೂ, ಅರ್ಜಿದಾರರಿಗೆ ಮಾತ್ರವಲ್ಲದೆ ಇದೇ ರೀತಿಯ ವಿಕಲಾಂಗತೆ ಹೊಂದಿರುವ ಇತರ ನಿರೀಕ್ಷಿತ ಅಭ್ಯರ್ಥಿಗಳಿಗೆ ಅವಕಾಶವನ್ನು ನಿರಾಕರಿಸಿದಂತಾಯಿತು. ರಾಜ್ಯ ಆಯುಕ್ತರ ಆದೇಶವನ್ನು ಸರಕಾರಿ ಇಲಾಖೆ ಪಾಲನೆ ಮಾಡದಿರುವುದು ಅತ್ಯಂತ ವಿಷಾದನೀಯ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಿಲಿಲ್ಲ.

**ಶಿಫಾರಸು–7: ರಾಜ್ಯ ಸರ್ಕಾರವು ತನ್ನ ಯೋಜನೆಗಳು ಎಮ್‌ಎಸ್‌ಎಮ್‌ಇ/ ಎನ್‌ಹೆಚ್‌ಎಫ್‌ಡಿಸಿಯಿಂದ ಬೆಂಬಲಿತವಾದ ಸ್ವಯಂ ಉದ್ಯೋಗಾವಕಾಶಗಳನ್ನು ಪಡೆಯುವ ಗುರಿಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು.**

**ಶಿಫಾರಸು–8: ಸರ್ಕಾರವು ನಿರಾಮಯ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೊಳಿಸಬೇಕು ಮತ್ತು ಅಂಗವಿಕಲರಿಗೆ ಸಮರ್ಪಕ ಮತ್ತು ಕೈಗೆಟುಕುವ ಆರೋಗ್ಯ ಸೇವೆಗಳನ್ನು ಖಚಿತಪಡಿಸಿಕೊಳ್ಳಲು ಸರ್ಕಾರವೇ ನವೀಕರಣ ಮೊತ್ತವನ್ನು ಪಾವತಿಸುವುದನ್ನು ಪರಿಗಣಿಸಬೇಕು. ಇದಲ್ಲದೆ, ಸದಸ್ಯರು/ಚಂದಾದಾರರಿಗೆ ಹೆಚ್ಚುವರಿ ಆರ್ಥಿಕ ಪ್ರಯೋಜನಗಳನ್ನು ಒದಗಿಸುವುದಕ್ಕೆ ಪೋಷಕರು/ಚಂದಾದಾರರ ವಿಮಾ ಯೋಜನೆಯನ್ನು ಸುಧಾರಿಸಬೇಕು**

# ಅಧ್ಯಾಯ–VI

## ಪುನರ್ವಸತಿ

# ಅಧ್ಯಾಯ–VI: ಪುನರ್ವಸತಿ

*ಪ್ರಸ್ತಾವಿತ ಐದು ಜಿಲ್ಲೆಗಳಲ್ಲಿ ಮಾನಸ ಕೇಂದ್ರಗಳನ್ನು ಸ್ಥಾಪಿಸದಿರುವುದು, 14 ಜಿಲ್ಲೆಗಳಲ್ಲಿ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ (ಡಿಡಿಆರ್‌ಸಿ) ಮತ್ತು ಉದ್ದೇಶಿತ ಜಿಲ್ಲೆಗಳಲ್ಲಿ ಡೇಕೇರ್ ಕೇಂದ್ರಗಳನ್ನು ಸ್ಥಾಪಿಸದಿರುವುದು, ಜಿಲ್ಲೆಗಳಲ್ಲಿ ಡಿಡಿಆರ್‌ಎಸ್ ಸ್ಥಾಪನೆಗೆ ಕೇಂದ್ರದ ನೆರವು ಪಡೆಯದಿರುವುದು ಮತ್ತು ಮಾನಸ ಕೇಂದ್ರಗಳ/ಡಿಡಿಆರ್‌ಸಿಗಳ ಕಾರ್ಯನಿರ್ವಹಣೆಯ ಕಳಪೆ ಮೇಲ್ವಿಚಾರಣೆ ಅಧಿನಿಯಮದಲ್ಲಿ ಕಡ್ಡಾಯಗೊಳಿಸಿದ ಪುನರ್ವಸತಿ ಕ್ರಮಗಳಲ್ಲಿನ ನ್ಯೂನತೆಗಳನ್ನು ಸೂಚಿಸುತ್ತವೆ.*

ಪುನರ್ವಸತಿಯು ಅಂಗವಿಕಲ ವ್ಯಕ್ತಿಗಳು ಸ್ವತಂತ್ರ ಜೀವನವನ್ನು ನಡೆಸಲು ಸಬಲೀಕರಣಗೊಳಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಅಂಗವಿಕಲರು ಇತರರೊಂದಿಗೆ ಹಕ್ಕುಗಳನ್ನು ಸಮಾನವಾಗಿ ಅನುಭವಿಸುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಅಂಗವಿಕಲ ವ್ಯಕ್ತಿಗಳನ್ನು ಕ್ರೌರ್ಯ, ಅಮಾನವೀಯವಾಗಿ ನಡೆಸಿಕೊಳ್ಳುವುದು ಮತ್ತು ಎಲ್ಲಾ ರೀತಿಯ ನಿಂದನೆ, ಹಿಂಸೆ ಮತ್ತು ಶೋಷಣೆಯಿಂದ ರಕ್ಷಿಸಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಚ್ಛೇದ 27 ಪುನರ್ವಸತಿಗೆ ಒತ್ತು ನೀಡುವುದರಿಂದ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಎಲ್ಲಾ ಅಂಗವಿಕಲರಿಗೆ ಪುನರ್ವಸತಿಗಾಗಿ ಸೇವೆಗಳು ಮತ್ತು ಕಾರ್ಯಕ್ರಮಗಳನ್ನು ಅದರಲ್ಲೂ ವಿಶೇಷವಾಗಿ ಆರೋಗ್ಯ ಮತ್ತು ಉದ್ಯೋಗದ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕು. ಅದರಂತೆ, ಕೆಳಗೆ ವಿವರಿಸಿದಂತೆ ಪುನರ್ವಸತಿ ಕ್ರಮಗಳ ಭಾಗವಾಗಿ ಸರ್ಕಾರವು ಮಾನಸ ಕೇಂದ್ರಗಳು, ಡಿಡಿಆರ್‌ಸಿಗಳು ಮತ್ತು ಬುದ್ಧಿಮಾಂದ್ಯ ಮಹಿಳೆಯರಿಗೆ ಆಫ್ಟರ್ ಕೇರ್ ಹೋಮ್‌ಗಳನ್ನು ಸ್ಥಾಪಿಸಿತು.

**ಕೋಷ್ಟಕ–6.1: ಪುನರ್ವಸತಿ ಕ್ರಮಗಳ ವಿವರಗಳು**

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಉದ್ದೇಶಗಳು |
|---|---|---|
| 1 | ಮಾನಸ ಕೇಂದ್ರಗಳು | ಸಂಪೂರ್ಣ ಆಸ್ಪತ್ರೆಯ ಆರೈಕೆ ಅಗತ್ಯವಿಲ್ಲದ ಮಾನಸಿಕ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳಿಗೆ ಅಲ್ಪಾವಧಿಯ ತಂಗುವಿಕೆಗಳು |
| 2 | ಬುದ್ಧಿಮಾಂದ್ಯ ಮಹಿಳೆಯರಿಗೆ ಆಫ್ಟರ್ ಕೇರ್ ಹೋಮ್ | 18 ವರ್ಷ ಮೇಲ್ಪಟ್ಟ ಬುದ್ಧಿಮಾಂದ್ಯ ಮಹಿಳೆಯರಿಗೆ ವಸತಿ, ಅಲ್ಲಿ ಆಹಾರ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. |
| 3 | ದೀನದಯಾಳ್ ಅಂಗವಿಕಲರ ಪುನರ್ವಸತಿ ಯೋಜನೆ | ಅಂಗವಿಕಲರ ಪುನರ್ವಸತಿಗೆ ಅಗತ್ಯವಾದ ಸೇವೆಗಳನ್ನು ಒದಗಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ಹಣಕಾಸಿನ ನೆರವು ವಿಸ್ತರಣೆ |
| 4 | ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ | ಫಲಾನುಭವಿಗಳ ಮನೆ ಬಾಗಿಲಿಗೆ ಸಮಗ್ರ ಪುನರ್ವಸತಿ ಸೇವೆಗಳನ್ನು ಒದಗಿಸುವುದು. |
| 5 | ಡೇಕೇರ್ ಕೇಂದ್ರಗಳು | ಆಟಿಸಮ್, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯತೆ ಮತ್ತು ಬಹು ಅಂಗವೈಕಲ್ಯ ಹೊಂದಿರುವ ಮಕ್ಕಳಿಗೆ |

ಆಧಾರ: ಇಲಾಖೆಯು ಒದಗಿಸಿದ ಮಾಹಿತಿ

2017–18ರಿಂದ 2022–23ರ ಅವಧಿಯಲ್ಲಿ ಬಿಡುಗಡೆ ಮಾಡಲಾದ ₹441.41 ಕೋಟಿಗೆ ಪ್ರತಿಯಾಗಿ ₹370.52 ಕೋಟಿಯನ್ನು ಮಾನಸ ಕೇಂದ್ರಗಳು, ಡಿಡಿಆರ್‌ಸಿಗಳು ಹಾಗೂ ಪುರುಷ ಮತ್ತು ಮಹಿಳೆಯರ ಆಫ್ಟರ್ ಕೇರ್ ಹೋಮ್‌ಗಳಿಗೆ ಅನುದಾನ ಸೇರಿದಂತೆ, ಅಂಗವಿಕಲರ ಪುನರ್ವಸತಿಗಾಗಿ ವೆಚ್ಚ ಮಾಡಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸೀಮಿತ ಸಿಬ್ಬಂದಿಯನ್ನು ಹೊಂದಿರುವ ಪುನರ್ವಸತಿ ಕೇಂದ್ರಗಳ ಕಾರ್ಯನಿರ್ವಹಣೆ, ಡಿಡಿಆರ್‌ಎಸ್ ಮತ್ತು ಡಿಡಿಆರ್‌ಸಿಗಳಂತಹ ಸಂಸ್ಥೆಗಳಿಗೆ ಕೇಂದ್ರದ ಅನುದಾನವನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವಲ್ಲಿ ವಿಫಲತೆ, ಡೇಕೇರ್ ಕೇಂದ್ರಗಳನ್ನು ಸ್ಥಾಪಿಸದಿರುವುದು ಮತ್ತು ಈ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ

ಗಮನಿಸಲಾದ ಲೆಕ್ಕಪರಿಶೋಧನಾ ಅವಲೋಕನಗಳನ್ನು ಈ ಅಧ್ಯಾಯದ ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

## 6.1 ಮಾನಸ ಕೇಂದ್ರಗಳು

ಸಂಪೂರ್ಣ ಆಸ್ಪತ್ರೆ ಆರೈಕೆಯ ಅಗತ್ಯವಿಲ್ಲದ ಆದರೆ ಸಾಕಷ್ಟು ವೃತ್ತಿಪರ ಮೇಲ್ವಿಚಾರಣೆ ಮತ್ತು ಬೆಂಬಲವಿಲ್ಲದೆ ಸಮಾಜದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗದ ಮಾನಸಿಕ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಇಲಾಖೆಯು ರಾಜ್ಯದಲ್ಲಿ ಮಾನಸ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿತ್ತು (ಆಗಸ್ಟ್ 2006). ಬಳ್ಳಾರಿ, ಬೆಳಗಾವಿ, ಬೆಂಗಳೂರು, ರಾಯಚೂರು ಮತ್ತು ಶಿವಮೊಗ್ಗದಲ್ಲಿ ಐದು ಮಾನಸ ಕೇಂದ್ರಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು (ಆಗಸ್ಟ್ 2007) ಅನುಮತಿಯನ್ನು ನೀಡಿತು. ಪ್ರತಿ ಮಾನಸ ಕೇಂದ್ರಕ್ಕೆ ಸಮಾಜ ಸೇವಕ ಮತ್ತು ಮನೋವೈದ್ಯರನ್ನು ಒಳಗೊಂಡಂತೆ ಒಟ್ಟು 17 ಹುದ್ದೆಗಳನ್ನು ಮಂಜೂರು ಮಾಡಲಾಗಿತ್ತು. ಆದರೆ, ಸ್ಥಾಪಿಸಲಾದ ಐದು ಮಾನಸ ಕೇಂದ್ರಗಳಲ್ಲಿ ಎರಡು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು.

ಬೆಂಗಳೂರಿನ ಮಾನಸ ಕೇಂದ್ರದಲ್ಲಿ 2017–18ರಿಂದ 2019–20ರ ಅವಧಿಯಲ್ಲಿ ವಾರಕ್ಕೊಮ್ಮೆ ಭೇಟಿ ನೀಡಬೇಕಿದ್ದ ಮನೋವೈದ್ಯರು 15 ದಿನಕ್ಕೊಮ್ಮೆ ಮಾತ್ರ ಭೇಟಿ ನೀಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಪ್ರದರ್ಶಿಕೆ–6.1: ಮಾನಸ ಕೇಂದ್ರ ಬೆಂಗಳೂರು**




ಆಧಾರ: ಜಂಟಿ ಭೌತಿಕ ಪರಿಶೀಲನೆಯಲ್ಲಿ ತೆಗೆದ ಛಾಯಾಚಿತ್ರಗಳು

ಮಾನಸ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 48 ನಿವಾಸಿಗಳು 2011–12ರಿಂದ 2021–22ರ ಅವಧಿಯಲ್ಲಿ ಪರಾರಿಯಾಗಿರುವುದನ್ನು ಗಮನಿಸಲಾಯಿತು, ಇದುವರೆಗೆ ಇಬ್ಬರನ್ನು ಮಾತ್ರ ಪತ್ತೆ ಮಾಡಲಾಗಿದೆ. ಇದೊಂದು ಗಂಭೀರ ವಿಚಾರವಾಗಿದ್ದು, ಮುಂದೆ ಇಂತಹ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ನಿರ್ಗಮನ ಸಮಾವೇಶದಲ್ಲಿ ತಿಳಿಸಲಾಯಿತು.

ಬೆಳಗಾವಿಯ ಮಾನಸ ಕೇಂದ್ರದಲ್ಲಿ ಮಂಜೂರಾದ 17 ಸಿಬ್ಬಂದಿಯ ಪೈಕಿ 11 ಮಂದಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದರು. ಮಂಜೂರಾದ ಎಲ್ಲಾ ನಾಲ್ಕು ನರ್ಸ್ ಹುದ್ದೆಗಳು 2015–16ರಿಂದ ಖಾಲಿ ಇದ್ದು, ಕೇಂದ್ರವು ಪ್ರಾರಂಭವಾದಾಗಿನಿಂದ 2014–15ರವರೆಗೆ ಕೇವಲ ಇಬ್ಬರು ನರ್ಸ್‌ಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದರು. ತತ್ಪರಿಣಾಮವಾಗಿ ವೈದ್ಯರು ನಿಯಮಿತವಾಗಿ ಭೇಟಿ ನೀಡಿದರೂ ಸಹ ನಿವಾಸಿಗಳ ಆರೈಕೆಯಲ್ಲಿ ರಾಜಿ ಮಾಡಿಕೊಳ್ಳಲಾಗಿತ್ತು. ಈ ವಿಷಯವಾಗಿ ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಕ್ಷೇತ್ರದಲ್ಲಿ ಜಾಗತಿಕವಾಗಿ ಮಾನ್ಯತೆ ಪಡೆದಿರುವ ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಗೆ (ನಿಮ್ಹಾನ್ಸ್) ಮಾನಸ ಕೇಂದ್ರಗಳ ನಿರ್ವಹಣೆಯನ್ನು ಹಸ್ತಾಂತರಿಸಲು ರಾಜ್ಯ ಸರ್ಕಾರವು ಪ್ರಸ್ತಾವಿಸಿತು (ಡಿಸೆಂಬರ್ 2016). ನಿಮ್ಹಾನ್ಸ್ ಮೂರು ವರ್ಷಗಳ ಆರಂಭಿಕ ಅವಧಿಗೆ ಬೆಂಗಳೂರಿನ ಮಾನಸ ಕೇಂದ್ರವನ್ನು ನಿರ್ವಹಿಸಲು ಕಾರ್ಯಸಾಧ್ಯತಾ ಯೋಜನೆ/ನೀಲನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸಿತ್ತು ಮತ್ತು ಅದು ಯಶಸ್ವಿಯಾದರೆ, ಇತರ ಮಾನಸ ಕೇಂದ್ರಗಳನ್ನು ಸ್ವಾಧೀನಪಡಿಸಿಕೊಳ್ಳಲು ತಯಾರಾಗಿತ್ತು. ಮಾನಸಿಕ ಬುದ್ಧಿಮಾಂದ್ಯ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ಮರಳಿ ತರಲು ವೃತ್ತಿಪರ ಮನೋವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲು ಅನಾಥ ಆರೈಕೆ ಕೇಂದ್ರವನ್ನು ಸ್ಥಾಪಿಸಲು ಯೋಜನೆಯು ಪ್ರಸ್ತಾಪಿಸಿದೆ.

ಮಾನಸ ಕೇಂದ್ರಗಳ ನಿರ್ವಹಣೆಯನ್ನು ನಿಮ್ಹಾನ್ಸ್‌ಗೆ ಹಸ್ತಾಂತರಿಸಲು ಇಲಾಖೆಯ ಕಡೆಯಿಂದ ಉಪಕ್ರಮದ ಕೊರತೆಯು ಮಾನಸಿಕ ಅಸ್ವಸ್ಥತೆ ಹೊಂದಿರುವ ರೋಗಿಗಳಿಗೆ ಸಾಕಷ್ಟು ವೃತ್ತಿಪರ ವೈದ್ಯಕೀಯ ಮೇಲ್ವಿಚಾರಣೆ ಮತ್ತು ಬೆಂಬಲವನ್ನು ವಂಚಿತಗೊಳಿಸಿತು. ಮಾನಸ ಕೇಂದ್ರಗಳನ್ನು ನಿರ್ವಹಿಸಲು ಸಲ್ಲಿಸಿದ ನೀಲನಕ್ಷೆಯೊಂದಿಗೆ ನಿಮ್ಹಾನ್ಸ್‌ನೊಂದಿಗೆ ಸಮನ್ವಯಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ನಿರ್ಗಮನ ಸಮ್ಮೇಳನದಲ್ಲಿ ತಿಳಿಸಲಾಯಿತು.

## 6.2 ಬುದ್ಧಿಮಾಂದ್ಯ ಮಹಿಳೆಯರಿಗೆ ಆಫ್ಟರ್ ಕೇರ್ ಹೋಮ್

ರಾಜ್ಯ ಸರ್ಕಾರವು (1972)ರಲ್ಲಿ 18 ವರ್ಷ ಮೇಲ್ಪಟ್ಟ ಬುದ್ಧಿಮಾಂದ್ಯ ಹೆಣ್ಣುಮಕ್ಕಳಿಗೆ ಮತ್ತು ಮಹಿಳೆಯರಿಗೆ ಆರೈಕೆ, ರಕ್ಷಣೆ, ಆಶ್ರಯ, ವೈದ್ಯಕೀಯ ಮತ್ತು ಮನೋವೈದ್ಯಕೀಯ ಚಿಕಿತ್ಸೆ ಮತ್ತು ತರಬೇತಿಯನ್ನು (ಸಾಧ್ಯವಾದಲ್ಲೆಲ್ಲಾ) ಒದಗಿಸುವ ನಿರ್ದಿಷ್ಟ ಉದ್ದೇಶದೊಂದಿಗೆ ಕರ್ನಾಟಕದ ನಿವಾಸಿಗಳಾಗಿರುವ ಬುದ್ಧಿಮಾಂದ್ಯ ಮಹಿಳೆಯರಿಗೆ ಆಫ್ಟರ್ ಕೇರ್ ಹೋಮ್‌ಅನ್ನು ಸ್ಥಾಪಿಸಿತ್ತು. ನ್ಯಾಯಾಲಯಗಳು/ಮಹಿಳಾ ಮತ್ತು ಮಕ್ಕಳ ನಿರ್ದೇಶಕರು/ಜಿಲ್ಲಾಧಿಕಾರಿಗಳ ಆದೇಶದ ಮೂಲಕ ಪ್ರವೇಶ ಪಡೆದ ನಿವಾಸಿಗಳಿಗೆ ಆಹಾರ, ವಸತಿ, ಬಟ್ಟೆ ಮತ್ತು ಹಾಸಿಗೆಗಳನ್ನು ಒದಗಿಸಲಾಗುತ್ತದೆ ಮತ್ತು ನಿಮ್ಹಾನ್ಸ್ ವೈದ್ಯರ ವೈದ್ಯಕೀಯ ಪ್ರಮಾಣಪತ್ರದ ಆಧಾರದ ಮೇಲೆ ಸೌಮ್ಯ, ಮಧ್ಯಮ, ಆಳವಾದ ಮತ್ತು ತೀವ್ರವಾದ ಬುದ್ಧಿಮಾಂದ್ಯತೆ ಎಂದು ಪ್ರತ್ಯೇಕಿಸಲಾಗುತ್ತದೆ.

ಸಂಸ್ಥೆಯನ್ನು ನಡೆಸಲು ರಾಜ್ಯ ಸರ್ಕಾರವು 34 ಹುದ್ದೆಗಳನ್ನು ಮಂಜೂರು ಮಾಡಿತ್ತು (ಮಾರ್ಚ್ 1972 ಮತ್ತು ಜನವರಿ 1983) ಹಾಗೂ ಸಂಸ್ಥೆಯ ನಿರ್ವಹಣೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಅಕ್ಟೋಬರ್ 2010ರಲ್ಲಿ ವರ್ಗಾಯಿಸಿದಾಗ ಅದನ್ನು 27ಕ್ಕೆ ಪರಿಷ್ಕರಿಸಲಾಯಿತು. ಆಫ್ಟರ್ ಕೇರ್ ಹೋಮ್‌ಅನ್ನು ಒಳಗೊಂಡಿರುವ ಬೆಂಗಳೂರು ಪುನರ್ವಸತಿ ಸಂಕೀರ್ಣದಲ್ಲಿರುವ ನಿವಾಸಿಗಳನ್ನು ನೋಡಿಕೊಳ್ಳಲು ಇಬ್ಬರು ಮಹಿಳಾ ವೈದ್ಯಾಧಿಕಾರಿಗಳನ್ನು (ಎರಡು ಪಾಳಿಯಲ್ಲಿ ತಲಾ ಎಂಟು ಗಂಟೆಗಳು) ಹಾಗೂ ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿಯ ಹುದ್ದೆಗಳ ರಚನೆಗೆ ಮಂಜೂರಾತಿಯನ್ನು ಸರ್ಕಾರವು ನೀಡಿತ್ತು (ಮಾರ್ಚ್ 1995).

ಜಿಲ್ಲಾಧಿಕಾರಿಗಳು (ಡಿಸಿ), ಆರೋಗ್ಯ ಇಲಾಖೆ, ಮಾನಸಿಕ ಆಸ್ಪತ್ರೆಗಳು ಮತ್ತು ನಿಮ್ಹಾನ್ಸ್‌ನ ಮೂವರು ಅಧಿಕಾರಿಗಳು ಮತ್ತು ಅನಧಿಕೃತ ಸದಸ್ಯರನ್ನು (ಮಾನಸಿಕ ವಿಕಲಾಂಗ ವ್ಯಕ್ತಿಗಳೊಂದಿಗೆ ಕೆಲಸ ಮಾಡುವ ಕ್ಷೇತ್ರದಲ್ಲಿ ಅನುಭವ ಹೊಂದಿರುವವರು) ಒಳಗೊಂಡಿರುವ ವ್ಯವಸ್ಥಾಪಕ ಸಮಿತಿಯನ್ನು ರಚಿಸಬೇಕಿತ್ತು. ಆ ಸಮಿತಿಯು ನಿವಾಸಿಗಳ ದಾಖಲಾತಿ ಮತ್ತು ಹೊರ ಹೋಗುವುದು, ತರಬೇತಿ ಮತ್ತು ಪುನರ್ವಸತಿ ಇತ್ಯಾದಿಗಳ ಬಗ್ಗೆ ಆಫ್ಟರ್ ಕೇರ್ ಹೋಮ್‌ನ ಸೂಕ್ತವಾದ ನಿರ್ವಹಣೆಗಾಗಿ ನಿರ್ದೇಶಕರಿಗೆ ಉಪದೇಶ ಮಾಡುತ್ತದೆ.

ಈ ವಿಷಯವಾಗಿ ಲೆಕ್ಕಪರಿಶೋಧನೆಯು ಕೆಳಗಿನ ಅಂಶಗಳನ್ನು ಗಮನಿಸಿತು:

- ಇಬ್ಬರು ಮಹಿಳಾ ವೈದ್ಯಕೀಯ ಅಧಿಕಾರಿಗಳನ್ನು ನೇಮಿಸಲಾಗಿದ್ದರೂ, ಅವರು ನಿವಾಸಿಗಳ ಆರೋಗ್ಯ ತಪಾಸಣೆ ಮಾಡುತ್ತಿರಲಿಲ್ಲ ಮತ್ತು ನಿವಾಸಿಗಳ ಆರೋಗ್ಯ ಮತ್ತು ಮಾನಸಿಕ ಸ್ಥಿತಿಯ ಬಗ್ಗೆ ನಿಯತಕಾಲಿಕ ವರದಿಗಳನ್ನು ದಾಖಲಿಸುತ್ತಿರಲಿಲ್ಲ (94 ನಿವಾಸಿಗಳು).
- ವ್ಯವಸ್ಥಾಪಕ ಸಮಿತಿಯನ್ನು ರಚಿಸದಿರುವುದು ವೈದ್ಯಕೀಯ ಅಧಿಕಾರಿಗಳು ಭೇಟಿ ನೀಡದಿರುವುದು ಮತ್ತು ಇತರ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗದಿರುವಲ್ಲಿ ಪರಿಣಮಿಸಿತು.
- ಸಂಸ್ಥೆಯು ವಿಶೇಷವಾಗಿ ಮಹಿಳೆಯರು ಮತ್ತು ಬಾಲಕಿಯರಿಗೆ ಮೀಸಲಾಗಿರುವುದರಿಂದ, ಮಹಿಳಾ ಪ್ರೊಬೇಷನರಿ ಅಧಿಕಾರಿ ಮತ್ತು ಅಧೀಕ್ಷಕರನ್ನು ನಿಯೋಜಿಸುವುದು ಸಮಸ್ಯೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ಈ ಸಂಸ್ಥೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಇಲಾಖೆಯು ಗ್ರೇಡ್-2 ಪುರುಷ ಪ್ರೊಬೇಷನರಿ ಅಧಿಕಾರಿಯನ್ನು ನಿಯೋಜಿಸಿರುವುದನ್ನು (ಮೇ 2018) ಲೆಕ್ಕಪರಿಶೋಧನೆಯು ಗಮನಿಸಿತು. ಅವರ ವಿರುದ್ಧ ದೂರುಗಳನ್ನು ಸ್ವೀಕರಿಸಿದ ಪರಿಣಾಮವಾಗಿ ಅಧಿಕಾರಿಯನ್ನು ಬೆಂಗಳೂರಿನ ಸಮಾಜ ಸೇವಾ ಸಂಕೀರ್ಣದಲ್ಲಿ ಖಾಲಿ ಇರುವ ಪ್ರೊಬೇಷನರಿ ಅಧಿಕಾರಿ ಹುದ್ದೆಗೆ ನಿಯೋಜಿಸಲಾಯಿತು (ಫೆಬ್ರವರಿ 2021) ಮತ್ತು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇನ್ನೊಬ್ಬ ಮಹಿಳಾ ಪ್ರೊಬೇಷನರಿ ಅಧಿಕಾರಿಗೆ ಸೂಪರಿಂಟೆಂಡೆಂಟ್ ಹುದ್ದೆಯ ಉಸ್ತುವಾರಿ ವಹಿಸಲಾಯಿತು.

## 6.3 ದೀನದಯಾಳ್ ಅಂಗವಿಕಲರ ಪುನರ್ವಸತಿ ಯೋಜನೆ

ಅಂಗವಿಕಲ ವ್ಯಕ್ತಿಗಳ ಅಧಿನಿಯಮ, 1995ರ ಪರಿಚ್ಛೇದ 66ರ ಅನುಪಾಲನೆಯಲ್ಲಿ, ಅಂಗವಿಕಲ ವ್ಯಕ್ತಿಗಳ ಪುನರ್ವಸತಿಗಾಗಿ ಅಸ್ತಿತ್ವದಲ್ಲಿರುವ ನಾಲ್ಕು ಯೋಜನೆಗಳನ್ನು 1999ರಲ್ಲಿ "ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳಿಗೆ ಸ್ವಯಂಪ್ರೇರಿತ ಕ್ರಮವನ್ನು ಉತ್ತೇಜಿಸುವ ಯೋಜನೆ" ಎಂದು ಕರೆಯಲ್ಪಡುವ ಒಂದು ಕೇಂದ್ರ ವಲಯ ಯೋಜನೆಯೊಂದಿಗೆ ವಿಲೀನಗೊಳಿಸಲಾಯಿತು. ವಿಲೀನಗೊಂಡ ಯೋಜನೆಯನ್ನು ಏಪ್ರಿಲ್ 2003ರಲ್ಲಿ ಪರಿಷ್ಕರಿಸಿ "ದೀನದಯಾಳ್ ಅಂಗವಿಕಲರ ಪುನರ್ವಸತಿ ಯೋಜನೆ" (ಡಿಡಿಆರ್ಎಸ್) ಎಂದು ಮರುನಾಮಕರಣ ಮಾಡಲಾಯಿತು.

ಈ ಯೋಜನೆಯಡಿಯಲ್ಲಿ, ಸ್ವಯಂಸೇವಾ ಸಂಸ್ಥೆಗಳಿಗೆ ಆರಂಭಿಕ ಹಸ್ತಕ್ಷೇಪ, ದೈನಂದಿನ ಜೀವನ ಕೌಶಲ್ಯಗಳ ಅಭಿವೃದ್ಧಿ, ಶಿಕ್ಷಣ ಮತ್ತು ತರಬೇತಿ ಸೇರಿದಂತೆ ಅಂಗವಿಕಲರ ಪುನರ್ವಸತಿಗೆ ಅಗತ್ಯವಾದ ಸಂಪೂರ್ಣ ಶ್ರೇಣಿಯ ಸೇವೆಗಳನ್ನು ನೀಡಲು ಹಣಕಾಸಿನ ನೆರವು ನೀಡಲಾಯಿತು.

ರಾಜ್ಯದಲ್ಲಿ ಕೇವಲ ಮೂರು[10] ಸಂಸ್ಥೆಗಳು ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದಿಂದ ಹಣವನ್ನು ಪಡೆಯುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರಿಶೀಲನೆಯ ಅವಧಿಯಲ್ಲಿ, ರಾಜ್ಯ ಸರ್ಕಾರವು 13 ಪ್ರಸ್ತಾವನೆಗಳನ್ನು ಮಾತ್ರ ಕಳುಹಿಸಿದ್ದು, ಈ ಅವಧಿಯಲ್ಲಿ

[10] ಶ್ರೀ ರಮಣ ಮಹರ್ಷಿ ಅಂಧರ ಅಕಾಡೆಮಿ, ಬೆಂಗಳೂರು, ವಿಶ್ವಧಾಮ ಮಹಿಳಾ ಮತ್ತು ಮಕ್ಕಳ ಶಿಕ್ಷಣ ಸೇವಾಶ್ರಮ ಸಮಿತಿ, ಧಾರವಾಡ ಹಾಗೂ ವಿಕಲಚೇತನರಿಗಾಗಿ ಶ್ರೀ ರಮಣ ಮಹರ್ಷಿ ಟ್ರಸ್ಟ್, ಕೆಜಿಎಫ್.

ಭಾರತ ಸರ್ಕಾರವು ಸ್ವೀಕರಿಸಿದ ಒಟ್ಟು 2,024 ಪ್ರಸ್ತಾವನೆಗಳಲ್ಲಿ ಅವುಗಳು ಶೇಕಡಾ ಒಂದಕ್ಕಿಂತ ಕಡಿಮೆಯಿದ್ದಿತು.

ಸರ್ಕಾರೇತರ ಸಂಸ್ಥೆಗಳಿಂದ ಯಾವುದಾದರೂ ಪ್ರಸ್ತಾವನೆಗಳು ಸ್ವೀಕೃತವಾಗಿದ್ದರೆ ಅವುಗಳನ್ನು ಶಿಫಾರಸು ಮಾಡಿ ಕೇಂದ್ರ ಸರ್ಕಾರಕ್ಕೆ ರವಾನಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು. ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಿರುವುದರಿಂದ ಹಾಗೂ ರಾಜ್ಯದ ಅಂಗವಿಕಲ ವ್ಯಕ್ತಿಗಳ ಅನುಕೂಲಕ್ಕಾಗಿ ಹೆಚ್ಚಿನ ಸಂಸ್ಥೆಗಳನ್ನು ಗುರುತಿಸಲು ಮತ್ತು ಉತ್ತೇಜಿಸಲು ಈ ಕೇಂದ್ರ ವಲಯದ ಯೋಜನೆಯ ಲಾಭವನ್ನು ಪಡೆಯಲು ರಾಜ್ಯ ಸರ್ಕಾರವು ವಿಫಲವಾದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

## 6.4 ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳು

ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ (ಡಿಡಿಆರ್‌ಸಿ) ಯೋಜನೆಯನ್ನು 1999–2000ರಿಂದ ಜಾರಿಗೊಳಿಸಲಾಗಿದೆ.

ಶಿಬಿರ ವಿಧಾನ, ಜಾಗೃತಿ ಮೂಡಿಸುವಿಕೆ, ಆರಂಭಿಕ ಪತ್ತೆ ಮತ್ತು ಮಧ್ಯಸ್ಥಿಕೆ, ನಿಬಂಧನೆ/ಫಿಟ್‌ಮೆಂಟ್, ಸಹಾಯಕ ಸಾಧನಗಳ ಅನುಸರಣೆ ಮತ್ತು ದುರಸ್ತಿ, ಫಿಸಿಯೋಥೆರಪಿ, ಸ್ಪೀಚ್ ಥೆರಪಿ ಮುಂತಾದ ಚಿಕಿತ್ಸಕ ಸೇವೆಗಳು, ಅಂಗವಿಕಲರು ಅವರ ಪೋಷಕರು ಮತ್ತು ಕುಟುಂಬದ ಸದಸ್ಯರಿಗೆ ಮಾರ್ಗದರ್ಶನ, ಸ್ವಯಂ ಉದ್ಯೋಗಕ್ಕಾಗಿ ಸಾಲಗಳ ವ್ಯವಸ್ಥೆ, ತಡೆರಹಿತ ಪರಿಸರದ ಉತ್ತೇಜನ ಮತ್ತು ಜಿಲ್ಲೆಯಲ್ಲಿ ಅಂಗವಿಕಲರ ಸಬಲೀಕರಣಕ್ಕಾಗಿ ಕೆಲಸ ಮಾಡುವ ಸಂಸ್ಥೆಗಳ ದತ್ತಾಂಶವನ್ನು ನಿರ್ವಹಿಸುವುದು, ಇವುಗಳ ಮೂಲಕ ಅಂಗವಿಕಲರ ಸಮೀಕ್ಷೆ ಮತ್ತು ಗುರುತಿಸುವಿಕೆಯನ್ನು ಡಿಡಿಆರ್‌ಸಿಗಳು ಸುಗಮಗೊಳಿಸಬೇಕು.

ಪ್ರತಿ ಡಿಡಿಆರ್‌ಸಿಯು ಜಿಲ್ಲಾಧಿಕಾರಿ ನೇತೃತ್ವದ ಜಿಲ್ಲಾ ನಿರ್ವಹಣಾ ತಂಡದ (ಡಿಎಮ್‌ಟಿ) ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಬೇಕಿತ್ತು. ಡಿಎಮ್‌ಟಿ ಒಂದು ಅನುಷ್ಠಾನ ಏಜೆನ್ಸಿಯನ್ನು ಗುರುತಿಸಬೇಕಿತ್ತು ಹಾಗೂ ರೆಡ್ ಕ್ರಾಸ್ ಸೊಸೈಟಿ ಅಥವಾ ರಾಜ್ಯ ಸರ್ಕಾರದ ಸ್ವಾಯತ್ತ/ಅರೆ ಸ್ವಾಯತ್ತ ಸಂಸ್ಥೆಗಳು ಅಥವಾ ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಗೆ ಪ್ರಾಶಸ್ತ್ಯ ಕೊಡಬೇಕಿತ್ತು. ಯೋಜನೆಯ ಅನುಷ್ಠಾನದ ಪರಿಶೀಲನೆಯ ಮೇಲಿನ ಲೆಕ್ಕಪರಿಶೋಧನಾ ಆವಿಷ್ಕಾರಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

### *6.4.1 ಡಿಡಿಆರ್‌ಸಿಗಳ ಸ್ಥಾಪನೆ*

ಯೋಜನಾ ಮಾರ್ಗಸೂಚಿಗಳ ಪ್ರಕಾರ, ಡಿಡಿಆರ್‌ಸಿಗಳು ಗರಿಷ್ಠ 12 ಸಿಬ್ಬಂದಿಯನ್ನು ಹೊಂದಿರಬಹುದು, ಅದರಲ್ಲಿ ನಿರ್ದಿಷ್ಟ ಅರ್ಹತೆಗಳನ್ನು ಹೊಂದಿರುವ ಕ್ಲಿನಿಕಲ್ ಸೈಕಾಲಜಿಸ್ಟ್, ಫಿಸಿಯೋಥೆರಪಿಸ್ಟ್, ಪ್ರಾಸ್ಥೆಟಿಸ್ಟ್/ ಆರ್ಥೋಟಿಸ್ಟ್, ಸ್ಪೀಚ್ ಥೆರಪಿಸ್ಟ್, ಮೊಬಿಲಿಟಿ ಇನ್‌ಸ್ಟ್ರಕ್ಟರ್ ಮತ್ತು ಇತರ ತಾಂತ್ರಿಕ ಮತ್ತು ಪೋಷಕ ಸಿಬ್ಬಂದಿಗಳಿದ್ದರು. ಈ ವೃತ್ತಿಪರರಿಗೆ ನಿಗದಿತ ಮಾನದಂಡಗಳ ಪ್ರಕಾರ ನಿಶ್ಚಿತ ಗೌರವಧನವನ್ನು ಪಾವತಿಸಬೇಕು ಮತ್ತು ಆರ್‌ಸಿಐನಲ್ಲಿ ನೋಂದಾಯಿಸಿದವರಿಗೆ ಆದ್ಯತೆ ನೀಡಬೇಕು.

ಪ್ರಾರಂಭಿಕವಾಗಿ ರಾಜ್ಯ ಸರ್ಕಾರವು 1999–2000ರಿಂದ ಕೇಂದ್ರ ನೆರವಿನ ಮೂಲಕ ಎಂಟು ಜಿಲ್ಲೆಗಳಲ್ಲಿ ಡಿಡಿಆರ್‌ಸಿಗಳನ್ನು ಸ್ಥಾಪಿಸಿತು ಮತ್ತು 2011–12ರಿಂದ ಈ ಸಂಸ್ಥೆಗಳಿಗೆ ಆಯವ್ಯಯ ಹಂಚಿಕೆಯ ಮೂಲಕ ಹಣವನ್ನು ನೀಡಲು ಪ್ರಾರಂಭಿಸಿತು. ತರುವಾಯ, ರಾಜ್ಯದ ಎಲ್ಲಾ

ಜಿಲ್ಲೆಗಳಲ್ಲಿ ಡಿಡಿಆರ್‌ಸಿಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಅನುಮೋದನೆ ನೀಡಿತ್ತು (ಮೇ 2016) ಮತ್ತು ಪ್ರತಿ ಕೇಂದ್ರಕ್ಕೆ ವಾರ್ಷಿಕ ಅನುದಾನವನ್ನು ₹28 ಲಕ್ಷದಿಂದ ₹36 ಲಕ್ಷಕ್ಕೆ ಹೆಚ್ಚಿಸುವ ಮೂಲಕ ಒಟ್ಟು ₹10.80 ಕೋಟಿಗಳ ಒಟ್ಟು ಆಯವ್ಯಯವನ್ನು ಒದಗಿಸಿತ್ತು. ಪ್ರಸ್ತುತ ರಾಜ್ಯದಲ್ಲಿ 16 ಡಿಡಿಆರ್‌ಸಿಗಳಿವೆ.

#### 6.4.1.1 ಡಿಡಿಆರ್‌ಸಿಗಳ ಕಾರ್ಯವೈಖರಿ

ಡಿಡಿಆರ್‌ಸಿ ಸಿಬ್ಬಂದಿ ನಿರ್ವಹಿಸಬೇಕಾದ ಕರ್ತವ್ಯಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪುನರ್ವಸತಿ ಕಾರ್ಯಕರ್ತರು (ವಿಆರ್‌ಡಬ್ಲ್ಯುಗಳು) ಮತ್ತು ತಾಲ್ಲೂಕು ಮಟ್ಟದಲ್ಲಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (ಎಮ್‌ಆರ್‌ಡಬ್ಲ್ಯುಗಳು) ನಿರ್ವಹಿಸುವ ಅಂಗವಿಕಲ ಪಿಂಚಣಿಗಾಗಿ ವ್ಯಕ್ತಿಗಳ ಗುರುತಿಸುವಿಕೆ (ಪಿಹೆಚ್‌ಪಿ), ಅಂಗವೈಕಲ್ಯ ಪ್ರಮಾಣಪತ್ರ, ಗುರುತಿನ ಕಾರ್ಡ್‌ಗಳು, ಬಸ್ ಪಾಸ್‌ಗಳ ನೀಡಿಕೆ, ಆಧಾರ ಯೋಜನೆಯ ಅನುಷ್ಠಾನ ಇತ್ಯಾದಿ ಕರ್ತವ್ಯಗಳಿಗೆ ಹೋಲುತಿದ್ದವು ಎಂಬುದು ಡಿಡಿಆರ್‌ಸಿಗಳ ಕಾರ್ಯನಿರ್ವಹಣೆಯ ಪರಿಶೀಲನೆಯಿಂದ ತಿಳಿದುಬಂದಿತು. ತತ್ಪರಿಣಾಮವಾಗಿ, ಮೇಲಿನ ವಿಷಯಗಳಲ್ಲಿ ಡಿಡಿಆರ್‌ಸಿಯ ಪಾತ್ರವು ನಗಣ್ಯವಾಗಿತ್ತು ಮತ್ತು ಕೆಲಸದ ನಕಲು ಮಾಡುವುದಾಗಿತ್ತು.

ಅಸ್ತಿತ್ವದಲ್ಲಿರುವ 16ರಲ್ಲಿ ಎಂಟು ಡಿಡಿಆರ್‌ಸಿಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ–ತನಿಖೆ ಮಾಡಲಾಯಿತು. ಪರೀಕ್ಷಾ–ತನಿಖೆ ನಡೆಸಿದ ಡಿಡಿಆರ್‌ಸಿಗಳ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಗಮನಿಸಲಾದ ಅವಲೋಕನಗಳು ಕೆಳಕಂಡಂತಿವೆ:

- ವಿಕಲಚೇತನ ಮಕ್ಕಳನ್ನು ಗುರುತಿಸಲು ಮತ್ತು ಅವರಿಗೆ ಅಗತ್ಯ ಬೆಂಬಲ ನೀಡಲು ಗ್ರಾಮಗಳಲ್ಲಿ ಶಿಬಿರಗಳನ್ನು ನಡೆಸಬೇಕು. ಇದಕ್ಕೆ ಪ್ರಾಸ್ತೆಟಿಕ್ಸ್ ಮತ್ತು ಆರ್ಥೋಟಿಕ್ಸ್ ಇಂಜಿನಿಯರ್, ಸ್ಪೀಚ್ ಥೆರಪಿಸ್ಟ್, ಮೊಬಿಲಿಟಿ ಇನ್‌ಸ್ಟ್ರಕ್ಟರ್ ಮತ್ತು ಇಯರ್ ಮೋಲ್ಡ್ ತಂತ್ರಜ್ಞರಂತಹ ತಾಂತ್ರಿಕ ಸಿಬ್ಬಂದಿ ಭಾಗವಹಿಸುವ ಅಗತ್ಯವಿದೆ. ಆದಾಗ್ಯೂ, ಡಿಡಿಆರ್‌ಸಿಗಳನ್ನು ಸ್ಥಾಪಿಸಿದಾಗಿನಿಂದ ಈ ಹುದ್ದೆಗಳು ಖಾಲಿ ಉಳಿದಿರುವುದರಿಂದ ತಾಂತ್ರಿಕ ಸಿಬ್ಬಂದಿ ಇಲ್ಲದೆ ಶಿಬಿರಗಳನ್ನು ನಡೆಸಲಾಗಿತ್ತು. ತತ್ಪರಿಣಾಮವಾಗಿ, ಶಿಬಿರಗಳನ್ನು ಫಲಾನುಭವಿಗಳನ್ನು ಗುರುತಿಸಲು ಮಾತ್ರ ನಡೆಸಲಾಯಿತು ಮತ್ತು ಚಿಕಿತ್ಸಕ ಸೇವೆಗಳನ್ನು ಒದಗಿಸಲಾಗಿಲ್ಲ.
- ಹಾಸನ, ಹಾವೇರಿ ಮತ್ತು ರಾಯಚೂರಿನ ಡಿಡಿಆರ್‌ಸಿಗಳಲ್ಲಿ ಶಿಬಿರಗಳು ನಡೆದ ಸ್ಥಳವನ್ನು ದಾಖಲೆಗಳಲ್ಲಿ ನಮೂದಿಸಿರಲಿಲ್ಲ ಮತ್ತು ನಿಗದಿತ ನಮೂನೆಯಲ್ಲಿನ ಹೆಚ್ಚಿನ ಕಾಲಂಗಳು ಖಾಲಿಯಿದ್ದು ಅಸಮರ್ಪಕ ದಾಖಲಾತಿಗಳನ್ನು ಸೂಚಿಸುವ ಮತ್ತು ಕೈಗೊಂಡ ಚಟುವಟಿಕೆಗಳ ನೈಜತೆಯ ಬಗ್ಗೆ ಅನುಮಾನ ಮೂಡಿಸುವಂತಿತ್ತು.
- ತಡೆರಹಿತ ಪರಿಸರವನ್ನು ಉತ್ತೇಜಿಸುವುದು ಡಿಡಿಆರ್‌ಸಿಯ ಉದ್ದೇಶಗಳಲ್ಲಿ ಒಂದಾಗಿತ್ತು., ಚಿತ್ರದುರ್ಗದ ಡಿಡಿಆರ್‌ಸಿಯನ್ನು ಹೊರತುಪಡಿಸಿ, ಇತರ ಯಾವುದೇ ಡಿಡಿಆರ್‌ಸಿಗಳು ತಡೆರಹಿತ ಪರಿಸರ ನಿರ್ಮಾಣಕ್ಕಾಗಿ ಸಾರ್ವಜನಿಕ ಸ್ಥಳಗಳು/ ಕಟ್ಟಡಗಳನ್ನು ಗುರುತಿಸಿರಲಿಲ್ಲ.
- ನಾಲ್ಕು[11] ಡಿಡಿಆರ್‌ಸಿಗಳಲ್ಲಿ ಕಾರ್ಯಾಗಾರಗಳನ್ನು ಸ್ಥಾಪಿಸಿರಲಿಲ್ಲ ಮತ್ತು ನಾಲ್ಕು[12] ಡಿಡಿಆರ್‌ಸಿಗಳಲ್ಲಿ ಸ್ಥಾಪಿಸಲಾಗಿದ್ದರೂ, ತಾಂತ್ರಿಕ ಸಿಬ್ಬಂದಿ ಖಾಲಿ ಇರುವ ಕಾರಣದಿಂದ ಅದನ್ನು ಕಡಿಮೆ ಬಳಸಲಾಗುತ್ತಿತ್ತು ಅಥವಾ ಬಳಸುತ್ತಿರಲಿಲ್ಲ.

[11] ಬೀದರ್, ಹಾಸನ, ಹಾವೇರಿ ಮತ್ತು ರಾಯಚೂರು.

[12] ಬೆಂಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ ಮತ್ತು ಮೈಸೂರು.

14 ಜನವರಿ 2020ರಂದು ಜಿಲ್ಲಾ ಅಧಿಕಾರಿಗಳೊಂದಿಗೆ ನಿರ್ದೇಶಕರು ನಡೆಸಿದ ಸಭೆಯ ನಡಾವಳಿಯಿಂದ ಡಿಡಿಆರ್‌ಸಿಗಳ ವ್ಯವಹಾರಗಳನ್ನು ನಿರ್ವಹಿಸುವ ರೆಡ್ ಕ್ರಾಸ್ ಸೊಸೈಟಿಗಳು ತಮ್ಮ ಸ್ವಂತ ಚಟುವಟಿಕೆಗಳಿಗೆ ಡಿಡಿಆರ್‌ಸಿಗಳ ಸಿಬ್ಬಂದಿಯನ್ನು ಬಳಸಿಕೊಳ್ಳುತ್ತಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅದೇ ರೀತಿ, ಮೈಸೂರಿನ ಅಪರ ಉಪ ಆಯುಕ್ತರು ಇತರ ಸ್ಥಳಗಳಲ್ಲಿ ಕೆಲಸ ಮಾಡುವ ಡಿಡಿಆರ್‌ಸಿಯ ಸಿಬ್ಬಂದಿ ಡಿಡಿಆರ್‌ಸಿಗೆ ಭೇಟಿ ನೀಡುವ ವ್ಯಕ್ತಿಗಳನ್ನು ಫಿಸಿಯೋಥೆರಪಿಸ್ಟ್‌ನ ಚಿಕಿತ್ಸಕ ಸೇವೆಗಳನ್ನು ಪಡೆಯಲು ಖಾಸಗಿ ಚಿಕಿತ್ಸಾಲಯಗಳಿಗೆ ಹೋಗಲು ಪ್ರಚೋದಿಸುತ್ತಿದ್ದರು ಎಂಬ ದೂರುಗಳನ್ನು ಸ್ವೀಕರಿಸಿದ್ದಾಗಿ ವರದಿ ಮಾಡಿದ್ದರು (ಮಾರ್ಚ್ 2020).

ವಾರದಲ್ಲಿ ಮೂರು ದಿನಗಳ ಕಾಲ ವೈದ್ಯಕೀಯ ಶಿಬಿರಗಳನ್ನು ನಡೆಸಲು ಮತ್ತು ಮಾರ್ಗಸೂಚಿಗಳ ಪ್ರಕಾರ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮಗಳನ್ನು ಪ್ರಾರಂಭಿಸಬೇಕೆಂದು ಸಂಬಂಧಿಸಿದ ನೋಡಲ್ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು. ಆರ್‌ಪಿಡಬ್ಲ್ಯುಡಿ ಕಾಯಿದೆ, 2016ರ ಪರಿಚ್ಛೇದ 40–46 ಮತ್ತು ಸರ್ಕಾರದ ಸಮನ್ವಯಗೊಳಿಸಿದ ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ತಡೆಮುಕ್ತ ವಾತಾವರಣವನ್ನು ಒದಗಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳು, ಇಲಾಖೆಗಳ ಮುಖ್ಯಸ್ಥರು ಮತ್ತು ಡಿಡಿಆರ್‌ಸಿಗಳಿಗೆ ಸೂಚಿಸಲಾಗಿದೆ ಎಂದೂ ಸಹ ತಿಳಿಸಲಾಯಿತು.

***ನಿದರ್ಶನ***

***ಡಿಡಿಆರ್‌ಸಿ, ಬೀದರ್***

*ಶ್ರೀ ಸಿದ್ದೇಶ್ವರ ಅಂಗವಿಕಲರ ಶಿಕ್ಷಣ ಸೊಸೈಟಿಯ ಮೂಲಕ ಸೆಪ್ಟೆಂಬರ್ 2019ರಲ್ಲಿ ಸ್ಥಾಪಿಸಲಾಯಿತು. ಸ್ಪೀಚ್ ಥೆರಪಿಸ್ಟ್, ಫಿಸಿಯೋಥೆರಪಿಸ್ಟ್, ಕ್ಲಿನಿಕಲ್ ಸೈಕಾಲಜಿಸ್ಟ್, ಸೈಕಿಯಾಟ್ರಿಸ್ಟ್, ಇಎನ್‌ಟಿ ಸ್ಪೆಷಲಿಸ್ಟ್, ನೇತ್ರಶಾಸ್ತ್ರಜ್ಞ, ಇಯರ್ ಮೋಲ್ಡ್ ಟೆಕ್ನಿಷಿಯನ್ ಮುಂತಾದವರು ಕಾರ್ಯನಿರ್ವಹಿಸುತ್ತಿದ್ದಾರೆಂದು ತೋರಿಸಲಾಗಿದ್ದರೂ, ನಿರ್ವಹಿಸಿದ ಪ್ರಕರಣಗಳ ಸಂಖ್ಯೆ, ನೀಡಿದ ಚಿಕಿತ್ಸೆಯ ಅವಧಿ ಇತ್ಯಾದಿಗಳನ್ನು ಸೂಚಿಸುವ ಯಾವುದೇ ಪೋಷಕ ದಾಖಲೆಗಳು/ನೋಂದಣಿಗಳು ಇರಲಿಲ್ಲ. ಶಿಬಿರಗಳನ್ನು ನಡೆಸಿದ್ದರ ಬೆಂಬಲವಾಗಿ ಯಾವುದೇ ದಾಖಲೆಗಳು ಲಭ್ಯವಿರದಿದ್ದುದು ಬೀದರ್‌ನ ಡಿಡಿಆರ್‌ಸಿ ಸ್ಥಾಪನೆಯಾದಾಗಿನಿಂದ ಶಿಬಿರಗಳನ್ನು ನಡೆಸಿರಲಿಲ್ಲ ಎಂಬುದನ್ನು ಸೂಚಿಸಿತು. ಆದಾಗ್ಯೂ, 2019–20ರಿಂದ 2021–22ರ ಅವಧಿಯಲ್ಲಿ ಡಿಡಿಆರ್‌ಸಿಯ ಸಿಬ್ಬಂದಿಗೆ ಗೌರವಧನ ಪಾವತಿಗಾಗಿ ₹60.19 ಲಕ್ಷ ಮೊತ್ತವನ್ನು ಸೆಳೆಯಲಾಗಿತ್ತು.*

***ಕೋಷ್ಟಕ–6.2**ರಲ್ಲಿ ತೋರಿಸಿರುವಂತೆ ಅಕೌಂಟೆಂಟ್–ಕಮ್–ಕ್ಲರ್ಕ್, ಕಂಪ್ಯೂಟರ್ ಆಪರೇಟರ್‌ಗೆ ಸಂಬಂಧಿಸಿದಂತೆ ನೀಡಲಾದ ನೇಮಕಾತಿ ಪತ್ರಗಳು ಮತ್ತು ವೇತನದ ತಃಖ್ತೆಗಳ ನಡುವೆ ವ್ಯತ್ಯಾಸಗಳಿದ್ದವು.*

**ಕೋಷ್ಟಕ–6.2: ನೇಮಕಾತಿ ಮತ್ತು ವಾಸ್ತವಿಕ ಕೆಲಸದ ನಡುವಿನ ವ್ಯತ್ಯಾಸಗಳು**

(ಮೊತ್ತ ₹ಗಳಲ್ಲಿ)

| ಹುದ್ದೆ | ನೇಮಕಾತಿ ಪತ್ರದ ಪ್ರಕಾರ ಹೆಸರು | ವೇತನ ರಿಜಿಸ್ಟರ್ ಪ್ರಕಾರ ಹೆಸರು | ಪ್ರತಿ ತಿಂಗಳಿಗೆ ವೇತನ | ಏಪ್ರಿಲ್ 2019ರಿಂದ ನವೆಂಬರ್ 2020ರವರೆಗೆ ಪಡೆದಿರುವ ವೇತನ |
|---|---|---|---|---|
| ಅಕೌಂಟೆಂಟ್–ಕಮ್–ಕ್ಲರ್ಕ್ | ಶ್ರೀ ರಾಜ್‌ಕುಮಾರ್ | ಕೀರ್ತಿ | 12,000 | 2,40,000 |
| ಕಂಪ್ಯೂಟರ್ ಆಪರೇಟರ್ | ಶ್ರೀ ಶಿವಕುಮಾರ್ | ಸಂಗೀತ | 9,000 | 1,62,000 |

ಆಧಾರ: ಬೀದರ್ ಡಿಡಿಆರ್‌ಸಿ ಒದಗಿಸಿದ ಮಾಹಿತಿ

ಲೆಕ್ಕಪರಿಶೋಧನೆಯ ಫಲಿತಾಂಶಗಳ ಕುರಿತು ಬೀದರ್‌ನ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮತ್ತು ಸಂಸ್ಥೆಯ ಅಧ್ಯಕ್ಷರ ಕಛೇರಿಯಿಂದ ಅನುಸರಣಾ ವರದಿಯನ್ನು ಕೇಳಲಾಗಿದೆ ಮತ್ತು ಈ ಜಿಲ್ಲೆಯಲ್ಲಿ ಯೋಜನಾ ಮಾರ್ಗಸೂಚಿಗಳ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು.

***<u>ನಿದರ್ಶನ</u>***

***ಡಿಡಿಆರ್‌ಸಿ, ರಾಮನಗರ***

*ರಾಜ್ಯ ಸರ್ಕಾರವು (ಜುಲೈ 2014) ಅಂಗವಿಕಲರಿಗಾಗಿ ರಾಮನಗರದಲ್ಲಿ ಡಿಡಿಆರ್‌ಸಿಯನ್ನು ಪ್ರಾರಂಭಿಸಲು ಬೆಂಗಳೂರಿನ ಮೆ.ಸಮರ್ಥನಂ ಟ್ರಸ್ಟ್‌ಗೆ ಅನುಮೋದನೆ ನೀಡಿತು (ಆಗಸ್ಟ್ 2014 ಮತ್ತು ಫೆಬ್ರವರಿ 2015) ಮತ್ತು ₹12.04 ಲಕ್ಷವನ್ನು ಬಿಡುಗಡೆ ಮಾಡಿತು. ನಿರೀಕ್ಷಿತ ಅಭ್ಯರ್ಥಿಗಳಿಂದ ಅಧಿಸೂಚನೆಯಿಲ್ಲದೆ ಮತ್ತು ಡಿಎಮ್‌ಟಿ/ಇಲಾಖೆಗೆ ತಿಳಿಸದೇ ಅರ್ಜಿಗಳನ್ನು ಆಹ್ವಾನಿಸಿ ಸಿಬ್ಬಂದಿಯನ್ನು ನಿಯೋಜಿಸಿರುವುದು, ಕರ್ತವ್ಯಗಳನ್ನು ನಿರ್ವಹಿಸದ ಸಿಬ್ಬಂದಿಗೆ ಸೆಪ್ಟೆಂಬರ್ 2014ರಿಂದ ವೇತನವನ್ನು ಸೆಳೆದಿರುವುದು, ಡಿಡಿಡಬ್ಲ್ಯುಒಗೆ ಮಾಸಿಕ ವರದಿಗಳನ್ನು ಸಲ್ಲಿಸದಿರುವುದು ಮುಂತಾದ ಕಾರ್ಯನಿರ್ವಹಣೆಯಲ್ಲಿನ ಲೋಪಗಳನ್ನು ಗಮನಿಸಿ ಡಿಡಿಆರ್‌ಸಿಯನ್ನು ಮುಚ್ಚಲು ಡಿಎಮ್‌ಟಿ ಶಿಫಾರಸು ಮಾಡಿತು (ಆಗಸ್ಟ್ 2016).*

*ನೇಮಕಗೊಂಡ ಸಿಬ್ಬಂದಿ ಏಕಕಾಲದಲ್ಲಿ ಎರಡು ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು 27 ಆಗಸ್ಟ್ 2016ರಂದು ನಡೆದ ಸಭೆಯ ನಡಾವಳಿಯಿಂದ ಲೆಕ್ಕಪರಿಶೋಧನೆಯು ಗಮನಿಸಿತು. ಟ್ರಸ್ಟ್‌ನಿಂದ ₹12.04 ಲಕ್ಷ ಮೊತ್ತವನ್ನು ವಸೂಲಿ ಮಾಡಲು ಡಿಡಿಡಬ್ಲ್ಯೂಒ, ರಾಮನಗರ ಅವರಿಗೆ ನಿರ್ದೇಶಕರು ಸೂಚನೆ ನೀಡಿದರು (ಜೂನ್ 2018). ಮೊತ್ತವನ್ನು ಇನ್ನೂ ವಸೂಲಿ ಮಾಡಬೇಕಾಗಿದೆ (ಡಿಸೆಂಬರ್ 2022).*

*ರಾಮನಗರದ ಡಿಡಿಡಬ್ಲ್ಯೂಒರವರು ಯೋಜನೆಯನ್ನು ನಡೆಸಲು ವಿಫಲವಾದ ಸಂಸ್ಥೆಯ ವಿರುದ್ಧ ಮೊಕದ್ದಮೆ ಹೂಡಿದ್ದಾರೆ ಮತ್ತು ಈ ಪ್ರಕರಣವು ರಾಮನಗರ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು.*

### 6.4.1.2 ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಅನುಷ್ಠಾನದ ಯೋಜನೆ (ಎಸ್‌ಐಪಿಡಿಎ)

ಭಾರತ ಸರ್ಕಾರ (ಜನವರಿ 2016) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ ಅನುಷ್ಠಾನದ ಯೋಜನೆಯನ್ನು (ಎಸ್‌ಐಪಿಡಿಎ) ರಚಿಸಿತ್ತು. ಇದರಡಿಯಲ್ಲಿ ರಾಜ್ಯ ಸರ್ಕಾರಗಳು ಹಾಗೂ ಸ್ವಾಯತ್ತ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ಥಾಪಿಸಿದ ವಿವಿಧ ಸಂಸ್ಥೆಗಳಿಗೆ ತಡೆರಹಿತ ಪರಿಸರ, ಕೌಶಲ್ಯಾಭಿವೃದ್ಧಿ, ಜಾಗೃತಿ ಅಭಿಯಾನ ಮತ್ತು ಸಂವೇದನಾ ಕಾರ್ಯಕ್ರಮಗಳು ಇತ್ಯಾದಿಗಳನ್ನು ಒದಗಿಸುವಂತಹ ವಿವಿಧ ಚಟುವಟಿಕೆಗಳಿಗೆ ಬೆಂಬಲ ನೀಡುವುದಕ್ಕಾಗಿ ಅನುದಾನವನ್ನು ನೀಡಲಾಗುತ್ತದೆ.

2018–19ರಿಂದ ಡಿಡಿಆರ್‌ಸಿ ಯೋಜನೆಗೆ ಹಣ ಒದಗಿಸುವಿಕೆಯನ್ನು ಎಸ್‌ಐಪಿಡಿಎ ವ್ಯಾಪ್ತಿಗೆ ತರಲಾಯಿತು. ಆದಾಗ್ಯೂ, ಈ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಹಣವನ್ನು ಕೋರಿಲ್ಲದಿರುವುದರಿಂದ 14 ಜಿಲ್ಲೆಗಳಲ್ಲಿ ಡಿಡಿಆರ್‌ಸಿಗಳನ್ನು ಇನ್ನೂ ಸ್ಥಾಪಿಸಬೇಕಿದ್ದರೂ ಸಹ ಜಿಲ್ಲೆಗಳಲ್ಲಿ ತಳಮಟ್ಟದಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಸಮಗ್ರ ಸೇವೆಗಳನ್ನು ಒದಗಿಸುವ ಅವಕಾಶವನ್ನು ಕಳೆದುಕೊಂಡಿರುವುದನ್ನು ಗಮನಿಸಲಾಯಿತು. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## 6.5 ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರಗಳು

ಚಲನೆ, ಮಾತು ಮತ್ತು ಭಾಷೆ, ಬುದ್ಧಿವಂತಿಕೆ, ದೃಷ್ಟಿ, ಶ್ರವಣದಂತಹ ಎಲ್ಲಾ ಚಟುವಟಿಕೆಗಳು ಮೆದುಳಿನ ವಿವಿಧ ಕೇಂದ್ರಗಳಿಂದ ನಿಯಂತ್ರಿಸಲ್ಪಡುತ್ತವೆ. ಮೆದುಳಿನ ಗರಿಷ್ಠ ಬೆಳವಣಿಗೆಯು ಗರ್ಭಾಶಯದಲ್ಲಿ (ಶೇಕಡಾ 50–55) ಮತ್ತು ಮೊದಲ ಮೂರು ವರ್ಷಗಳಲ್ಲಿ (ಶೇಕಡಾ 90) ಸಂಭವಿಸುತ್ತದೆ. ಬೆಳವಣಿಗೆಯ ವಿಳಂಬಗಳು ಅಥವಾ ಅಂಗವೈಕಲ್ಯ ಹೊಂದಿರುವ ಶಿಶುಗಳು ಮತ್ತು ಅಂಬೆಗಾಲಿಡುವವರ ಬೆಳವಣಿಗೆಯನ್ನು ಹೆಚ್ಚಿಸುವುದು ಮತ್ತು ಅವರು ಶಾಲಾ ವಯಸ್ಸನ್ನು ತಲುಪಿದ ನಂತರ ವಿಶೇಷ ಶಿಕ್ಷಣ ಮತ್ತು ಸಂಬಂಧಿತ ಸೇವೆಗಳ ಅಗತ್ಯವನ್ನು ಕಡಿಮೆ ಮಾಡುವುದು ಆರಂಭಿಕ ಮಧ್ಯಸ್ಥಿಕೆ ಸೇವೆಗಳ ಉದ್ದೇಶವಾಗಿತ್ತು.

ಅಂಗವಿಕಲರಿಗೆ ಆರಂಭಿಕ ಮಧ್ಯಸ್ಥಿಕೆ ವಿಧಾನಗಳ ಬಗ್ಗೆ ಸಂವೇದನಾಶೀಲತೆ ಸೇರಿದಂತೆ ಸಮಗ್ರ ಸೇವೆಗಳನ್ನು ಒದಗಿಸುವುದು ಡಿಡಿಆರ್‌ಸಿಯ ಒಂದು ಪ್ರಮುಖ ಉದ್ದೇಶವಾಗಿತ್ತು. ಇದಲ್ಲದೆ, ಪ್ರತಿ ಡಿಡಿಆರ್‌ಸಿಯು ಅಂಗವಿಕಲ ವ್ಯಕ್ತಿಗಳ ನಿವಾಸದ ಸ್ಥಳದಲ್ಲಿ ಹಸ್ತಕ್ಷೇಪವನ್ನು ಮುಂದುವರೆಸಲು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ಆರಂಭಿಕ ಹಸ್ತಕ್ಷೇಪ ಘಟಕ ಮತ್ತು ಕಡಿಮೆ–ವೆಚ್ಚದ ಹಸ್ತಕ್ಷೇಪವನ್ನು ಸ್ಥಾಪಿಸಬೇಕಾಗಿತ್ತು. ಡಿಡಿಆರ್‌ಸಿಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರ ವಹಿಸಿಕೊಂಡಿದ್ದರೂ, ಈ ಕೇಂದ್ರಗಳ ಕಾರ್ಯನಿರ್ವಹಣೆಗೆ ನಿರ್ದಿಷ್ಟ ಮಾರ್ಗಸೂಚಿಗಳ ಅನುಪಸ್ಥಿತಿಯಲ್ಲಿ, ಇಲಾಖೆಯು ಯಾವುದೇ ಆರಂಭಿಕ ಮಧ್ಯಸ್ಥಿಕೆ ಘಟಕಗಳನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ.


ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರಗಳನ್ನು (ಡಿಇಐಸಿ) ಸ್ಥಾಪಿಸಲು ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಗೆ ವಿನಂತಿಸಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು. ಆರೋಗ್ಯ ಮತ್ತು 2016–17ರಿಂದ ಜಾರಿಗೆ ಬರುವಂತೆ ರಾಜ್ಯದಲ್ಲಿ 13 ಜಿಲ್ಲಾ ಆರಂಭಿಕ ಮಧ್ಯಸ್ಥಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

## 6.6 ಡೇಕೇರ್ ಕೇಂದ್ರಗಳ ಸ್ಥಾಪನೆ

ರಾಜ್ಯ ಸರ್ಕಾರವು ನಾಲ್ಕು ಕಂದಾಯ ವಿಭಾಗಗಳಲ್ಲಿ ಆಟಿಸಮ್, ಸೆರೆಬ್ರಲ್ ಪಾಲ್ಸಿ, ಬುದ್ಧಿಮಾಂದ್ಯ ಮತ್ತು ಬಹು ಅಂಗವೈಕಲ್ಯ ಹೊಂದಿರುವ ಮಕ್ಕಳಿಗಾಗಿ ಡೇಕೇರ್ ಕೇಂದ್ರಗಳನ್ನು (ಡಿಸಿಸಿ) ಸ್ಥಾಪಿಸಲು (ಮೇ 2017) ಪ್ರಸ್ತಾವಿಸಿತು (ಮೇ 2017) ಮತ್ತು ಮಾರ್ಗಸೂಚಿಗಳನ್ನು ಹೊರಡಿಸಿತು. ಮಾರ್ಗಸೂಚಿಗಳ ಪ್ರಕಾರ, ಪ್ರತಿ ಡಿಸಿಸಿಯು ಗರಿಷ್ಠ ₹25 ಲಕ್ಷ (ಪ್ರತಿ ಮಗುವಿಗೆ ₹10,000ದಂತೆ 25 ಮಕ್ಕಳಿಗೆ 10 ತಿಂಗಳಿಗೆ) ಅನುದಾನಕ್ಕೆ ಅರ್ಹವಾಗಿತ್ತು ಮತ್ತು ಶಿಕ್ಷಕರ ವಿದ್ಯಾರ್ಥಿ ಅನುಪಾತವನ್ನು 1:3ಕ್ಕೆ ನಿಗದಿಪಡಿಸಲಾಗಿತ್ತು. ಕೇವಲ ಎರಡು ಡಿಸಿಸಿಗಳನ್ನು ಸ್ಥಾಪಿಸಲಾಯಿತು (ಎರಡೂ ಬೆಂಗಳೂರಿನಲ್ಲಿ) ತತ್ಪರಿಣಾಮವಾಗಿ, ಮೇಲಿನ ಡಿಸಿಸಿಗಳಲ್ಲಿ ನೀಡಲಾಗುವ ಫಿಸಿಯೋಥೆರಪಿಯಂತಹ ಸೌಲಭ್ಯಗಳಿಂದ ವಿಕಲಾಂಗ ಮಕ್ಕಳು ವಂಚಿತರಾದರು. ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿರುವ ಎರಡು ಡಿಸಿಸಿಗಳ ಜೊತೆಗೆ ಕಂದಾಯ ವಿಭಾಗಗಳಲ್ಲಿ ಡಿಸಿಸಿಗಳನ್ನು ಸ್ಥಾಪಿಸಲು

ಮತ್ತೆ ಪ್ರಸ್ತಾಪಿಸಲಾಗಿದ್ದರೂ (ಜನವರಿ 2020), ಇಲಾಖೆ ಇನ್ನೂ ಈ ಡಿಸಿಸಿಗಳನ್ನು ಸ್ಥಾಪಿಸಿರಲಿಲ್ಲ. ರಾಜ್ಯ ಸರ್ಕಾರ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.


**ಶಿಫಾರಸು–9: ರಾಜ್ಯ ಸರ್ಕಾರವು ಸಿಬ್ಬಂದಿ ಕೊರತೆಯನ್ನು ಪರಿಹರಿಸಬೇಕು, ಮೂಲಸೌಕರ್ಯಗಳನ್ನು ಸುಧಾರಿಸಬೇಕು ಮತ್ತು ಪುನರ್ವಸತಿ ಕಾರ್ಯವಿಧಾನವನ್ನು ಬಲಪಡಿಸಲು ಎಲ್ಲಾ ಜಿಲ್ಲೆಗಳಲ್ಲಿ ಡಿಡಿಆರ್‌ಸಿಗಳನ್ನು ಸ್ಥಾಪಿಸಬೇಕು. ಡಿಡಿಆರ್‌ಸಿಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಅವುಗಳನ್ನು ಡಿಡಿಡಬ್ಲ್ಯುಒಗಳ ನಿಯಂತ್ರಣಕ್ಕೆ ತರಬೇಕು.**



**(ಶಾಂತಿಪ್ರಿಯ ಎಸ್)**

**ಬೆಂಗಳೂರು** **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ 1)**
**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**



**(ಗಿರೀಶ್ ಚಂದ್ರ ಮುರ್ಮು)**

**ನವದೆಹಲಿ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

**ಅನುಬಂಧ–3.1**

**(ಉಲ್ಲೇಖ: ಕಂಡಿಕೆ–3.1.2/ಪುಟ 32)**

**ಕೆಎಸ್ಆರ್‌ಟಿಸಿ ಮತ್ತು ಬಿಎಮ್‌ಟಿಸಿ ಸಂಸ್ಥೆಗಳಿಂದ ಆರ್‌ಪಿಡಬ್ಲ್ಯುಡಿ ಕಾಯಿದೆಯ ನಿಬಂಧನೆಗಳ ಅನುಪಾಲನೆ**

| ಅವಕಾಶ | ಕೆಳಗಿನವುಗಳು ಒದಗಿಸಿದಂತೆ ಅನುಪಾಲನೆ | |
|---|---|---|
| | ಕೆಎಸ್ಆರ್‌ಟಿಸಿ (8,673 ಬಸ್‌ಗಳು) | ಬಿಎಮ್‌ಟಿಸಿ (6,603 ಬಸ್‌ಗಳು) |
| ಆದ್ಯತೆಯ ಸೀಟ್‌ಗಳ ಹಂಚಿಕೆ | ಪಾಲಿಸಲಾಗಿದೆ | ಪಾಲಿಸಲಾಗಿದೆ |
| ಕ್ಲಚ್‌ಗಳು, ಬೆತ್ತಗಳು, ವಾಕರ್‌ಗಳು ಇತ್ಯಾದಿಗಳನ್ನು ಭದ್ರಪಡಿಸಿಕೊಳ್ಳಲು ಸೂಕ್ತ ಸೌಲಭ್ಯದೊಂದಿಗೆ ಆದ್ಯತೆಯ ಆಸನಗಳನ್ನು ಒದಗಿಸಬೇಕು. | ಕೆಎಸ್ಆರ್‌ಟಿಸಿಯಲ್ಲಿ ಕಾರ್ಯನಿರ್ವಹಿಸುವ ಬಹುಪಾಲು ಟೈಪ್–1 ಸಿಟಿ ಬಸ್‌ಗಳು ಪರಿವರ್ತಿತ ಬಸ್‌ಗಳಾಗಿರುವುದರಿಂದ (ಅಂದರೆ, ಎಕ್ಸ್‌ಪ್ರೆಸ್ ಬಸ್‌ಗಳನ್ನು ನಿರ್ದಿಷ್ಟ ಕಿಮೀಗಳ ಪ್ರಯಾಣದ ನಂತರ ನಗರ/ಗ್ರಾಮೀಣ ಬಸ್‌ಗಳಾಗಿ ಪರಿವರ್ತಿಸಲಾಗುತ್ತದೆ) ಈ ಸೌಕರ್ಯಗಳನ್ನು ಮಾಡಲಾಗಿಲ್ಲ. ಆದಾಗ್ಯೂ, ಹೊಸದಾಗಿ ಸೇರ್ಪಡೆಗೊಳ್ಳುವ ಸಿಟಿ ಬಸ್‌ಗಳಲ್ಲಿ ಈ ಸೌಲಭ್ಯಗಳನ್ನು ಒದಗಿಸುವಂತೆ ನೋಡಿಕೊಳ್ಳಲಾಗುವುದು. | 150 ಎಸಿ (ಜೆಎನ್‌ನರ್ಮ್–II) ಬಸ್‌ಗಳಲ್ಲಿ, ಆದ್ಯತೆಯ ಆಸನಗಳನ್ನು ಸೂಕ್ತ ಸೌಲಭ್ಯಗಳೊಂದಿಗೆ ಒದಗಿಸಲಾಗಿದೆ. ಆದರೆ, ಭವಿಷ್ಯದಲ್ಲಿ ಈ ಸೌಲಭ್ಯಗಳನ್ನು ಒದಗಿಸುವಂತೆ ನೋಡಿಕೊಳ್ಳಲಾಗುವುದು. |
| ಎಲ್ಲಾ ರೀತಿಯ ಟೈಪ್–1 ಬಸ್‌ಗಳ ಪ್ರವೇಶದ್ವಾರದಲ್ಲಿ ಹ್ಯಾಂಡ್‌ರೈಲ್‌ಗಳು ಮತ್ತು /ಅಥವಾ ಸ್ಟ್ಯಾಂಚನ್‌ಗಳನ್ನು ಸಮಗ್ರಾಕೃತಿಯಲ್ಲಿ ಒದಗಿಸಬೇಕು, ಇದು ವಿಕಲಾಂಗ ವ್ಯಕ್ತಿಗಳು ವಾಹನವನ್ನು ಹತ್ತಲು ಪ್ರಾರಂಭಿಸುವಾಗ ಹೊರಗಿನಿಂದ ಅಂತಹ ಸಹಾಯವನ್ನು ಅವರು ಗೊತ್ತುಪಡಿಸಿದ ಆಸನ ಪ್ರದೇಶವನ್ನು ತಲುಪುವವರೆಗೆ ಅನುಕೂಲ ಮಾಡಿಕೊಡುತ್ತದೆ. | ಪ್ರಯಾಣಿಕರ ಸುಲಭ ಮತ್ತು ಸುರಕ್ಷಿತ ಸಂಚಾರವನ್ನು ಸಕ್ರಿಯಗೊಳಿಸಲು ಹ್ಯಾಂಡ್ ಗ್ರ್ಯಾಬ್‌ಗಳು, ಹ್ಯಾಂಡ್‌ರೈಲ್‌ಗಳು, ಸ್ಟ್ಯಾಂಚನ್‌ಗಳು, ಹ್ಯಾಂಡ್‌ಹೋಲ್ಡ್‌ಗಳು, ಸೀಟ್ ಹ್ಯಾಂಡಲ್‌ಗಳು ಇತ್ಯಾದಿಗಳನ್ನು ಪ್ರವೇಶದ ಹಂತದಿಂದ ಎಲ್ಲಾ ಬಸ್‌ಗಳಲ್ಲಿ ಡ್ರೈವರ್ ಕಂಪಾರ್ಟ್‌ಮೆಂಟ್‌ವರೆಗೆ ಒದಗಿಸಲಾಗಿದೆ. | ಪ್ರಯಾಣಿಕರ ಸುಲಭ ಮತ್ತು ಸುರಕ್ಷಿತ ಸಂಚಾರವನ್ನು ಸಕ್ರಿಯಗೊಳಿಸಲು ಹ್ಯಾಂಡ್ ಗ್ರ್ಯಾಬ್‌ಗಳು, ಹ್ಯಾಂಡ್‌ರೈಲ್‌ಗಳು, ಸ್ಟ್ಯಾಂಚನ್‌ಗಳು, ಹ್ಯಾಂಡ್‌ಹೋಲ್ಡ್‌ಗಳು, ಸೀಟ್ ಹ್ಯಾಂಡಲ್‌ಗಳು ಇತ್ಯಾದಿಗಳನ್ನು ಪ್ರವೇಶದ ಹಂತದಿಂದ ಎಲ್ಲಾ ಬಸ್‌ಗಳಲ್ಲಿ ಡ್ರೈವರ್ ವಿಭಾಗದವರೆಗೆ ಒದಗಿಸಲಾಗಿದೆ. |
| ಎಲ್ಲಾ ವಿಧದ ಟೈಪ್–1 ಎನ್‌ಡಿಎಕ್ಸ್ ಬಸ್‌ಗಳಿಗೆ ಸ್ಟಾಪ್‌ಗಳನ್ನು ವಿನಂತಿಸಲು ಆದ್ಯತೆಯ ಆಸನಗಳ ಪಕ್ಕದಲ್ಲಿ ನಿಯಂತ್ರಣಗಳನ್ನು ಒದಗಿಸಬೇಕು ಮತ್ತು ಅವು ಚಲನಶೀಲತೆಯ ನೆರವು ಬೇಕಿರುವ ಪ್ರಯಾಣಿಕರು ಇಳಿಯಲು ಬಯಸುತ್ತಾರೆ ಎಂದು ಚಾಲಕನಿಗೆ ಎಚ್ಚರಿಕೆ ನೀಡುತ್ತದೆ. | ಹೆಚ್ಚಿನ ಬಸ್‌ಗಳನ್ನು ಎಕ್ಸ್‌ಪ್ರೆಸ್ ಬಸ್‌ಗಳಿಂದ ಪರಿವರ್ತಿಸಿದ್ದರಿಂದ ಈ ನಿಬಂಧನೆಯನ್ನು ಪಾಲಿಸಲಾಗಿಲ್ಲ. ಆದಾಗ್ಯೂ, 1,549 ಟೈಪ್–1 ಎನ್‌ಡಿಎಕ್ಸ್ ಬಸ್‌ಗಳಲ್ಲಿ, ಜೆಎನ್‌ನರ್ಮ್ ಯೋಜನೆಯಲ್ಲಿ ಸೇರ್ಪಡೆಗೊಂಡ 487 ಬಸ್‌ಗಳಿಗೆ ಅಂತಹ ನಿಯಂತ್ರಣಗಳನ್ನು ಒದಗಿಸಲಾಗಿದೆ. | 6,603 ಟೈಪ್–1 ಎನ್‌ಡಿಎಕ್ಸ್ ಬಸ್‌ಗಳಲ್ಲಿ 2,627 ಅಂತಹ ನಿಯಂತ್ರಣಗಳನ್ನು ಒದಗಿಸಲಾಗಿದೆ ಮತ್ತು ಭವಿಷ್ಯದಲ್ಲಿ ಅಂತಹ ನಿಯಂತ್ರಣಗಳನ್ನು ಒದಗಿಸಲು ಕಾಳಜಿ ವಹಿಸಲಾಗುವುದು |
| ಲಿಫ್ಟ್ ಮೆಕ್ಯಾನಿಸಮ್ ಸೌಲಭ್ಯ | 49 ವೋಲ್ವೋ ಬಸ್ಸುಗಳು ಮಂಡಿಯೂರಿ ಬರುವ ವ್ಯವಸ್ಥೆಯನ್ನು ಹೊಂದಿದ್ದು, ಇದು ಅಂಗವಿಕಲ ವ್ಯಕ್ತಿಗಳ ಪ್ರವೇಶವನ್ನು ಸುಲಭಗೊಳಿಸುತ್ತದೆ. ಮೆಟ್ಟಲುಗಳು ಎತ್ತರವಾಗಿರುವ ಬಸ್‌ಗಳಲ್ಲಿ ಲಿಫ್ಟ್ ಕಾರ್ಯವಿಧಾನವನ್ನು ಒದಗಿಸುವುದು ವಿನ್ಯಾಸದಲ್ಲಿ ಪ್ರಮುಖ ರಚನಾತ್ಮಕ ಬದಲಾವಣೆಗಳನ್ನು ಒಳಗೊಳ್ಳುವುದರಿಂದ ತಾಂತ್ರಿಕವಾಗಿ ಕಾರ್ಯಸಾಧ್ಯವಲ್ಲ. | 823 ವೋಲ್ವೋ ಬಸ್ಸುಗಳು ಮಂಡಿಯೂರಿ ಬರುವ ವ್ಯವಸ್ಥೆಯನ್ನು ಹೊಂದಿದ್ದು, ಇದು ಅಂಗವಿಕಲ ವ್ಯಕ್ತಿಗಳ ಪ್ರವೇಶವನ್ನು ಸುಲಭಗೊಳಿಸುತ್ತದೆ. ಉಳಿದ ಬಸ್‌ಗಳಲ್ಲಿ ಲಿಫ್ಟ್ ಕಾರ್ಯವಿಧಾನವನ್ನು ಒದಗಿಸುವುದು ವಿನ್ಯಾಸದಲ್ಲಿ ಪ್ರಮುಖ ರಚನಾತ್ಮಕ ಬದಲಾವಣೆಗಳನ್ನು ಒಳಗೊಳ್ಳುವುದರಿಂದ ತಾಂತ್ರಿಕವಾಗಿ ಕಾರ್ಯಸಾಧ್ಯವಿಲ್ಲ. |
| ದೃಷ್ಟಿಹೀನರಿಗೆ ಆಡಿಯೋ ಅಲರ್ಟ್ ಸಿಸ್ಟಮ್ | 812 ಬಸ್‌ಗಳಲ್ಲಿ ಆಡಿಯೊ ಅಲರ್ಟ್ ಸಿಸ್ಟಮ್‌ನೊಂದಿಗೆ ಐಟಿಎಸ್‌ಅನ್ನು ಸಕ್ರಿಯಗೊಳಿಸಲಾಗಿದೆ, ಅಲ್ಲಿ ಪ್ರಕಟಣೆಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮಾಡಲಾಗುತ್ತದೆ. | 5,000 ಬಸ್‌ಗಳಲ್ಲಿ ಆಡಿಯೊ ಅಲರ್ಟ್ ವ್ಯವಸ್ಥೆಯನ್ನು ಹೊಂದಿರುವ ಐಟಿಎಸ್ ಅನ್ನು ಸಕ್ರಿಯಗೊಳಿಸಲಾಗಿದೆ, ಅಲ್ಲಿ |

| ಅವಕಾಶ | ಕೆಳಗಿನವುಗಳು ಒದಗಿಸಿದಂತೆ ಅನುಪಾಲನೆ | |
|---|---|---|
| | **ಕೆಎಸ್‌ಆರ್‌ಟಿಸಿ (8,673 ಬಸ್‌ಗಳು)** | **ಬಿಎಮ್‌ಟಿಸಿ (6,603 ಬಸ್‌ಗಳು)** |
| | | ಪ್ರಕಟಣೆಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮಾಡಲಾಗುತ್ತದೆ. |
| ಬಜರ್‌ಗಳು ಮತ್ತು ಸ್ವಿಚ್‌ಗಳನ್ನು ಅಳವಡಿಸಲಾಗಿದೆ | 487 ಬಸ್‌ಗಳಲ್ಲಿ ಬಜರ್ ಮತ್ತು ಸ್ವಿಚ್‌ಗಳನ್ನು ಅಳವಡಿಸಲಾಗಿದೆ ಮತ್ತು 844 ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಲಾಗಿದೆ. | 2,627 ಬಸ್‌ಗಳಲ್ಲಿ ಬಜರ್‌ಗಳು ಮತ್ತು ಸ್ವಿಚ್‌ಗಳನ್ನು ಅಳವಡಿಸಲಾಗಿದೆ ಮತ್ತು 1,150 ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಲಾಗಿದೆ. |
| ದೃಷ್ಟಿದೋಷವುಳ್ಳವರು ಬಳಸುವ ಕೋಲನ್ನು ಹಿಡಿದಿಡಲು ಉಂಗುರಗಳು. | ಈ ಸೌಲಭ್ಯವನ್ನು ಎಲ್ಲಾ ಬಸ್‌ಗಳಲ್ಲಿ ಅಳವಡಿಸಲಾಗಿದೆ | ಈ ಸೌಲಭ್ಯವನ್ನು ಎಲ್ಲಾ ಬಸ್‌ಗಳಲ್ಲಿ ಅಳವಡಿಸಲಾಗಿದೆ |

ಆಧಾರ: ಕೆಎಸ್‌ಆರ್‌ಟಿಸಿ ಮತ್ತು ಬಿಎಮ್‌ಟಿಸಿಗಳು ಒದಗಿಸಿದ ಮಾಹಿತಿ

**ಅನುಬಂಧ–4.1**

**(ಉಲ್ಲೇಖ: ಕಂಡಿಕೆ–4.2.3/ಪುಟ–42)**

**ಸಂಗೀತ ಪರೀಕ್ಷೆಗೆ ಹಾಜರಾದ/ಹಾಜರಾಗದ ವಿದ್ಯಾರ್ಥಿಗಳ ವಿವರಗಳು**

| ಜಿಲ್ಲೆ/ಶಾಲೆ | ಒಟ್ಟು ವಿದ್ಯಾರ್ಥಿಗಳು | ಹಾಜರಾದವರು (ಶೇಕಡಾವಾರು) | ತೇರ್ಗಡೆ | ಸಂಗೀತ ಶಿಕ್ಷಕರ ಲಭ್ಯತೆ | ಪರೀಕ್ಷೆಗೆ ಹಾಜರಾದ ವರ್ಷಗಳ ಸಂಖ್ಯೆ | ಪರೀಕ್ಷೆಗೆ ಹಾಜರಾಗದ ವರ್ಷಗಳ ಸಂಖ್ಯೆ |
|---|---|---|---|---|---|---|
| **ಸರ್ಕಾರಿ ಅಂಧರ ಶಾಲೆಗಳು (4)** | | | | | | |
| ಮೈಸೂರು | 151 | 0 | 0 | ಲಭ್ಯವಿದ್ದರು | 0 | 5 |
| ದಾವಣಗೆರೆ | 50 | 8 (16) | 08 | ಲಭ್ಯವಿದ್ದರು | 3 | 2 |
| ಹುಬ್ಬಳ್ಳಿ | 106 | 19 (18) | 19 | ಲಭ್ಯವಿದ್ದರು | 3 | 2 |
| ಕಲಬುರಗಿ | 72 | 5 (7) | 05 | ಲಭ್ಯವಿದ್ದರು | 1 | 4 |
| **ಒಟ್ಟು** | **379** | **32 (8)** | **32** | | | |
| **ಸಹಾಯಾನುದಾನ ಶಾಲೆಗಳು (6)** | | | | | | |
| ಮಹೇಶ್ವರಿ ಅಂಧ ಮಕ್ಕಳ ಶಾಲೆ, ಬೆಳಗಾವಿ | 499 | 0 | 0 | ಲಭ್ಯವಿದ್ದರು | 0 | 5 |
| ಅಂಬುಬಾಯಿ ಅಂಧ ಬಾಲಕಿಯರ ಶಾಲೆ, ಕಲಬುರಗಿ | 220 | 0 | 0 | ಲಭ್ಯವಿದ್ದರು | 0 | 5 |
| ಮಾತೃಶ್ರೀ ಅಂಧ ಮಕ್ಕಳ ಶಿಕ್ಷಣ ಟ್ರಸ್ಟ್, ಯಲಹಂಕ, ಬೆಂಗಳೂರು | 149 | 5(3) | 5 | ಲಭ್ಯವಿದ್ದರು | 1 | 4 |
| ತೀಕ್ಷ್ಣ ಅಂಧ ಶಾಲೆ, ಚಿತ್ರದುರ್ಗ | 39 | 0 | 0 | ಲಭ್ಯವಿದ್ದರು | 0 | 5 |
| ಎಂ ಕೃಷ್ಣ ಅಂಧ ಮಕ್ಕಳ ಶಾಲೆ, ಹಾಸನ | 40 | 0 | 0 | ಲಭ್ಯವಿಲ್ಲ | 0 | 5 |
| ಆಶಾ ಕಿರಣ ಅಂಧ ಮಕ್ಕಳ ಶಾಲೆ, ಚಿಕ್ಕಮಗಳೂರು | 315 | 0 | 0 | ಲಭ್ಯವಿಲ್ಲ | 0 | 5 |
| **ಒಟ್ಟು** | **1,262** | **5 (1)** | **5** | | | |
| **ಅಂಗವಿಕಲ ಮಕ್ಕಳ ಕೇಂದ್ರಿತ ಶಾಲೆಗಳು (9)** | | | | | | |
| ಆಶಾ ಕಿರಣ ಅಂಧ ಮಕ್ಕಳ ಶಾಲೆ ಬೀದರ್ | 191 | 0 | 0 | ಲಭ್ಯವಿದ್ದರು | 0 | 5 |
| VIನೇ ಮಕ್ಕಳ ಸಜೀವಿ ವಸತಿ ಶಾಲೆ, ಬಾಗಲಕೋಟೆ | 236 | 0 | 0 | ಲಭ್ಯವಿದ್ದರು | 0 | 5 |
| ರೋಮನ್ ಮತ್ತು ಕ್ಯಾಥರಿನ್ ಲೋಬೋ ಅಂಧ ಮಕ್ಕಳ ವಸತಿ ಶಾಲೆ, ಮಂಗಳೂರು | 80 | 0 | 0 | ಲಭ್ಯವಿದ್ದರು | 0 | 5 |
| ಜ್ಞಾನಜ್ಯೋತಿ ಅಂಧ ಮಕ್ಕಳ ವಸತಿ ಶಾಲೆ, ಹಾವೇರಿ | 242 | 0 | 0 | ಲಭ್ಯವಿದ್ದರು | 0 | 5 |
| ಶ್ರೀ ಮಾಣಿಕ್ ಪ್ರಭು ಅಂಧ ವಸತಿ ಶಾಲೆ, ಹುಮನಾಬಾದ್, ಬೀದರ್ | 229 | 0 | 0 | ಲಭ್ಯವಿದ್ದರು | 0 | 5 |
| ಶ್ರೀ ಮಾಣಿಕ್ ಪ್ರಭು ಅಂಧ ವಸತಿ ಶಾಲೆ, ರಾಯಚೂರು | 174 | 0 | 0 | ಲಭ್ಯವಿದ್ದರು | 0 | 5 |
| ಶ್ರೀ ಬಾಲಗಂಗಾಧರನಾಥ ಸ್ವಾಮಿ ಅಂಧರ ವಸತಿ ಶಾಲೆ, ರಾಮನಗರ | 765 | 11(1) | 06 | ಲಭ್ಯವಿದ್ದರು | 2 | 3 |
| ರಂಗರಾವ್ ಸ್ಮಾರಕ ಅಂಗವಿಕಲರ ಶಾಲೆ (ಅಂಧ ಬಾಲಕಿಯರ), ಮೈಸೂರು | 330 | 16 (5) | 16 | ಲಭ್ಯವಿದ್ದರು | 5 | 0 |
| ಕರ್ನಾಟಕ ಅಂಧ ಮಕ್ಕಳ ಕಲ್ಯಾಣ ಸಂಘ ಬೆಂಗಳೂರು | 198 | 0 | 0 | ಲಭ್ಯವಿಲ್ಲ | 0 | 5 |
| **ಒಟ್ಟು** | **2,445** | **27 (1)** | | | | |

ಆಧಾರ: ಶಾಲೆಗಳು ಸಲ್ಲಿಸಿದ ಮಾಹಿತಿ

ಕಂಸದಲ್ಲಿರುವ ಸಂಖ್ಯೆಗಳು ಶೇಕಡಾವಾರನ್ನು ಸೂಚಿಸುತ್ತವೆ.

**ಅನುಬಂಧ–4.2**
**(ಉಲ್ಲೇಖ: ಕಂಡಿಕೆ–4.5.1/ಪುಟ–50)**
**ಸಾಮಾನ್ಯ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ**

| ಜಿಲ್ಲೆ | ರ್‍ಯಾಂಪ್‌ಗಳು ಇರುವುದು | ರ್‍ಯಾಂಪ್‌ಗಳು ಇರಲಿಲ್ಲ | ಹ್ಯಾಂಡ್‌ರೇಲ್ಸ್ ಇರುವುದು | ಹ್ಯಾಂಡ್‌ರೇಲ್ಸ್ ಇರಲಿಲ್ಲ | ಸಿಡಬ್ಲ್ಯುಎಸ್‌ಎನ್ ಶೌಚಾಲಯಗಳು | ಸಿಡಬ್ಲ್ಯುಎಸ್‌ಎನ್ ಶೌಚಾಲಯಗಳು ಇರಲಿಲ್ಲ | ಶಾಲೆಗಳು |
|---|---|---|---|---|---|---|---|
| ಬಾಗಲಕೋಟೆ | 1,989 | 268 | 1,830 | 427 | 424 | 1,833 | 2,257 |
| ಬಳ್ಳಾರಿ | 793 | 403 | 628 | 568 | 341 | 855 | 1,196 |
| ಬೆಳಗಾವಿ | 4,228 | 968 | 3,806 | 1,390 | 882 | 4,314 | 5,196 |
| ಬೆಂಗಳೂರು ಗ್ರಾಮೀಣ | 1,034 | 452 | 906 | 580 | 320 | 1,166 | 1,486 |
| ಬೆಂಗಳೂರು ನಗರ | 2,235 | 3,223 | 1,612 | 3,846 | 2,622 | 2,836 | 5,458 |
| ಬೀದರ್ | 1,467 | 1,146 | 1,046 | 1,567 | 795 | 1,818 | 2,613 |
| ಚಾಮರಾಜನಗರ | 771 | 362 | 536 | 597 | 398 | 735 | 1,133 |
| ಚಿಕ್ಕಮಗಳೂರು | 1,349 | 501 | 1,140 | 710 | 404 | 1,446 | 1,850 |
| ಚಿಕ್ಕಬಳ್ಳಾಪುರ | 964 | 955 | 785 | 1,134 | 424 | 1,495 | 1,919 |
| ಚಿತ್ರದುರ್ಗ | 2,060 | 307 | 1,873 | 494 | 537 | 1,830 | 2,367 |
| ದಕ್ಷಿಣಕನ್ನಡ | 1,720 | 81 | 1,358 | 443 | 1,520 | 281 | 1,801 |
| ದಾವಣಗೆರೆ | 1,485 | 553 | 1,223 | 815 | 771 | 1,267 | 2,038 |
| ಧಾರವಾಡ | 997 | 516 | 845 | 668 | 425 | 1,088 | 1,513 |
| ಗದಗ | 962 | 139 | 867 | 234 | 264 | 837 | 1,101 |
| ಹಾಸನ | 2,385 | 634 | 1,894 | 1,125 | 488 | 2,531 | 3,019 |
| ಹಾವೇರಿ | 1,541 | 334 | 1,248 | 627 | 317 | 1,558 | 1,875 |
| ಕಲಬುರಗಿ | 2,421 | 1,183 | 1,822 | 1,782 | 1,110 | 2,494 | 3,604 |
| ಕೊಡಗು | 574 | 60 | 547 | 87 | 207 | 427 | 634 |
| ಕೋಲಾರ | 1,168 | 1,243 | 882 | 1,529 | 569 | 1,842 | 2,411 |
| ಕೊಪ್ಪಳ | 1,100 | 478 | 878 | 700 | 365 | 1,213 | 1,578 |
| ಮಂಡ್ಯ | 2,231 | 125 | 2,073 | 283 | 603 | 1,753 | 2,356 |
| ಮೈಸೂರು | 2,517 | 565 | 2,241 | 841 | 752 | 2,330 | 3,082 |
| ರಾಯಚೂರು | 1,372 | 1,034 | 1,077 | 1,329 | 630 | 1,776 | 2,406 |
| ರಾಮನಗರ | 1,281 | 421 | 1,045 | 657 | 395 | 1,307 | 1,702 |
| ಶಿವಮೊಗ್ಗ | 2,203 | 437 | 1,850 | 790 | 680 | 1,960 | 2,640 |
| ತುಮಕೂರು | 2,863 | 1,529 | 2,437 | 1,955 | 758 | 3,634 | 4,392 |
| ಉಡುಪಿ | 946 | 162 | 774 | 334 | 386 | 722 | 1,108 |
| ಉತ್ತರ ಕನ್ನಡ | 2,384 | 172 | 2,204 | 352 | 424 | 2,132 | 2,556 |
| ವಿಜಯನಗರ | 1,209 | 494 | 1,050 | 653 | 589 | 1,114 | 1,703 |
| ವಿಜಯಪುರ | 2,218 | 1,116 | 1,688 | 1,646 | 848 | 2,486 | 3,334 |
| ಯಾದಗಿರಿ | 997 | 505 | 822 | 680 | 261 | 1,241 | 1,502 |
| **ಒಟ್ಟು** | **51,464** | **20,366** | **42,987** | **28,843** | **19,509** | **52,321** | **71,830** |

ಆಧಾರ: ಇಲಾಖೆಯು ಸಲ್ಲಿಸಿದ ಮಾಹಿತಿ

## ಅನುಬಂಧ–4.3

### (ಉಲ್ಲೇಖ: ಕಂಡಿಕೆ–4.5.2/ಪುಟ–51)

### ವಿಶೇಷ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ

| ಜಿಲ್ಲೆ | ಶಾಲೆಯ ಹೆಸರು | ಲೆಕ್ಕಪರಿಶೋಧನಾ ವೀಕ್ಷಣೆಗಳು |
|---|---|---|
| ಬೀದರ್ | ಶ್ರೀ ಮಾಣಿಕ್ ಪ್ರಭು ಅಂಧರ ವಸತಿ ಶಾಲೆ, ಹುಮನಾಬಾದ್, ಬೀದರ್ ಜಿಲ್ಲೆ | ಅದೇ ಕಟ್ಟಡಗಳಲ್ಲಿ ಹುಡುಗರಿಗಾಗಿ ಶೌಚಾಲಯಗಳು/ಸ್ನಾನಗೃಹಗಳು ಲಭ್ಯವಿರಲಿಲ್ಲ. ಅವುಗಳು ಎದುರು ಕ್ಯಾಂಪಸ್‌ನಲ್ಲಿ 50 ಮೀಟರ್ ದೂರದಲ್ಲಿದ್ದವು (10 ಶೌಚಾಲಯಗಳು/ಸ್ನಾನಗೃಹಗಳು) ಮತ್ತು ಬಾಲಕರು ಮೊದಲ ಮಹಡಿಯಿಂದ ಇಳಿದು ಶೌಚಾಲಯ ಮತ್ತು ಸ್ನಾನಗೃಹಕ್ಕೆ ಹೋಗಬೇಕಿತ್ತು. |
| ಹಾವೇರಿ | ಬುದ್ಧಿಮಾಂದ್ಯ ಮಕ್ಕಳ ಅರುಣೋದಯ ವಸತಿ ಶಾಲೆ, ಕೊಡ, ಹಿರೇಕೆರೂರು | ಶೌಚಾಲಯಗಳಿಗೆ ಬಾಗಿಲುಗಳಿರಲಿಲ್ಲ ಮತ್ತು ಶೌಚಾಲಯಗಳು/ಸ್ನಾನಗೃಹಗಳ ಪ್ರವೇಶದ್ವಾರಗಳು ತುಂಬಾ ಕಿರಿದಾಗಿದ್ದು ಸ್ನಾನಗೃಹಗಳಿಗೆ ಹೋಗುವ ಮಾರ್ಗವು ಜಾರುತ್ತಿತ್ತು. ತರಗತಿ ಕೊಠಡಿಗಳು ಮತ್ತು ಹಾಸ್ಟೆಲ್ ಕೊಠಡಿಗಳ ಕಿಟಕಿಗಳಿಗೆ ಬಾಗಿಲುಗಳಿರಲಿಲ್ಲ ಮತ್ತು ಬಾಲಕರಿಗಾಗಿನ ಹಾಸ್ಟೆಲ್ ಕೊಠಡಿಯಲ್ಲಿ ವೆಂಟಿಲೇಟರ್‌ಗ ತೆರೆದಿದ್ದವು. ವಸತಿ ಉದ್ದೇಶಕ್ಕಾಗಿ ಏಳು ಹಾಸಿಗೆಗಳೊಂದಿಗೆ ಒಂದು ಕೊಠಡಿ (ಬಾಲಕರಿಗೆ) ಲಭ್ಯವಿತ್ತು ಆದರೆ ದಿಂಬುಗಳು ಮತ್ತು ಹಾಸಿಗೆಗಳಿರಲಿಲ್ಲ. ಸೊಳ್ಳೆ ಪರದೆಗಳೂ ಲಭ್ಯವಿರಲಿಲ್ಲ. |
| ಬಾಗಲಕೋಟೆ | ಶಿವ ಶಿಕ್ಷಣ ಬುದ್ಧಿಮಾಂದ್ಯ ಮಕ್ಕಳ ಶಾಲೆ, ಮುಧೋಳ | ಶಾಲೆಯಲ್ಲಿ 20 ಬಾಲಕಿಯರಿಗೆ ಎರಡು ಹಾಸ್ಟೆಲ್ ಕೊಠಡಿಗಳು (8x 8 ಚದರ ಅಡಿ) ಮತ್ತು 50 ಬಾಲಕರಿಗೆ ಒಂದು ಹಾಸ್ಟೆಲ್ ಕೊಠಡಿ (25x11 ಚದರ ಅಡಿ) ಲಭ್ಯವಿದ್ದಿತು. ಬಾಲಕರ ಹಾಸ್ಟೆಲ್ ಮತ್ತು ತರಗತಿ ಕೊಠಡಿಗಳನ್ನು ಕಲ್ನಾರಿನ ಮೇಲ್ಛಾವಣಿಯೊಂದಿಗೆ ನಿರ್ಮಿಸಲಾಗಿತ್ತು ಮತ್ತು ಹಾಸ್ಟೆಲ್ ಕೋಣೆಯ ನೆಲಹಾಸು ಒರಟಾಗಿದ್ದಿತು ಮತ್ತು ಮಲಗಲು ಯೋಗ್ಯವಾಗಿರಲಿಲ್ಲ. ಒಂದು ದೊಡ್ಡ ಸಭಾಂಗಣವಿದ್ದು ಅದನ್ನು ವಿಭಾಗಗಳ ಮೂಲಕ 10 ತರಗತಿಗಳಾಗಿ ಪರಿವರ್ತಿಸಲಾಗಿತ್ತು. |
| ಬಾಗಲಕೋಟೆ | ಶ್ರೀ ಮುರುಗೇಂದ್ರ ಶಿವಾಚಾರ್ಯ ಮಹಾಸ್ವಾಮಿ ಸಂಸ್ಥೆ ಕಿವುಡ ಮತ್ತು ಮೂಗರ ವಸತಿ ಶಾಲೆ, ಇಳಕಲ್ | ನೆಲದ ಮೇಲೆ ಮಲಗುವ ವಿದ್ಯಾರ್ಥಿನಿಯರಿಗೆ (36 ಸಂಖ್ಯೆಗಳು) ಯಾವುದೇ ಮಂಚಗಳು ಇರಲಿಲ್ಲ ಮತ್ತು ಬಾಲಕಿಯರ ಹಾಸ್ಟೆಲ್ ಕೋಣೆಯಲ್ಲಿ ನೆಲಹಾಸು ಒರಟಾಗಿತ್ತು |
| ಹಾಸನ | ಜೀವನ್ ಜ್ಯೋತಿ ಕಿವುಡರ ವಸತಿ ಶಾಲೆ, ಹಾಸನ | 1 & 2, 3 & 4, 5 & 6 ಮತ್ತು 7 & 8 ತರಗತಿಗಳಿಗೆ ಸಂಯೋಜಿತ ತರಗತಿ ಕೊಠಡಿಗಳಿದ್ದವು ಮತ್ತು ಮೊದಲ ಮಹಡಿಯಲ್ಲಿನ ನಡುಹಾದಿ ಮತ್ತು ಸ್ಟೇರ್ ಕೇಸ್‌ನಲ್ಲಿರುವ ಮಾರ್ಗವು ತುಂಬಾ ಕಿರಿದಾಗಿತ್ತು. ಅಲ್ಲಿ ಮಂಚಗಳಿರಲಿಲ್ಲ, ಹಾಸಿಗೆಗಳು ಮಾತ್ರ ಲಭ್ಯವಿದ್ದವು ಮತ್ತು ಡೈನಿಂಗ್ ಹಾಲ್‌ನಲ್ಲಿ ಯಾವುದೇ ಟೇಬಲ್‌ಗಳಿಲ್ಲ. |
| ರಾಯಚೂರು | ಬುದ್ಧಿಮಾಂದ್ಯ ಮಕ್ಕಳ ಆಶಾ ದೀಪ ಶಾಲೆ, ರಾಯಚೂರು | ಎರಡು ತರಗತಿ ಕೊಠಡಿಗಳಿವೆ, ಒಂದು 12x18 ಚದರ ಅಡಿ ಅಳತೆ ಮತ್ತು ಇನ್ನೊಂದು ಶೆಡ್ ಆಗಿದ್ದು, ಪರದೆಗಳೊಂದಿಗೆ ಭಾಗ ಮಾಡಿ 49 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಕುರ್ಚಿ, ಮೇಜುಗಳನ್ನು ಒದಗಿಸಿಲ್ಲ ಮತ್ತು ಶಾಲೆಯಲ್ಲಿ ಎರಡು ಶೌಚಾಲಯಗಳು ಮಾತ್ರ ಲಭ್ಯವಿದ್ದವು. |
| ಬಾಗಲಕೋಟೆ | ಸರ್ವೋದಯ ಕಿವುಡ ಮತ್ತು ಮೂಗರ ಶಾಲೆ, ಇಳಕಲ್, ಜಮಖಂಡಿ | ಆಡಳಿತ ಮಂಡಳಿ ಶಾಲೆ ಮತ್ತು ಹಾಸ್ಟೆಲ್ ಎರಡನ್ನೂ ಮೂರು ವಿಭಿನ್ನ ಸ್ಥಳಗಳಲ್ಲಿ (ಬಾಲಕರು ಮತ್ತು ಬಾಲಕಿಯರಿಗಾಗಿ) ನಡೆಸುತ್ತಿದೆ. ಬಾಲಕಿಯರ ಹಾಸ್ಟೆಲ್ ಕೂಡ ಬಾಲಕರ ಹಾಸ್ಟೆಲ್‌ನಿಂದ ದೂರದಲ್ಲಿದೆ ಮತ್ತು ರಾತ್ರಿಯ ಊಟ/ಮಧ್ಯಾಹ್ನದ ಊಟ/ಉಪಹಾರದ ಉದ್ದೇಶಕ್ಕಾಗಿ ಅಂಗವಿಕಲ ಹುಡುಗಿಯರು ಪ್ರತಿ ಬಾರಿಯೂ ಸುಮಾರು ಅರ್ಧ ಕಿಲೋಮೀಟರ್ ನಡೆಯಬೇಕಿತ್ತು. |
| ಬೆಳಗಾವಿ | ಅಜಯ್ ಕಿವುಡ ಮತ್ತು ಮೂಗರ ಶಾಲೆ | ಮೊದಲ ಮಹಡಿಯಲ್ಲಿ ಕಾಂಕ್ರೀಟ್ ಗೋಡೆ ಮತ್ತು ಮೇಲ್ಛಾವಣಿ ಇರಲಿಲ್ಲ ಮತ್ತು ವಿದ್ಯಾರ್ಥಿಗಳಿಗೆ ಅಸುರಕ್ಷಿತವಾಗಿತ್ತು. ಪ್ರತ್ಯೇಕ ಭೋಜನಶಾಲೆ ಇರಲಿಲ್ಲ ಮತ್ತು ಶಾಲೆಯು ದೊಡ್ಡ ಶೆಡ್‌ನಲ್ಲಿರುವುದರಿಂದ, ಡೈನಿಂಗ್ ಹಾಲ್‌ಅನ್ನು ಊಟ ಮಾಡಲು ಮತ್ತು ತರಗತಿ ಕೊಠಡಿಗಳಾಗಿ ಬಳಸಲಾಗುತ್ತಿತ್ತು. |
| ಕಲಬುರಗಿ | ಅಂಧ, ಬಾಲಕರ ಸರ್ಕಾರಿ ಶಾಲೆ | 60 ವರ್ಷಗಳ ಹಿಂದೆ ಶಾಲೆಯನ್ನು ನಿರ್ಮಿಸಿರುವುದರಿಂದ ತರಗತಿಗಳನ್ನು ನಡೆಸಲು ಕಟ್ಟಡವು ಅನರ್ಹ ಎಂದು ಲೋಕೋಪಯೋಗಿ ಇಲಾಖೆ ಘೋಷಿಸಿದ ಶಾಲೆಯಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. |

ಆಧಾರ: ವಿಶೇಷ ಶಾಲೆಗಳ ಜಂಟಿ ತಪಾಸಣಾ ವರದಿಗಳು

**ಅನುಬಂಧ–5.1**

**(ಉಲ್ಲೇಖ: ಕಂಡಿಕೆ–5.2.5/ಪುಟ–62)**

**ಎನ್‌ಹೆಚ್‌ಎಫ್‌ಡಿಸಿಯಿಂದ ಜಾರಿಗೊಳಿಸಲಾದ ಯೋಜನೆಗಳ ವಿವರಗಳು**

| ಯೋಜನೆಯ ಹೆಸರು | ಉದ್ದೇಶಗಳು |
|---|---|
| ಜನೌಷಧಿ ಕೇಂದ್ರಗಳು | ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (ಪಿಎಮ್‌ಬಿಜೆಪಿ) ಜನಸಾಮಾನ್ಯರಿಗೆ ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಔಷಧಿಗಳನ್ನು ಒದಗಿಸಲು ಔಷಧ ಇಲಾಖೆ ಆರಂಭಿಸಿದ ಅಭಿಯಾನವಾಗಿದೆ. ಪಿಎಮ್‌ಬಿಜೆಪಿಯ ಪ್ರಾಮುಖ್ಯತೆ ಮತ್ತು ಅಂಗವಿಕಲರಿಗೆ ಸ್ವಯಂ ಉದ್ಯೋಗ ಮಾದರಿಯಾಗಿ ಅದರ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದಲ್ಲಿ ಜನೌಷಧಿ ಕೇಂದ್ರಗಳನ್ನು ಸ್ಥಾಪಿಸಲು ಕನಿಷ್ಠ 50 ಅರ್ಹ ಅಂಗವಿಕಲರ ಹೆಸರುಗಳನ್ನು ಕಳುಹಿಸಲು ಎನ್‌ಹೆಚ್‌ಎಫ್‌ಡಿಸಿ ಇಲಾಖೆಗೆ ತಿಳಿಸಿತ್ತು (ಏಪ್ರಿಲ್ 2017). |
| ಎನ್‌ಹೆಚ್‌ಎಫ್‌ಡಿಸಿ ಸ್ವಾವಲಂಬನ ಕೇಂದ್ರ (ಎನ್‌ಎಸ್‌ಕೆ) | ಎನ್‌ಹೆಚ್‌ಎಫ್‌ಡಿಸಿಯು ಸಾಲದ ಅಗತ್ಯತೆಗಳು, ಕೌಶಲ್ಯದ ಅಗತ್ಯತೆಗಳು, ಖಚಿತವಾದ ವ್ಯಾಪಾರ ಸಂಪರ್ಕದ ಅಗತ್ಯತೆಗಳು ಇತ್ಯಾದಿಗಳನ್ನು ಒಮ್ಮುಖಗೊಳಿಸುವ ಮೂಲಕ ಎನ್‌ಎಸ್‌ಕೆ ಪರಿಕಲ್ಪನೆಯನ್ನು ಹೊರತಂದಿತು, ಆರಂಭದಲ್ಲಿ ಪ್ರಾಯೋಗಿಕ ಪ್ರಮಾಣದಲ್ಲಿ ಪ್ರತಿ ಜಿಲ್ಲೆಗೆ ಒಂದು ಎನ್‌ಎಸ್‌ಕೆಯಂತೆ ದೇಶದ ಪ್ರತಿ ಜಿಲ್ಲೆಯಲ್ಲಿ ಒಳಗೊಂಡಿತ್ತು. ಪ್ರತಿ ಎನ್‌ಎಸ್‌ಕೆಯನ್ನು ಅಂಗವಿಕಲ ಉದ್ಯಮಿಗಳು ಎನ್‌ಎಚ್‌ಎಫ್‌ಡಿಸಿಯಿಂದ ಶೇಕಡಾ 100ರಷ್ಟು ಹಣಕಾಸು ಪಡೆದು ಸುಮಾರು ₹12 ಲಕ್ಷ ಬಂಡವಾಳ ವೆಚ್ಚದಲ್ಲಿ ಸ್ಥಾಪಿಸುತ್ತಾರೆ. ಈ ಎನ್‌ಎಸ್‌ಕೆಗಳನ್ನು ಮಿನಿ–ಇನ್‌ಕ್ಯುಬೇಶನ್ ಸೆಂಟರ್‌ಗಳಾಗಿ ಅಂಗವಿಕಲ ವ್ಯಕ್ತಿಗಳಿಗೆ ಅವರ ಪ್ರದೇಶಗಳಲ್ಲಿ ಮತ್ತು ಸುತ್ತಮುತ್ತಲಿನ ಸ್ವಯಂ ಉದ್ಯೋಗ ಅವಕಾಶಗಳಿಗಾಗಿ ತರಬೇತಿ ನೀಡಲು ಬಳಸಲಾಗುತ್ತದೆ. |
| ದಿವ್ಯಾಂಗನ ಸ್ವಾವಲಂಬನ ಯೋಜನೆ | ಈ ಯೋಜನೆಯಡಿಯಲ್ಲಿ, ಎನ್‌ಎಚ್‌ಎಫ್‌ಡಿಸಿ ಸ್ವಯಂ ಉದ್ಯೋಗ ಚಟುವಟಿಕೆಗಾಗಿ ಶೇಕಡಾ ಐದರಿಂದ ಒಂಬತ್ತು ಬಡ್ಡಿ ದರದಲ್ಲಿ ₹50 ಲಕ್ಷದವರೆಗೆ ಸಾಲದ ರೂಪದಲ್ಲಿ ಆರ್ಥಿಕ ಸಹಾಯವನ್ನು ಒದಗಿಸುತ್ತದೆ. ಇವು ಕೌಶಲ್ಯ ಅಭಿವೃದ್ಧಿ ಕೋರ್ಸ್‌ಗಳು, ಪದವಿಪೂರ್ವ, ಸ್ನಾತಕೋತ್ತರ ಮತ್ತು ಇತರ ವೃತ್ತಿಪರ ಕೋರ್ಸ್‌ಗಳನ್ನು ಮುಂದುವರಿಸಲು ಆದಾಯ ಉತ್ಪಾದನೆಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಕೊಡುಗೆ ನೀಡಿ ಅಂಗವಿಕಲರಿಗೆ ಸಹಾಯ ಮಾಡುತ್ತದೆ. |
| ವಿಶೇಷ ಸಣ್ಣ ಹಣಕಾಸು ಯೋಜನೆ | ಸುಸ್ಥಿರ ಮತ್ತು ಅಂತರ್ಗತ ಜೀವನೋಪಾಯವನ್ನು ಉತ್ತೇಜಿಸಲು ಮತ್ತು ಸಮಾಜದಲ್ಲಿ ದಿವ್ಯಾಂಗರಿಗೆ ಆರಾಮದಾಯಕ ಜೀವನಕ್ಕೆ ಅನುಕೂಲವಾಗುವಂತೆ ಸಣ್ಣ/ಸೂಕ್ಷ್ಮ ವ್ಯಾಪಾರ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಎನ್‌ಎಚ್‌ಎಫ್‌ಡಿಸಿ ಸಾಲವನ್ನು ವಿಸ್ತರಿಸುತ್ತದೆ (ಯೋಜನಾ ವೆಚ್ಚದ ಶೇಕಡಾ 90) ಮತ್ತು ಉಳಿದ ಶೇಕಡಾ 10ರಷ್ಟನ್ನು ಅನುಷ್ಠಾನ ಏಜೆನ್ಸಿಗಳು ಅಥವಾ ಫಲಾನುಭವಿಗಳ ಅನುಷ್ಠಾನದ ಪಾಲುದಾರರಾಗಿ ಕಾರ್ಯನಿರ್ವಹಿಸುವ ಇತರ ಸಂಸ್ಥೆಗಳು ವಂತಿಗೆ ನೀಡಬೇಕು. ಮೂರು ತಿಂಗಳ ನಿಷೇದದ ಅವಧಿ ಸೇರಿದಂತೆ ಪ್ರತಿ ವಿತರಣೆಯ ದಿನಾಂಕದಿಂದ ಗರಿಷ್ಠ ಮೂರು ವರ್ಷಗಳ ಅವಧಿಯಲ್ಲಿ ಸಾಲದ ಮೊತ್ತವನ್ನು ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು. ಯೋಜನೆಯ ಘಟಕ ವೆಚ್ಚವು ₹60,000 ಮೀರಬಾರದು. |

ಆಧಾರ: ಎನ್‌ಹೆಚ್‌ಎಫ್‌ಡಿಸಿ ಜಾಲತಾಣದಲ್ಲಿರುವ ಮಾಹಿತಿ.

© ಭಾರತದ ಲೆಕ್ಕನಿಯಂತ್ರಕರು
ಮತ್ತು
ಮಹಾಲೆಕ್ಕಪರಿಶೋಧಕರು

https://cag.gov.in/ag1/karnataka/en